# ಕೆಂಧೂಳಿ

ಪ್ರಧಾನ ಸಂಪಾದಕ: ತುರುವನೂರು ಮಂಜುನಾಥ

ಹೊಸ ಸವಾಲುಗಳ ಕನಸು

**KENDHOOLI** *Kannada Weekly*

kendhooli.com/e-paper/


**ವ್ಯಾಧಿಗ್ರಸ್ತ ಸಮಾಜವನ್ನು ಆತ್ಮನಿರೀಕ್ಷಣೆಗೆ ಹಚ್ಚುವ 'ಜೈಭೀಮ್'**



ಡಿ.ಉಮಾಪತಿ ಅವರ ಅಂಕಣದಲ್ಲಿ...


ಸಂಪುಟ - 02 | ಸಂಚಿಕೆ - 52 | ಪುಟ - 16 | ರೂ. 16/- | ನವೆಂಬರ್ 11 ರಿಂದ ನವೆಂಬರ್ 17, 2021 MAG(2)Npp/49/2020-21




# ಬಿಟ್‌ಕಾಯಿನ್ ದಂಧೆಗೆ ಯಾರ್ಯಾರ ತಲೆದಂಡ?

## 5 ರಾಜ್ಯ ಚುನಾವಣೆ ಬಿಜೆಪಿ ತಲೆನೋವು

ಎಂ.ಕೆ. ಭಾಸ್ಕರ ರಾವ್ ಅವರ ಅಂಕಣದಲ್ಲಿ...

## ಬಿಬಿಎಂಪಿ ಚುನಾವಣೆಗೆ ಸಿದ್ಧತೆ

## ತಾಯ್ತನ ಮಾರಾಟವೂ ಮತ್ತು ಮಕ್ಕಳ ಮಾರಾಟ ಜಾಲ..!

# ನೋಟು ಅಮಾನೀಕರಣದಿಂದೇನಾದರೂ ಬದುಕು ಬದಲಾಯಿತೇ..?

ಐದು ವರ್ಷಗಳ ಆ ನಿರ್ಧಾರದಿಂದ ಇನ್ನೂ ಕೆಲವರು ಹೊರಬಂದಿಲ್ಲ.ಹೊರ ಬರುವ ಪ್ರಯತ್ನದಲ್ಲಿರುವಾಗಲೇ ಕೊರೊನಾ ಎನ್ನುವ ದೊಡ್ಡ ಹೊಡೆತ ಇಡೀ ಬದುಕನ್ನೇ ತಿಂದು ಹಾಕಿತು. ಹೀಗಿರುವಾಗ ದೇಶದ ಬಹುಪಾಲು ಜನ ಆರ್ಥಿಕವಾಗಿ, ನಿರುದ್ಯೋಗದಿಂದ ಬಳಲುತ್ತಿದ್ದಾರೆ.ಸಣ್ಣ ಉದ್ಯಮಗಳಂತೂ ಏಲ ಏಲ ಹೊದ್ದಾಡುತ್ತಿವೆ.

ತಮ್ಮ ಬದುಕನ್ನು ಕಟ್ಟಿಕೊಳ್ಳಲು ಶತಪ್ರಯತ್ನದಲ್ಲಿದ್ದರೂ ಆರ್ಥಿಕ ವಿಫಲತೆ ಜೀವವನ್ನೇ ತಿನ್ನುತ್ತಿದೆ. ಹೌದು ಕಳೆದ ಐದು ವರ್ಷದ ಹಿಂದೆ ದೇಶದ ದೊರೆ ಪ್ರಧಾನಿ ಮೋದಿ ತಗೆದುಕೊಂಡ ಆ ನಿರ್ಧಾರ ಅದೆಷ್ಟೋ.. ಬದುಕುಗಳ ಮೇಲೆ ಗಾಢ ಪ್ರಭಾವ ಬೀರಿದೆ ಆದರೆ ಅದರ ಅರಿವು ಇಲ್ಲದ ಈ ರಾಜಕಾರಣದ ಹುನ್ನಾರಗಳು ಮಾತ್ರ ಗಹಗಹಿಸಿ ನಗುತ್ತಿವೆ..

ಉದ್ದೇಶ ಏನೇ ಇರಬಹುದು ಆದರೆ ಆ ಉದ್ದೇಶಗಳೇನಾದರೂ ಈಡೇರಿವೆಯೇ ಎನ್ನುವ ಪ್ರಶ್ನೆಗಳಿಗೆ ಉತ್ತರಗಳಂತೂ ಇನ್ನೂ ಸ್ಪಷ್ಟವಾಗಿ ಸಿಗುತ್ತಿಲ್ಲ. ಆದರೆ ದೇಶದ ಆರ್ಥಿಕ ಪ್ರಭಾವದ ಮೇಲಂತೂ ಸಾಕಷ್ಟು ಪ್ರಭಾವ ಬೀರಿದೆ..

2016 ನವೆಂಬರ್ 8 ರಂದು ರಾತ್ರೋರಾತ್ರಿ ನೋಟು ಅಮಾನೀಕರಣವನ್ನು ಘೋಷಿಸಿದರು 500 ಮುಖಬೆಲೆಯ ನೋಟುಗಳನ್ನು ರದ್ದುಗಳಿಸಿ ಆದೇಶ ಹೊರಡಿಸಿದರು. ಇದರ ಉದ್ದೇಶ ಕಪ್ಪುಹಣವನ್ನು ಹೊರತರುವುದು ,ಭ್ರಷ್ಟಾಚಾರವನ್ನು ಬಯಲಿಗೆಳೆಯುವುದು ಮತ್ತು ಭಯೋತ್ಪಾದನೆಯನ್ನು ಮಟ್ಟಹಾಕುವುದು ಆದರೆ ಈ ಮೂರು ಉದ್ದೇಶಗಳೇನಾರೂ ಈಡೇರಿವೆಯೇ? ಎನ್ನುವ ಪ್ರಶ್ನೆಗೆ ಉತ್ತರ ಲಭ್ಯವಾಗುವುದಿಲ್ಲ. ಏಕೆಂದರೆ ದೇಶದಲ್ಲಿ ಭಯೋತ್ಪಾದನೆಯ ಕರಿನೆರಳು ಮತ್ತಷ್ಟು ಹೆಚ್ಚಾಗುತ್ತಿದೆ, ಆರ್ಥಿಕ ಕುಸಿತದಿಂದ ಷೇರುಪೇಟೆ ನಲುಗುತ್ತಿದೆ

ಪ್ರಧಾನಿಯವರು..ಕಪ್ಪುಹಣವನ್ನು ಏನಾದರೂ ಬಯಲಿಗೆಳೆದರಾ ? ಇದರಿಂದ ಉಳ್ಳವರು ಮತ್ತಷ್ಟು ಬಲಿಷ್ಟವಾದರು ಆದರೆ ಶ್ರೀಸಾಮಾನ್ಯರ ಬದುಕು ಮೂರಾಬಟ್ಟೆಯಾಗಿದೆಯಷ್ಟೆ ಉದ್ಯೋಗವಿಲ್ಲದೆ ಸರಿಯಾದ ದುಡುಮೆಯಿಲ್ಲದೆ ಪರಿತಪಿಸುತ್ತಿದ್ದಾರೆ ..

ಅಂದು ಮೋದಿಯ ಈ ನಿರ್ಧಾರದ ಹಿಂದೆ ಶ್ರೀಮಂತರನ್ನು, ಕಪ್ಪು ಹಣ ಹೊಂದಿರುವವರನ್ನು ಶಿಕ್ಷಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂಬ ಭಾವನೆ ಇತ್ತು. ಇದು ಆರ್ಥಿಕ ಅಸಮಾನತೆಯ ವಿರುದ್ಧ ಮೋದಿ ಸಾರಿದ ಸಮರ ಎಂದೇ




ಅವರನ್ನು ನಂಬಿಸಲಾಗಿತ್ತು. ಕಪ್ಪು ಹಣ ಒಂದು ಹೊರಬಂದರೆ ಸಾಕು ಇಡೀ ದೇಶ ಸುಭಿಕ್ಷವಾಗುತ್ತದೆ ಎಂದು ಜನಸಾಮಾನ್ಯರು ನಂಬಿಕೊಂಡಿದ್ದರು.

ನೋಟು ನಿಷೇಧದ ಸಂದರ್ಭದಲ್ಲಿ ಆಡಳಿತ ಪಕ್ಷವು ರಾಜಕೀಯ ಲಾಭ ಪಡೆದುಕೊಳ್ಳಲು ಹೂಡಿದ ಮತ್ತೊಂದು ಬಾಣ ರಾಷ್ಟ್ರೀಯ ಭದ್ರತೆ. ಕಾಶ್ಮೀರದಲ್ಲಿನ ಭಯೋತ್ಪಾದನೆಯನ್ನು ಮಟ್ಟ ಹಾಕಲು ಮತ್ತು ಮಾವೋವಾದಿಗಳ ಕೈಗಳನ್ನು ಆರ್ಥಿಕವಾಗಿ ಕಟ್ಟಿ ಹಾಕಲು ಈ ಕ್ರಮ ಅನಿವಾರ್ಯ ಎನ್ನುವ ಸಿದ್ಧಾಂತ ತೇಲಿ ಬಿಡಲಾಯಿತು. ಇದರಿಂದ ಭಾವುಕರಾದ ಜನ 'ಸೈನಿಕರು ವರ್ಷಪೂರ್ತಿ ದಿನದ 24 ಗಂಟೆಗಳನ್ನೂ ದೇಶದ ರಕ್ಷಣೆಗಾಗಿ ವ್ಯಯಿಸುವಾಗ ನಾವು ಬ್ಯಾಂಕ್ ಮುಂದೆ ಕ್ಯೂ ನಿಲ್ಲುವುದು ದೊಡ್ಡ ತ್ಯಾಗವೇನಲ್ಲ' ಎಂಬ ಭಾವನೆ ಬೆಳೆಸಿಕೊಂಡರು.

ಆದರೆ ನೋಟು ನಿಷೇಧವು ಯಾವ ರೀತಿಯಲ್ಲೂ ಭಯೋತ್ಪಾದನೆಯನ್ನು ಹತೋಟಿಗೆ ತರುವಲ್ಲಿ ಸಹಕಾರಿಯಾಗಲಿಲ್ಲ ಅಥವಾ ಕಪ್ಪು ಹಣವನ್ನೂ ಬಯಲಿಗೆಳೆಯಲಿಲ್ಲ . ಬದಲಿಗೆ ಇದು ಜನರಲ್ಲಿ ಸುಪ್ತವಾಗಿದ್ದ ರಾಷ್ಟ್ರೀಯತೆಯನ್ನು ಬಡಿದೆಬ್ಬಿಸಿ ದೇಶಕ್ಕಾಗಿ ನಾವೂ ಕೊಡುಗೆ ನೀಡುತ್ತಿದ್ದೇವೆ ಎಂಬ ಭ್ರಮೆಯನ್ನು ಸೃಷ್ಟಿಸಿತು.



ಅಂತಿಮವಾಗಿ ತೆರಿಗೆ ಕಳ್ಳತನದಿಂದ ಸಂಗ್ರಹವಾದ ಕೋಟ್ಯಾಂತರ ಹಣ ಜನರ ಕಲ್ಯಾಣಕ್ಕೆ ಬಳಕೆಯಾಗುತ್ತದೆ, ಈ ದೇಶದ ಬಡವರಿಗೂ ಸಂಪನ್ಮೂಲ ಹಂಚಿಕೆಯಾಗುತ್ತದೆ ಎಂಬ ತಾತ್ಕಾಲಿಕ ಭರವಸೆಯೇ ಅನೇಕರಿಗೆ ಮುಖ್ಯವಾಗಿತ್ತು. ಮತ್ತು ಇಂತಹ ಅಪ್ರಾಯೋಗಿಕ ನಂಬಿಕೆಗಳನ್ನು ಜನರ ಮನಸ್ಸಿನಲ್ಲಿ ಬಿತ್ತಲು ಆಡಳಿತ ಪಕ್ಷವು ಅತ್ಯಂತ ಯಶಸ್ವಿಯೂ ಆಗಿತ್ತು.

ಆದರೆ ದೀರ್ಘಾವಧಿಯ ರಾಜಕೀಯ ಪ್ರಭಾವವಳಿಯೊಂದನ್ನು ಸೃಷ್ಟಿಸಿದ ಆರ್ಥಿಕ ನೀತಿಯು ಭ್ರಷ್ಟರನ್ನು ಶಿಕ್ಷಿಸಲು ಅಸಮರ್ಥವಾದದ್ದು,ಸಮ ಸಮಾಜವನ್ನು ಸೃಷ್ಟಿಸದ್ದು, ಆದಾಯದ ಸಮಾನ ಹಂಚಿಕೆಗೆ ಸಾಧ್ಯವಾಗದ್ದು, ಭಯೋತ್ಪಾದನೆಯನ್ನು ದುರ್ಬಲಗೊಳಿಸದ್ದು ಐದು ವರ್ಷಗಳ ನಂತರ ಸಾರ್ವಜನಿಕ ನೆನಪಿನಿಂದ ಮಾಸಿದ್ದರೂ.. ಇತಿಹಾಸದಲ್ಲಿ ಇಂದು ರಾಜಕೀಯ ಬ್ಲಂಡರ್ ಆಗಿ ದಾಖಲುಗೊಳ್ಳುವುದನ್ನು ತಡೆಯಲು ಮಾತ್ರ ಸಾಧ್ಯವಿಲ್ಲ.

ಕಳೆದ ತಿಂಗಳು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಆರ್ಥಿಕ ಸಂಶೋಧನಾ ವಿಭಾಗದ ವರದಿಯು ಆರ್ಥಿಕ ವರ್ಷದಲ್ಲಿ ಭಾರತದ ಅನೌಪಚಾರಿಕ ಆರ್ಥಿಕತೆಯು ಕುಗ್ಗಿದೆ ಎಂದು ಹೇಳಿದೆ.

ದೇಶದ ಅನೌಪಚಾರಿಕ ಆರ್ಥಿಕತೆಯು ಮೂರು ವರ್ಷಗಳ ಹಿಂದೆ ಜಿಡಿಪಿಯ ಯ 52% ರಿಂದ ಆರ್ಥಿಕ ವರ್ಷದ 21 ರಲ್ಲಿ 15–20% ಕ್ಕೆ ಕುಗ್ಗಿದೆ ಎಂದು ಸಂಶೋಧನೆ ತೋರಿಸಿದೆ. ಅನೌಪಚಾರಿಕ ಆರ್ಥಿಕತೆಯು ಹೆಚ್ಚು ಹಾನಿಗೊಳಗಾದ ಕಾರಣ ಈ ರೂಪಾಂತರಕ್ಕೆ ಕಾರಣ, ಅದರಲ್ಲಿ ನೋಟು ಅಮಾನ್ಯೀಕರಣ ಮತ್ತು ಜಿಎಸ್‌ಟಿಯ ಅನುಷ್ಠಾನದಿಂದಾಗಿ. ನಂತರ ಆಗಿರುವ ಬದಲಾವಣೆಗಳ ಕುರಿತು ಆರ್ಥಿಕ ತಜ್ಞ ಎನ್ ಆರ್ ಭಾನುಮೂರ್ತಿ ಹೀಗೆ ಹೇಳಿದ್ದಾರೆ." ಮೋದಿ 2014ರಲ್ಲಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದಾಗ ದೇಶದ ಜಿಡಿಪಿ ಶೇ.7.41ರಷ್ಟಿತ್ತು. 2015ರಲ್ಲಿ ಶೇ.8ಕ್ಕೇರಿತು. 2016ರಲ್ಲಿ ಶೇ.8.26ರಷ್ಟು ದಾಖಲಾಯಿತು. 2016ರಲ್ಲಿ ಮೋದಿ ಸರ್ಕಾರ ಆರ್ಥಿಕತೆಯ ಏಳು–ಬೀಳುಗಳ ಅಂದಾಜು ಮಾಡದೇ ಅಪನಗದೀಕರಣ ಜಾರಿ ಮಾಡಿತು. ಇದರ ಪರಿಣಾಮವಾಗಿ 2017 ರಲ್ಲಿ ಜಿಡಿಪಿ ಶೇ.6.80ಕ್ಕೆ ಕುಸಿಯಿತು. ವಾರ್ಷಿಕ ಸರಾಸರಿ ಶೇಕಡ 1ರಷ್ಟು ಹೆಚ್ಚಳವು ಸೇರಿದರೆ ಒಟ್ಟಾರೆ ಜಿಡಿಪಿ ಕುಸಿತದ ಪ್ರಮಾಣವು 2.46ರಷ್ಟು. ಅದಾದ ನಂತರ ಆರ್ಥಿಕತೆ ಚೇತರಿಸಿಕೊಳ್ಳಲೇ ಇಲ್ಲ. 2018ರಲ್ಲಿ ಶೇ.6.53ಕ್ಕೆ, 2019ರಲ್ಲಿ ಶೇ.4.04 ಕುಸಿಯಿತು. ಇದು ಉದಾರೀಕರಣೋತ್ತರ ಮತ್ತು ಕೋವಿಡ್ ಪೂರ್ವ ಆರ್ಥಿಕತೆಯಲ್ಲಿ 1997ರನ್ನು ಬಿಟ್ಟರೆ, ಅತಿ ಹೆಚ್ಚು ಪ್ರಮಾಣದ ಆರ್ಥಿಕ ಕುಸಿತಕಂಡಿದೆ."

ಕೋವಿಡ್ ನಿಯಂತ್ರಣಕ್ಕೆ ಬರುತ್ತಿದ್ದು ಆರ್ಥಿಕತೆಯು ಚೇತರಿಸಿಕೊಳ್ಳುತ್ತಿದೆ. ಆರ್ಥಿಕತೆ ಚೇತರಿಕೆಯಿಂದ 2021ನೇ ವಿತ್ತೀಯ ವರ್ಷದಲ್ಲಿ ಜಿಡಿಪಿ ಶೇ.8.5ರಷ್ಟು ಬೆಳವಣಿಗೆ ದಾಖಲಿಸುವ ಅಂದಾಜು ಇದೆ. ಈ ಬೆಳವಣಿಗೆಯು ಶೇ.12ರಷ್ಟು ವಾಸ್ತವಿಕ ಕುಸಿತದ ಆಧಾರದ ಮೇಲಿನ ಲೆಕ್ಕಾಚಾರ. ವಾಸ್ತವಿಕವಾಗಿ ಜಿಡಿಪಿ ಬೆಳವಣಿಗೆಯು ಅಪನಗದೀಕರಣೋತ್ತರ ಪ್ರಮಾಣಕ್ಕೆ ಹೋಲಿಸಿದರೆ

## ಮನ ಮಿಡಿತ

ತುರುವನೂರು ಮಂಜುನಾಥ
ಪ್ರಧಾನ ಸಂಪಾದಕ


ಶೇ.5 ರಿಂದ 6ರಷ್ಟು ಕಡಿಮೆಯೇ.ಬೆಳೆಯುತ್ತಿರುವ ಆರ್ಥಿಕ ರಾಷ್ಟ್ರಗಳ ಪೈಕಿ ಭಾರತದ ಅಭಿವೃದ್ಧಿಯು ತ್ವರಿತಗತಿಯಲ್ಲಿ ಸಾಗುತ್ತಿತ್ತು. ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗಿನ ಸರಾಸರಿ ಜಿಡಿಪಿ ಬೆಳವಣಿಗೆಯು ಶೇ.7ರಷ್ಟಿತ್ತು.

ಆದರೆ, ಮೋದಿ ಸರ್ಕಾರದ ಅವಧಿಯಲ್ಲಿ ಆರ್ಥಿಕ ಬೆಳವಣಿಗೆಯು ಸುಸ್ಥಿರವಾಗಿಲ್ಲ. ಎರಡು ವರ್ಷಗಳಲ್ಲಿ ಕೋವಿಡ್ ಕಾರಣಕ್ಕೆ ಆರ್ಥಿಕತೆ ಕುಸಿದಿದೆಯಾದರೂ ಕೋವಿಡ್ ಪೂರ್ವದ



ಅವಧಿಯಲ್ಲಿ ಆರ್ಥಿಕತೆ ಕುಸಿಯಲು ಮೋದಿ ಸರ್ಕಾರ ಜಾರಿಗೆ ತಂದ ಅಪನಗದೀಕರಣವೇ ಕಾರಣ. ಆ ತಪ್ಪನ್ನು ಮುಚ್ಚಿಕೊಳ್ಳುವ ಪ್ರಯತ್ನದಲ್ಲಿರುವ ಮೋದಿ ಸರ್ಕಾರವು ಷೇರುಪೇಟೆ ಕುಸಿಯದಂತೆ ನೋಡಿಕೊಳ್ಳುತ್ತಿದೆ. ಇದಕ್ಕಾಗಿ, ವಾರ್ಷಿಕ 1.40 ಲಕ್ಷ ಕೋಟಿ ರುಪಾಯಿಗಳ ಕಾರ್ಪೊರೇಟ್ ತೆರಿಗೆ ಕಡಿತ, ಉತ್ಪಾದನೆ ಆಧಾರಿತ ಸಹಾಯಧನ ಸೇರಿದಂತೆ ಹಲವು ಪ್ರೋತ್ಸಾಹಗಳನ್ನು ಉದ್ಯಮ ವಲಯಕ್ಕೆ ನೀಡಿದೆ. ಇದರ ಅಂತಿಮ ಲಾಭವು ಉದ್ಯಮಿಗಳಿಗೆ ಆಗುತ್ತದೆಯೇ ಹೊರತು, ನಿತ್ಯವೂ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನಸಾಮಾನ್ಯರಿಗಂತೂ ಯಾವುದೇ ಲಾಭವೂ ಇಲ್ಲ ಎನ್ನುವ ಸತ್ಯ ಅರಿವಾಗಿದೆ.

ಮೋದಿ ರೈತರ ಜೇಬಿಗೆ ಹಾಕುವ ಬಿಡಿಗಾಸನ್ನು ನಂಬಿರುವ ರೈತರು ಮೋದಿಯೇ ಶ್ರೇಷ್ಠ ಎಂದುಕೊಂಡಿದ್ದಾರೆ. ಅತ್ತ ಜೇಬಿಗೆ ಇಳಿಸಿ ಇತ್ತ ಕಿತ್ತುಕೊಳ್ಳುತ್ತಿರುವ ಬದುಕಿನ ಬಗ್ಗೆ ಅರಿವಿಲ್ಲದಂತಾಗಿದೆ. ಹೀಗಿರುವಾಗ ಶ್ರೀಸಾಮಾನ್ಯನ ಬದುಕು ಹೇಗಾಗಬೇಡ ಹೇಳಿ..? ಹೀಗಾಗಿಯೇ ಇಂದು ನಿತ್ಯ ಬೆಲೆ ಏರಿಕೆಯಾಗುತ್ತಲೇ ಇದೆ.ಆದರೆ ಅದನ್ನು ಪ್ರತಿಭಟಿಸುವ ಪ್ರತಿಪಕ್ಷಗಳು ಮಾತ್ರ ಸತ್ತು ಹೋಗಿವೆ. ಹೀಗಾಗಿ ದೇಶದಲ್ಲಿ ಯಾವುದೇ ನಿರ್ಧಾರಕ್ಕೂ ಪ್ರತಿಭಟನೆ ಎನ್ನುವ ಸೊಲ್ಲೆ ಇಲ್ಲ. ಇದ್ದ ಕಮ್ಯೂನಿಷ್ಟ ಪಕ್ಷವೂ ಕೂಡ ಈಗ ತನ್ನದೇ ಗೊಂದಲ ಮತ್ತು ಒಡಕುಗಳಿಂದ ಪರಿತಪಿಸುತ್ತಿದೆ. ಹೀಗಿರುವಾಗ ಪ್ರತಿಭಟನೆಯ ಬೆಳಕು ಇನ್ನೆಲ್ಲಿ ಹೇಳಿ? ಅವರು ಮಾಡಿದ್ದನ್ನು ಸಾಮಾನ್ಯ ನಿತ್ಯವೂ.. ಅನುಭವಿಸಲೇ ಬೇಕು!.





## ಪ್ರಿಯ ಓದುಗರೆ

'ಕೆಂಧೂಳಿ' ಪತ್ರಿಕೆಯನ್ನು ಒಂದು ಒಳ್ಳೆ ಉದ್ದೇಶದಿಂದ ಆರಂಭಿಸಲಾಗಿದೆ, ಗುಣಮಟ್ಟ,ಓದುಗರಿಗೆ ಅಗತ್ಯ ವಿಶ್ಲೇಷಣಾತ್ಮಕ ವರದಿಗಳು ಸೇರಿದಂತೆ ಯಾವುದರಲ್ಲೂ ರಾಜೀಯಾಗದೆ ತನ್ನ ಗುಣಾತ್ಮಕವನ್ನು ಕಾಯ್ದುಕೊಂಡು ನಿಮ್ಮ ಮುಂದೆ ಬರಲಿದೆ. ಹೀಗಾಗಿ ಪತ್ರಿಕೆಗೆ ಓದುಗರೆ ಅಗತ್ಯವಾಗಿರುವುದರಿಂದ ಆದಷ್ಟು ಕೊಂಡು ಓದಿ ಪತ್ರಿಕೆಯನ್ನು ಬೆಳಸಿ ಎನ್ನುವುದು ನಮ್ಮ ಕಳಕಳಿಯ ಮನವಿ. ಅಲ್ಲದೆ ಪತ್ರಿಕೆ ಬೆಳವಣಿಗೆಗೆ ಆರ್ಥಿಕ ಸಹಾಯವೂ ಅಷ್ಟೆ ಅಗತ್ಯವಾಗಿದೆ, ಈ ಕಾರಣಕ್ಕಾಗಿ ತಾವು ಚಂದಾದಾರ ರಾಗುವ ಮೂಲಕ ತಮ್ಮ ಪತ್ರಿಕೆ ಬೆನ್ನೆಲುಬಾಗಿ ನಿಂತುಕೊಳ್ಳಬೇಕು ಎನ್ನುವುದು ತಮ್ಮ ಬೇಡಿಕೆ. –ಪ್ರಧಾನ ಸಂಪಾದಕ

| | |
|---|---|
| ವಾರ್ಷಿಕ | 1100 |
| ಅರ್ಧವಾರ್ಷಿಕ | 600 |
| ಎರಡು ವರ್ಷ | 2200 |
| ಆರು ವರ್ಷ | 6600 |
| ಪೋಷಕರು | 10,000 |
| ಮಹಾಪೋಷಕರು | 20,000 |

ಬೇಕಾಗಿದ್ದಾರೆ : 'ಕೆಂಧೂಳಿ' ವಾರ ಪತ್ರಿಕೆಗೆ ಜಿಲ್ಲಾ ವರದಿಗಾರರು/ಏಜೆಂಟರು ಬೇಕಾಗಿದ್ದಾರೆ. ಎಲ್ಲಾ ಜಿಲ್ಲೆಗಳಿಂದಲೂ ವರದಿಗಾರರನ್ನು ನೇಮಕ ಮಾಡಲಾಗುತ್ತಿದೆ ಆಸಕ್ತರು ಈ ದೂರವಾಣಿಗೆ ಸಂಪರ್ಕಿಸಬಹುದು. 9900633109






ಪ್ರಧಾನ ಸಂಪಾದಕ
ತುರುವನೂರು ಮಂಜುನಾಥ

ಪುಟ ವಿನ್ಯಾಸ
ಸೂರ್ಯಕುಮಾರ್ ಜಿ.ಎನ್.

# ಬೆಲೆ ಏರಿಕೆ ಬರೆ; ಮೌನ ವಹಿಸಿರುವ ಪ್ರತಿಪಕ್ಷಗಳು

ಆರ್ಥಿಕ ಸಂಕಷ್ಟದಲ್ಲಿರುವ ಶ್ರೀಸಾಮಾನ್ಯನ ಜೇಬಿಗೆ ನಿರಂತರವಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿವಿಧ ರೀತಿಯಿಂದ ಏರಿಕೆಗಳ ಬಿಸಿ ಮುಟ್ಟಿಸುತ್ತಲೇ ಇವೆ.. ತೈಲ ಬೆಲೆ ನಿರಂತರ ಏರಿಕೆ ನಂತರ ಉಪ ಚುನಾವಣೆಯಲ್ಲಿ ಜನರ ಉತ್ತರಕ್ಕೆ ತತ್ತರಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಒಂದಿಷ್ಟು ಜನರಿಗೆ ಕಣ್ಣೊರಿಸುವಂತೆ ಇಳಿಕೆ ಮಾಡಿತು ಆದರೆ ಮತ್ತೊಂದು ಕಡೆ ಖಜಾನೆ ತುಂಬಿಸಿಕೊಳ್ಳಲು ತೆರಿಗೆ ಎನ್ನುವ ಬಲೆ ಬೀಸಿದೆ.

ಬಡ ಮತ್ತು ಮಧ್ಯಮ ವರ್ಗದವರ ಬೆನ್ನಿಗೆ 'ಕರಭಾರ' ಹೇರುತ್ತಿವೆ. ಕೋವಿಡ್‌ನ ದುರಿತ ಕಾಲದಲ್ಲಿ ಸರ್ಕಾರ ಹಾಕಿದ ಹೊರೆ ತಾಳದೇ ಶ್ರೀಸಾಮಾನ್ಯರು ನಿತ್ಯವೂ ಕಣ್ಣೀರಿಡುವ ಸ್ಥಿತಿ ನಿರ್ಮಾಣವಾಗಿದೆ.

ಹೆಚ್ಚುವರಿ ಸಾಲ ಕೊಡಿಸುವ ಮುನ್ನ ಕೇಂದ್ರ ಸರ್ಕಾರ 'ಸುಧಾರಣೆ'ಗಳ ಹೆಸರಿನಲ್ಲಿ ನಾಲ್ಕು ಷರತ್ತುಗಳನ್ನು ವಿಧಿಸಿತು. ಸರ್ಕಾರ ವಿಧಿಸಿರುವ ಷರತ್ತುಗಳೆಂದರೆ ವಿದ್ಯುತ್ ಸರಬರಾಜು ಖಾಸಗೀಕರಣ, ನಗರ ಸ್ಥಳೀಯ ಸಂಸ್ಥೆಗಳ ಆದಾಯ ಪ್ರಮಾಣ ಹೆಚ್ಚಿಸುವುದು, ಆಹಾರ ಕಲ್ಯಾಣ ಯೋಜನೆಗಳನ್ನು ರಾಷ್ಟ್ರೀಯ ಗ್ರಿಡ್‌ಗೆ ಜೋಡಿಸುವ 'ಒನ್ ನೇಷನ್ ಒನ್ ಕಾರ್ಡ್' ಇವುಗಳನ್ನು ರಾಜ್ಯ ಸರ್ಕಾರಗಳು ಜಾರಿಗೆ ತರಬೇಕು. ಇದರಿಂದಾಗಿ ನೀರು, ವಿದ್ಯುತ್, ನಿವೇಶನ, ಕಟ್ಟಡಗಳ ಮೇಲಿನ ತೆರಿಗೆ ಸದ್ದಿಲ್ಲದೇ ಹೆಚ್ಚಿಸಲಾಗಿದೆ. ಅಲ್ಲದೆ, ಸ್ಥಳೀಯ ಸಂಸ್ಥೆಗಳ ಬಜೆಟ್ ಗಾತ್ರವನ್ನೂ ಪರಿಷ್ಕರಿಸಲಾಗಿದೆ. ಅಲ್ಲದೆ, ಆದಾಯ ಸಂಗ್ರಹಕ್ಕಾಗಿ ಸಂಚಾರಿ ಪೊಲೀಸರು ಮತ್ತು ಸಾರಿಗೆ ಇಲಾಖೆ ಸಿಬ್ಬಂದಿ ವಾಹನ ಸವಾರರನ್ನು ಕಂಡ ಕಂಡಲ್ಲಿ ಅಡ್ಡಗಟ್ಟಿ ಪೀಡಿಸುತ್ತಿರುವುದೂ ಹೆಚ್ಚಳವಾಗಿದೆ.

ಈ ಮೂಲಕ ಬಡವರ ಕಣ್ಣೀರು ಈಗ ಬೊಕ್ಕಸ ತುಂಬಿಸುತ್ತಿದೆ.

ಇದೆಲ್ಲದರ ಮಧ್ಯೆ ಈಗ ಮತ್ತಷ್ಟು ದುಬಾರಿ ಜೀವನಕ್ಕೆ ಸಾಮಾನ್ಯನು ಕಾಲಿಡಬೇಕಿದೆ. ಅವೆಲ್ಲವನ್ನೂ ಸಹಿಸಿಕೊಂಡೆ ಜೀವನ ಸಾಗಿಸಬೇಕಿದೆ

ಈಗ ಇದೆಲ್ಲದರ ಮಧ್ಯೆ ಸಿಲಿಂಡರ್ ಬೆಲೆ ಏರಿಕೆ..ದಿನನಿತ್ಯದ ವಸ್ತುಗಳ ಬೆಲೆ ಏರಿಕೆ ಪರಿಣಾಮ ಈಗ ಹೋಟೆಲ್ ತಿಂಡಿಗಳ ಬೆಲೆ ಏರಿಕೆಯಾಗಿದೆ. ಆಟೋಗಳ ಬೆಲೆ ಏರಿಕೆಯಾಗಿದೆ. ಬಹುಶಃ ಈ ದೇಶದಲ್ಲಿ ಬೆಲೆ ಏರಿಕೆ ಆಗದಿದ್ದದ್ದು ಈ ಎರಡು ಈಗ ಅವು ಬೆಲೆ ಏರಿಕೆಯಿಂದ ಅಕ್ಷರಶಃ ಸಾಮಾನ್ಯಜನರ ಬದುಕಿಗೆ ಬರೆ ಎಳೆದಂತಾಗಿದೆ.

ಹೀಗಾಗಿ ದಿನಸಿ ವಸ್ತು ತರಕಾರಿ, ಸಿಲಿಂಡರ್ ಬೆಲೆ ಹೆಚ್ಚಳದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಹೋಟೆಲ್‌ಗಳ ಊಟ, ತಿಂಡಿಗಳ ಬೆಲೆ ಹೆಚ್ಚಳವಾಗಲಿದೆ.

ಕೊರೋನಾದಿಂದ ಹೋಟೆಲ್ ಉದ್ಯಮ ಆರ್ಥಿಕ ಸಂಕಷ್ಟಕ್ಕೆ ತಲುಪಿದೆ. ಆದರೆ, ಕೊರೋನಾ ಬಳಿಕೆ ಇನ್ನೇನು ಚೇತರಿಸಿಕೊಳ್ಳಬೇಕು ಎನ್ನುವ ಹಂತದಲ್ಲಿ ಕಳೆದ ಆರು ತಿಂಗಳಿನಿಂದ ವಾಣಿಜ್ಯ ಗ್ಯಾಸ್ ಸಿಲಿಂಡರ್ ಬೆಲೆ ಹೆಚ್ಚಾಗಿದೆ. ಹೀಗಾಗಿ ಇನ್ನಷ್ಟು ಆರ್ಥಿಕ ತೊಂದರೆಗೆ ಸಿಲುಕುವ ಮುನ್ನ ಅನಿವಾರ್ಯವಾಗಿ ಊಟ, ತಿಂಡಿ ಮತ್ತು ಕಾಫಿ ಬೆಲೆಗಳಲ್ಲಿ ಶೇ.5ರಿಂದ 10ರವರೆಗೂ ಹೆಚ್ಚಳವಾಗಿದೆ ಹೀಗೆ ಆದರೆ ಸಾಮಾನ್ಯನ ಬದುಕು ಹೇಗೆ ಆಗುತ್ತದೆ ಅಚ್ಚೇ ದಿನ..



ಪ್ರಸ್ತುತ ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್ ಬೆಲೆ 2 ಸಾವಿರ ರು. ತಲುಪಿದೆ. ಅದಕ್ಕೆ ಶೇ.18 ರಷ್ಟು ಸರಕು ಮತ್ತು ಸಾಗಣೆ ತೆರಿಗೆ ವಿಧಿಸಲಾಗುತ್ತಿದ್ದು, ಪ್ರತಿ ಸಿಲಿಂಡರ್‌ಗೆ 2,230 ರು. ಪಾವತಿ ಮಾಡುತ್ತಿದ್ದೇವೆ. ಅಲ್ಲದೆ, ಎಲ್ಲ ರೀತಿಯ ತರಕಾರಿಗಳ ಬೆಲೆ ಹೆಚ್ಚಳವಾಗಿದೆ. 50 ರು.ಗಳಿಗಿಂತ ಕಡಿಮೆ ಬೆಲೆಯಲ್ಲಿ ಯಾವುದೇ ತರಕಾರಿ ಸಿಗುತ್ತಿಲ್ಲ ಇದರಿಂದ ಬೆಲೆ ಏರಿಕೆ ಅನಿವಾರ್ಯವಾಗಿದೆ ಎಂದು ಅವರು ತಿಳಿಸಿದರು.

ಬೆಂಗಳೂರು ನಗರದಲ್ಲಿ 9 ಸಾವಿರ ಹೋಟೆಲ್‌ಗಳು ಸೇರಿ ರಾಜ್ಯದಲ್ಲಿ ಸುಮಾರು 50 ಸಾವಿರ ಹೋಟೆಲ್‌ಗಳಿವೆ. ಕೊರೋನಾ ಕಾರಣದಿಂದ ಕಳೆದ ಎರಡು ವರ್ಷಗಳಿಂದ ಹೋಟೆಲ್ ತಿಂಡಿಗಳ ಮೇಲೆ ಬೆಲೆ ಏರಿಕೆಯಾಗಿಲ್ಲ. ಪ್ರಸ್ತುತ ಬೆಲೆ ಏರಿಕೆ ಮಾಡುವುದಕ್ಕೂ ಹೋಟೆಲ್ ಮಾಲೀಕರಲ್ಲಿ ಧೈರ್ಯ ಇಲ್ಲ. ಆದರೆ, ಇಂಧನ ಬೆಲೆ ಹೆಚ್ಚಳ ಮತ್ತು ಕಳೆದ ಕೆಲ ತಿಂಗಳಿಂದ ದಿನಸಿ, ತರಕಾರಿ, ಅಡುಗೆ ಅನಿಲ ಸೇರಿದಂತೆ ಅಗತ್ಯ ವಸ್ತುಗಳ ದರ ಏರಿಕೆಯಾಗಿದೆ. ನಷ್ಟಸರಿದೂಗಿಸುವುದಕ್ಕಾಗಿ ಬೆಲೆ ಏರಿಕೆ ಮಾಡಿದೆ ಆದರೆ ಇದು ಹೋಟೆಲ್‌ಗಳ ಅನಿವಾರ್ಯ ಪರಿಸ್ಥಿತಿ.

ನಿಜ ಆದರೆ ಇವೆಲ್ಲವುಗಳ ನಿಯಂತ್ರಣ ಮಾಡಬೇಕಾದ ಸರ್ಕಾರಗಳು ನಿರಂತರವಾಗಿ ಬೆಲೆ ಏರಿಕೆ ಮಾಡುತ್ತಲೇ ಇರುವಾಗ ಸರಿದೂಗಿಸಲು ಹೋಟೆಲ್‌ಗಳ ನಿರ್ಧಾರವೇನೋ ಸರಿ ಆದರೆ ಶ್ರೀಸಾಮಾನ್ಯನ ಗತಿ ಏನು? ಇದಕ್ಕೆ ಉತ್ತರಿಸಬೇಕಾದ ಸರ್ಕಾರ ಜಡವಸ್ತುವಿನಂತೆ ಕೂತಿದೆ.

ಸಾಮಾನ್ಯವಾಗಿ ಎಲ್ಲಾ ವಸ್ತುಗಳ ಮೇಲಿನ ರೇಟ್ ಹೆಚ್ಚಳವಾದರೆ ಸಹಜವಾಗಿಯೇ ಹೋಟೆಲ್ ಸೇರಿದಂತೆ ಬಹುತೇಕ ಕ್ಷೇತ್ರದ ದರಗಳು ಏರಿಕೆಯಾಗುತ್ತವೆ. ಇದನ್ನು ಹಿಡಿತದಲ್ಲಿ ಇಟ್ಟುಕೊಳ್ಳಬೇಕಾದರೆ ಸರ್ಕಾರ ತೈಲ ಹಾಗೂ ತೆರಿಗೆಯನ್ನು ಕಡಿತಗೊಳಿಸಬೇಕಾಗುತ್ತದೆ. ಹೀಗೆ ಒಂದು ಕಡೆಯಿಂದ ಹೋಟೆಲ್ ದರ ಏರಿಕೆಯಾಗಿತ್ತಿದ್ದರೆ ಇತ್ತ ಆಟೋ ದರ ಕೂಡ ಹಚ್ಚಳವಾಗಿದೆ. ಸಾರಿಗೆ ಪ್ರಾಧಿಕಾರದಿಂದ ಆಟೋ ದರ ಪರಿಷ್ಕರಿಸಿ ಆದೇಶ ಹೊರಡಿಸಿದೆ 90 ದಿನಗಳ ಒಳಗಾಗಿ ಅಂದರೆ ಫೆಬ್ರವರಿ ಅಂತ್ಯದ ಒಳಗಾಗಿ ಮೀಟರ್ ಗಳನ್ನು ಬದಲಾಯಿಸಲು ಅವಕಾಶ ಕಲ್ಪಿಸಲಾಗಿದೆ.

ಒಟ್ಟಿನಲ್ಲಿ ಕೋವಿಡ್ ಸಂದರ್ಭದಲ್ಲಿ ಎಷ್ಟೋ ಹೋಟೆಲ್ ಗಳು ಮುಚ್ಚಿ ಹೋಗಿವೆ. ಕೆಲ ಹೋಟೆಲ್ ಗಳು ಆಸ್ಪತ್ರೆ, ಮಾಲ್ ಗಳಾಗಿ ಮಾರ್ಪಾಡಾಗಿವೆ. ಹೋಟೆಲ್ ಮಾಲೀಕರ ಸಂಕಷ್ಟಕ್ಕೆ ಸಿಲುಕಿಕೊಂಡಿರೋದು ಒಂದೆಡೆಯಾದರೆ ಗ್ರಾಹಕರಿಗೆ ಇದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಇದರಿಂದ ನಿಜಕ್ಕೂ ಸಾರ್ವಜನಿಕರನ್ನು ಕಂಗಾಲಾಗಿದ್ದಾರೆ. ಈ ಎಲ್ಲವನ್ನೂ ನೋಡಿಕೊಂಡು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ರಾಜಕಾರಣದ ತೆವಲುಗಳನ್ನು ತೀರಿಸಿಕೊಳ್ಳುವ ಮಾತುಗಳನ್ನಾಡುತ್ತಿದ್ದಾರೆ. ಒಬ್ಬರ ಮೇಲೆ ಒಬ್ಬರು ಒಂದು ಪಕ್ಷದ ಮೇಲೆ ಮತ್ತೊಂದು ಪಕ್ಷ ಆರೋಪ–ಪ್ರತ್ಯಾರೋಪದಲ್ಲೇ ತೊಡಗಿವೆ. ಇವೆಲ್ಲವುಗಳನ್ನು ವಿರೋಧಿಸಿ ಪ್ರತಿಭಟನೆಗಳನ್ನು ಮಾಡಬೇಕಾದ ಪ್ರತಿಪಕ್ಷಗಳು ತಾಕತ್ತಿಲ್ಲದೆ ತಮ್ಮ ಒಳಜಗಳಗಳಗಳನ್ನು ಬಗೆಹರಿಸಿಕೊಳ್ಳುವಲ್ಲಿಯೇ ನಿರತವಾಗಿವೆ. ಹೀಗಾಗಿ ಈ ದೇಶದ ಜನರ ಬದುಕು ನಿಜಕ್ಕೂ ದುಸ್ತರವಾಗಿದೆ. ಪ್ರಶ್ನಿಸುವ ಮನಸ್ಸುಗಳು ಗೊಂದಲದ ಗೂಡಾದಾಗ ಇನ್ನು ಪ್ರಶ್ನೆ..ಪ್ರತಿಭಟನೆಗಳಿಗೆಲ್ಲಿ ಮನಸ್ಸು ಮಾಡಲಿವೆ ಇದು ಈ ದೇಶದ ದುರಂತವೇ ಸರಿ.

# ಏರಿಕೆಗೆ ಕಿಮ್ಮತ್ತು ಕೊಡದೆ ಇಳಿಕೆಗೆ ಬೊಬ್ಬೆ ಹೊಡೆದುಕೊಂಡ ಚಾನಲ್‌ಗಳು

**ಹಿಟ್ & ರನ್**

ಇದನ್ನು ಬಹಳ ಸಾರಿ ಹೇಳಿದ್ದೇನೆ ಮತ್ತೇ ಮತ್ತೇ ಬರೆಯುವ ಪರಿಸ್ಥಿತಿಯೂ ನಿರ್ಮಾಣವಾಗುತ್ತಿದೆ. ಒಂದು ಸುದ್ದಿಯನ್ನು ಹೇಗೆ ಯಾವಾಗ ಮಾಡಿದರೆ ಅದು ಜನರಿಗೆ ಅನುಕೂಲವಾಗಬಹುದು ಎನ್ನುವ ಮನೋಭಾವನೆ ಬಹುಶಃ ಇತ್ತೀಚೆಗೆ ಟಿವಿಗಳಿಗೆ ಜ್ಞಾನವೇ ಇಲ್ಲದಂತಾಗಿದೆ. ಯಾವುದು ಜನರಿಗೆ ಬೇಕು ಯಾವುದು ಬೇಡ ಎನ್ನುವುದನ್ನು ಟಿವಿಗಳೇ ತೀರ್ಮಾನ ಮಾಡಿಬಿಡುತ್ತವೆ .

ಬೇಡವಾದದ್ದನ್ನು ಪದೇ ಪದೇ ಪ್ರಸಾರ ಮಾಡುವ ಮೂಲಕ ಜನರ ಅಕ್ರೋಶಕ್ಕೂ ಕಾರಣವಾಗಿವೆ. ಹೌದು ಇತ್ತೀಚೆಗೆ ಇಂತ ಹಲವಾರು ಸುದ್ದಿಗಳ ವಿಷಯದಲ್ಲಿ ಅದು ನಿಜವೂ ಆಗಿದೆ. ತೈಲ ಬೆಲೆ ಏರಿಕೆಯಾದಾಗ ಆ ಸುದ್ದಿಯನ್ನು ಅದೊಂದು ದಿನ ನಿತ್ಯದ ಪ್ರಕ್ರಿಯೇ ಎನ್ನುವ ರೀತಿಯಲ್ಲಿ ಸ್ಕ್ರೋಲಿಂಗ್‌ನಲ್ಲಿ ಬಿಟ್ಟು ಸುಮ್ಮನಾಗಿ ಬಿಡುತ್ತಿದ್ದವು..ತೈಲ ಬೆಲೆ ಏರಿಕೆಯಾಗಿದೆ ಇಷ್ಟೊಂದು ತೈಲ ಬೆಲೆ ಏರಿಕೆಗೆ ಕಾರಣವೇನು ಇದರ ವಿರುದ್ಧ ಪ್ರತಿಪಕ್ಷಗಳು ಯಾಕೆ ಮೌನ ವಹಿಸಿವೆ ಸಾರ್ವಜನಿಕರು ಏನು ಮಾಡಬಹುದು ಎನ್ನುವ ಕುರಿತು ಅರಿವು ಮೂಡಿಸುವ ಯಾವುದೇ ಕಾರ್ಯಕ್ರಮಗಳನ್ನು ಮಾಡಲಿಲ್ಲ .

ಆದರೆ ಯಾಕೆ ತೈಲ ಬೆಲೆ ಹೆಚ್ಚಾಯಿತು ಎನ್ನುವ ಕುರಿತು ಒಂದೆರಡು ಈ ವಿವರವಾಗಿ ಪ್ರಸಾರ ಮಾಡಿದವು ಅದರ ಕಾರಣ ಕಾಂಗ್ರೆಸ್ ಪಕ್ಷ ಹಿಂದೆ ಮಾಡಿದ ತಪ್ಪಿಗೆ ಈಗ ಅದನ್ನು ಅನುಭವಿಸಬೇಕಾಗಿದೆ ಎನ್ನುವ ಬಗ್ಗೆ ವಿಶೇಷ ಸುದ್ದಿಯನ್ನಾಗಿ ಪ್ರಸಾರ ಮಾಡಿದವು ಅದನ್ನು ಹೊರೆತು ಪಡೆಸಿದರೆ ಯಾವುದೇ ವಿಶೇಷ ಸುದ್ದಿಯನ್ನು ಮಾಡಲಿಲ್ಲ



ಆದರೆ ನೋಡಿ ತೈಲ ಬೆಲೆ ಇಳಿಕೆಯಾಗುತ್ತಿದ್ದಂತೆ ನಾ ಮುಂದು.. ತಾ ಮುಂದು ನಾವೆ ಮೊದಲು ಬ್ರೇಕಿಂಗ್ ಹಾಕಿದ್ದು ಎನ್ನುವ ರೀತಿಯಲ್ಲಿ ಪೈಪೋಟಿಗೆ ಬಿದ್ದು ತೈಲ ಬೆಲೆ ಇಳಿಕೆ ಎಂದು ಆಂಕರ್‌ಗಳ ಅರಚಾಟವೋ ಅರಚಾಟ.. ಮೋದಿ ಕೊನೆಗೂ ತೈಲ ಬೆಲೆಯನ್ನು ಇಳಿಕೆ ಮಾಡಿದರು ಎಂದು ದೊಡ್ಡದಾಗಿ ಬಿಂಬಿಸಿದವು.. ಆದರೆ ತೈಲ ಬೆಲೆ ಇಳಿಕೆಯಾಗಿದ್ದು ಯಾಕೆ ಎನ್ನುವ ಅರಿವು ಇಲ್ಲದವರಂತೆ ನಟಿಸಿದರು.

ತೈಲ ಬೆಲೆ ಇಳಿಕೆಯಾಗಿದ್ದು ಉಪಚುನಾವಣೆಗಳಲ್ಲಿ ಬಿಜೆಪಿಗೆ ಮತಗಳ ಗಳಿಕೆಯಲ್ಲಿ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿತ್ತು ಮತ್ತು ಮತದಾರ ಈ ತೈಲ ಬೆಲೆ ಏರಿಕೆಯನ್ನು ಗಂಭೀರವಾಗಿ ಪರಿಗಣಿಸಿದ ಪರಿಣಾಮ ಮೋದಿ ಸರ್ಕಾರದ ವಿರುದ್ಧ ಅಕ್ರೋಶ ವ್ಯಕ್ತಪಡಿಸಿದ್ದರು ಹಾಗಾಗಿ ಬಿಜೆಪಿಗೆ ಹಿನ್ನಡೆಯಾಗಿತ್ತು ಈ ಕಾರಣಕ್ಕೆ ಫಲಿತಾಂಶದ ಮರುದಿನವೆ ತೈಲ ಬೆಲೆಯಲ್ಲಿ ಕೊಂಚ ಇಳಿಕೆ ಮಾಡಿದರು ಆದರೆ ಇದೆ ದೊಡ್ಡ ಸಾಧನೆ ಎನ್ನುವ ರೀತಿಯಲ್ಲಿ ಬಿಂಬಿಸಿದ್ದು ನೋಡಿದರೆ ಈ ಚಾನೆಲ್‌ಗಳಿಗೆ ಏನೆನ್ನಬೇಕೋ ಗೊತ್ತಿಲ್ಲ ಆದರೆ ಮೋದಿಯೇ ಪರಮಾತ್ಮ ಎನ್ನುವ ರೀತಿಯಲ್ಲಿ ನ ನಡುವಳಿಕೆ ಇದೆಯಲ್ಲ ಅದು ಒಳ್ಳೆಯದಲ್ಲ ಈ ಮಾಧ್ಯಮಕ್ಕೆ ಒಂದು ಕಪ್ಪು ಚುಕ್ಕೆ ಎನಿಸುತ್ತದೆ.

# ವ್ಯಾಧಿಗ್ರಸ್ತ ಸಮಾಜವನ್ನು ಆತ್ಮನಿರೀಕ್ಷಣೆಗೆ ಹಚ್ಚುವ 'ಜೈಭೀಮ್'

ದೆಹಲಿ ದೃಷ್ಟಿ



ಡಿ.ಉಮಾಪತಿ
ಹಿರಿಯ ಪತ್ರಕರ್ತರು

ತನ್ನನ್ನು ನಾಗರಿಕ ಎಂದು ಕರೆದುಕೊಳ್ಳುವ ಸಮಾಜ ಪೂರ್ವಗ್ರಹಗಳಿದ್ದಲ್ಲಿ ಅವುಗಳನ್ನು ಮೂರು ತಾಸು ಬದಿಗೆ ಸರಿಸಿ ಮನತೆರೆದು 'ಜೈ ಭೀಮ್' ಚಲನಚಿತ್ರವನ್ನು ಅದರ ಎಲ್ಲ ಮಿತಿಗಳೊಂದಿಗೆ ಒಮ್ಮೆ ನೋಡುವುದು ಒಳಿತು. ಬತ್ತಿ ಹೋಗಿರಬಹುದಾದ ಅಂತಃಕರಣದ ಸೆಲೆಗಳು ಮತ್ತೆ ಜಿನುಗಿಯಾವು

ಕ್ರೂರ ಜಾತಿವ್ಯವಸ್ಥೆಯ ಧೂರ್ತ ಹುನ್ನಾರಗಳಿಗೆ ಕೊನೆ ಮೊದಲಿಲ್ಲ. ಮೇಲು ಕೀಳಿನ ಹಾಲಾಹಲವನ್ನು ತುಂಬಿ ತುಳುಕಿಸುವ ಜಾತಿ ಪದ್ಧತಿ ಹಿಂದೂ ಸಮಾಜದ ವೈಶಿಷ್ಟ್ಯ. ಮನುಷ್ಯನೇ ಮನುಷ್ಯನ್ನು ಹಿಂಸಿಸಿ ಅವಮಾನಿಸಿ ಮೃಗದಂತೆ ಬೇಟೆಯಾಡಿ ಕೊಲ್ಲುವ ಕ್ರೌರ್ಯದ ಅಮಾನುಷ ನಿರ್ಮಿತಿ.

'ಜೈ ಭೀಮ್' ಚಲನಚಿತ್ರದ ಮೊದಲ ದೃಶ್ಯವೇ 'ನಾಗರಿಕ' ಸಮಾಜದ ಕರಾಳ ಮುಖದ ಕುರೂಪವನ್ನು ತೆರೆದು ತೋರುತ್ತದೆ. ಬಿಡುಗಡೆಯಾದ ಕೈದಿಗಳನ್ನು ಜೈಲಿನ ಅವರಣದಲ್ಲಿ ಪೊಲೀಸರು ಅವರವರ ಜಾತಿಯ ಆಧಾರದ ಮೇಲೆ ಪ್ರತ್ಯೇಕಗೊಳಿಸಿ ನಿಲ್ಲಿಸುತ್ತಾರೆ. ಬಲಿಷ್ಠ ಜಾತಿಯವರನ್ನು ಬಿಡುಗಡೆ ಮಾಡಲಾಗುತ್ತದೆ. ಆದರೆ ದಲಿತರು- ಆದಿವಾಸಿಗಳನ್ನು ಉಳಿಸಿಕೊಂಡು ಅವರು ಮಾಡಿಯೇ ಇಲ್ಲದ ಹೊಸ ಆಪಾದನೆಗಳನ್ನು ಹೇರಲಾಗುತ್ತದೆ. ನಿಜವಾದ ಅಪರಾಧಿಗಳು ಪತ್ತೆಯಾಗದೆ ಬಾಕಿ ಉಳಿದಿರುವ ಕೇಸುಗಳಲ್ಲಿ ಇವರನ್ನು ಸಿಲುಕಿಸಿ ಪುನಃ ಜೈಲಿಗೆ ಅಟ್ಟಲಾಗುತ್ತದೆ. ಬಗೆಹರಿಸಲಾಗದೆ ಬಾಕಿ ಉಳಿಸಿರುವ ಕೇಸುಗಳಲ್ಲಿ ಈ ಅತಿ ದೀನರನ್ನು ಇರುಕಿಸಲಾಗುತ್ತದೆ. ಹೀಗೆ ಬಲಿಪಶುಗಳನ್ನು ಪೂರೈಕೆ ಮಾಡುವ ಜೈಲರನ ಜೇಬುಗಳನ್ನು ಪೊಲೀಸರೇ ಭರ್ತಿ ಮಾಡುತ್ತಾರೆ.

ತಮಿಳುನಾಡಿನಲ್ಲಿ ಇರುಳರೆಂದೂ, ಕರ್ನಾಟಕದಲ್ಲಿ ಇರುಳಿಗರೆಂದೂ ಕರೆಯಲಾಗುವ ಅತ್ಯಂತ ಹಿಂದುಳಿದ ಬುಡಕಟ್ಟಿಗೆ ಸೇರಿದವರು. ಹಾವು ಹಿಡಿದು ಕಾಡಿಗೆ ಬಿಡುವ ಮತ್ತು ಹಾವಿನ ವಿಷಕ್ಕೆ ಔಷಧಿ ಕೊಡುವ ಈ ಜನರು ಹೊಲಗದ್ದೆಗಳಲ್ಲಿ ಫಸಲು ಮುಕ್ಕುವ ಇಲಿಗಳ ಹಿಡಿಯುವವರು. ಬ್ರಿಟಿಷ್ ಸರ್ಕಾರದಿಂದ ಕ್ರಿಮಿನಲ್ ಟ್ರೈಬ್ ಎಂಬ ಹಣೆಪಟ್ಟಿ ಹಚ್ಚಿಸಿಕೊಂಡಿದ್ದ ಹಲವಾರು ಜಾತಿಗಳು ಮತ್ತು ಬುಡಕಟ್ಟುಗಳ ಪೈಕಿ ಇರುಳರೂ ಸೇರಿದ್ದಾರೆ. ಎರಡು ಹೊತ್ತಿನ ಅನ್ನಕ್ಕೆ ಮತ್ತು ಗೇಣು ಬಟ್ಟೆಗೆ ಗಳಿಸುವಲ್ಲೇ ಮುಗಿದು ಹೋಗುವ ದೀನ ಬದುಕುಗಳು ಇವರವು. ಇರುಳಿಗರನ್ನು ಮತ್ತು ಇವರಂತಹ ಅಸಂಖ್ಯ ತಬ್ಬಲಿ ಜಾತಿಗಳನ್ನು ಸವರ್ಣೀಯ ಸಮಾಜ ಮತ್ತು ನಮ್ಮ ಅಪರಾಧ







ನ್ಯಾಯಾಂಗ ವ್ಯವಸ್ಥೆ (ಅಡಿುಟುಟಿಚಿಟ ಎಣಾಣುಛಿಜ ಖಿಥಿಣಜಟ) ನಡೆಸಿಕೊಳ್ಳುವ ಪರಿ ಅಮಾನುಷ. ದಿಕ್ಕಿಲ್ಲದ ನಾಯಿ ನರಿಗಳು ಹುಳು ಹುಪ್ಪಟೆಗಳಿಗಿಂತಲೂ ಕೀಳಾಗಿ ಹುಟ್ಟಿ ಸಾಯುವ ಇವರನ್ನು ಮನುಷ್ಯರೆಂದು ಬಗೆದೇ ಇಲ್ಲ. ಹಾಗೆಂದೇ ಮಾನವಹಕ್ಕುಗಳು ಎಂಬ ಪರಿಕಲ್ಪನೆ ಇವರನ್ನು ದೂರ ದೂರದಿಂದಲೂ ಮುಟ್ಟುವುದಿಲ್ಲ. ಇವರ ಭಾರತವೇ ಬೇರೆ. ಅದು ಕತ್ತಲ ಭಾರತ. ಅದೃಶ್ಯ ಭಾರತ. ನಾಗರಿಕ ಎಂದು ಹೇಳಲಾಗುವ ಅನಾಗರಿಕ ಸಮಾಜದ ಕುರುಡುಗಣ್ಣಿಗೆ, ಕಿವುಡುಗಿವಿಗೆ, ಸತ್ತ ನಾಲಗೆಗೆ, ಅವಸಾನಗೊಂಡ ಆತ್ಮಸಾಕ್ಷಿಯನ್ನು ಆರ್ತತೆ, ಅಸಹಾಯಕತೆಯಿಂದ ನೋಡುವ ಆದಿವಾಸಿ-ದಲಿತ ಭಾರತ.

ಜೈ ಭೀಮ್ ಚಲನಚಿತ್ರದ ಕ್ರೌರ್ಯವನ್ನು ಛತ್ತೀಸಗಢ-ಝಾರ್ಖಂಡದಂತಹ ಆದಿವಾಸಿ ಬಹುಳ ಸೀಮೆಯಂತೂ ಅನವರತ ಎದುರಿಸುತ್ತ ಬಂದಿದೆ. ಉತ್ತರಪ್ರದೇಶ- ಬಿಹಾರದಲ್ಲಿ ನೆಲೆಸಿರುವ ಹೊಲಗದ್ದೆಗಳಲ್ಲಿ ಇಲಿ ಹಿಡಿದು ತಿನ್ನುವ ಮೂಸಾಹರ ಎಂಬ ಅತಿ ದಲಿತ ಜಾತಿಯೊಂದಿದೆ. ಅದರಲ್ಲಿ ಅಕ್ಷರಸ್ಥರ ಪ್ರಮಾಣ ಶೇ.ಮೂರು. ಇದೇ ಗತಿ ಮುಂದುವರೆದರೆ ಈ ಜಾತಿ ಸಂಪೂರ್ಣ ಸಾಕ್ಷರವಾಗಲು ನಾಲ್ಕು ಸಾವಿರ ವರ್ಷಗಳಿಗೂ ಹೆಚ್ಚು ಕಾಲ ಬೇಕಾದೀತಂತೆ! ಮೂಸಾಹರರೊಂದಿಗೆ ಇರುಳರೂ ಸೇರಿದಂತೆ ಇನ್ನೂ ನೂರಾರು ಜಾತಿಗಳು- ಬುಡಕಟ್ಟುಗಳು ಈ ಪಟ್ಟಿಗೆ ಸೇರುವುದು ನಿಶ್ಚಿತ.

ಬಾಬಾಸಾಹೇಬ ಡಾ.ಬಿ.ಆರ್. ಅಂಬೇಡ್ಕರ್ ಅವರು ಂಟಿಟುಿಟಚಿಣುಂಟಿ ಂಜಿ ಅಚಿಣಜ ನ ಎಂಟನೆಯ ಅಧ್ಯಾಯದಲ್ಲಿ ಆದಿವಾಸಿಗಳ ದುಸ್ಥಿತಿಯ ಕುರಿತು ಎತ್ತಿರುವ ಪ್ರಶ್ನೆಯೊಂದು ಹೀಗಿದೆ-

''ಆದಿವಾಸಿಗಳನ್ನು ಇವ ನಮ್ಮವನೆಂದು ತಬ್ಬಿಕೊಂಡು ಪ್ರೀತಿಸಲು ಹಿಂದೂ ಸಮಾಜ ಮುಂದಾಗಲೇ ಇಲ್ಲ. ಬದುಕಿಡೀ ಜಾತಿ ವ್ಯವಸ್ಥೆಯನ್ನು ಕಾಪಾಡಿಕೊಳ್ಳುವುದೇ ಹಿಂದುವಿನ ಪರಮ ಉದ್ದೇಶವಾಗಿದ್ದಾಗ ಈ ಕೆಲಸ ಮಾಡಲು ಹಿಂದುವಿಗೆ ಹೇಗೆ ಸಾಧ್ಯವಾದೀತು?''

1871ರಲ್ಲಿ ಬ್ರಿಟಿಷರು ಜಾರಿಗೆ ತಂದಿದ್ದ ಕ್ರಿಮಿನಲ್ ಟ್ರೈಬ್ಸ್ ಕಾಯಿದೆಯನ್ನು 1951ರಲ್ಲಿ ರದ್ದು ಮಾಡಲಾಗುತ್ತದೆ. ಆದರೆ ಕಾಗದದ ಮೇಲೆ ಮಾತ್ರವೇ ರದ್ದಾಗಿರುವ ಈ ಕಾಯಿದೆಯನ್ನು ಪೊಲೀಸ್ ವ್ಯವಸ್ಥೆ ಜೀವಂತವಾಗಿ ಇರಿಸಿಕೊಂಡಿದೆ. ಕ್ರಿಮಿನಲ್ ಟ್ರೈಬ್ಸ್ ಹಣೆಪಟ್ಟಿ ಹಚ್ಚಲಾಗಿದ್ದ ನೂರಾರು ಬುಡಕಟ್ಟುಗಳ ಅಮಾಯಕ ಜನರನ್ನು ಅಮಾನುಷವಾಗಿ ನಡೆಸಿಕೊಳ್ಳುತ್ತಿದೆ. ಅವರು ಮಾಡದೆ ಇರುವ ಅಪರಾಧಗಳಲ್ಲಿ ಬಂಧಿಸಿ ಜೈಲುಗಳಲ್ಲಿ ಚಿತ್ರಹಿಂಸೆ ಮಾಡಿ ಅವರಿಂದ ಬಲವಂತದ ಹುಸಿ ತಪ್ಪೊಪ್ಪಿಗೆ ಪಡೆದು, ಅದನ್ನು ನ್ಯಾಯಾಲಯಗಳಲ್ಲಿ ಮಂಡಿಸಿ, ಶಿಕ್ಷೆ ಕೊಡಿಸಿ ಜೈಲುಗಳ ನರಕಕ್ಕೆ ನೂಕಲಾಗುತ್ತಿದೆ. ಚಿತ್ರವಧೆಯ ಹಂತದಲ್ಲೇ ಪ್ರಾಣ ಬಿಡುವ ದಿಕ್ಕಿಲ್ಲದವರ ಲೆಕ್ಕವಿಲ್ಲ.




ಅಮಾಯಕ ಅನಕ್ಷರಸ್ಥ ತಬ್ಬಲಿ ಜನಾಂಗಗಳ ಈ ಚಿತ್ರವಧೆಯ ರಕ್ತ ನಾಗರಿಕ ಸಮಾಜದ ಕೈಗಳನ್ನು ಮೆತ್ತಿ ತೊಟ್ಟಿಕ್ಕುತ್ತಿದೆ. ಕಣ್ಣುಮುಚ್ಚಿ ಲೋಲುಪತೆಯಲ್ಲಿ ಮೈಮರೆತಿರುವ ಈ ಜಾತಿವ್ಯಾಧಿಪೀಡಿತ ಸಮಾಜದ ಆತ್ಮಸಾಕ್ಷಿ ಸಾವಿರಾರು ವರ್ಷಗಳ ಅಂಧ ಅಮಾನುಷ ಪರಂಪರೆಯಡಿ ಹೂತು ಹೋಗಿದೆ.

ರಾಷ್ಟ್ರೀಯ ಚಿತ್ರಹಿಂಸೆ ವಿರೋಧೀ ಆಂದೋಲನದ (ಓಚಿಣುಂಟಿಚಿಟ ಅಚಿಟಂಪಿಚಿುಂಟಿ ಂಬಿಚುಟಿಣ ಖಿಂಡಿಣಾಡಿಜ) ಅಧ್ಯಯನದ ಪ್ರಕಾರ ದಿನಂಪ್ರತಿ ಸರಾಸರಿ ಐವರು ಬಂಧಿತರು ಪೊಲೀಸ್ ವಶದಲ್ಲಿ ಚಿತ್ರಹಿಂಸೆಯಿಂದ ಸಾಯುತ್ತಿದ್ದಾರೆ. 2019ರಲ್ಲಿ ಹೀಗೆ ಕಾನೂನುಪಾಲಕರಿಂದ 'ಕೊಲೆ' ಯಾದವರ ಸಂಖ್ಯೆ 1,723.

2020ರಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ದಾಖಲಿಸಿರುವ ನ್ಯಾಯಾಂಗ ವಶದ ಸಾವುಗಳ ಸಂಖ್ಯೆ 1,569. ಕಾಗದದ ಮೇಲೆ ಕಡತಗಳಲ್ಲಿ ಅಂಕಿ ಅಂಶಗಳಾಗಿ ಮಾತ್ರವೇ ದಾಖಲಾಗುವ ಈ ಸಾವುಗಳ ಹಿಂದೆ ಎಂತೆಂತಹ ಕ್ರೌರ್ಯ-



ಕಣ್ಣೀರಿನ ಕತೆಗಳಿದ್ದಾವು!

ಠಾಣೆಗಳಲ್ಲಿ ಜರುಗುವ ಈ 'ಕೊಲೆ'ಗಳ ಬಲಿಪಶುಗಳು ಬಹುತೇಕ ತಳವರ್ಗಗಳಿಗೆ ಸೇರಿದವರು. ದಲಿತರು, ಬುಡಕಟ್ಟು ಜನಾಂಗಗಳವರು ಹಾಗೂ ಮುಸಲ್ಮಾನರು. ಭಾರತ ಸರ್ಕಾರ ಅಪರಾಧಗಳ ಕುರಿತು (ನ್ಯಾಶನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೋ) ವರ್ಷವರ್ಷವೂ ಅಂಕಿ ಅಂಶಗಳನ್ನು ಪ್ರಕಟಿಸುತ್ತದೆ. ನಮ್ಮ ಕ್ರಿಮಿನಲ್ ನ್ಯಾಯವ್ಯವಸ್ಥೆಯು ಬಡವರು ಮತ್ತು ದಮನಿತರ ವಿರುದ್ಧ ಕತ್ತಿ ಮಸೆಯುತ್ತಲೇ ಬಂದಿರುವ ದುಷ್ಟತನದ ಒಂದು ಸಣ್ಣ ಉದಾಹರಣೆ ಈ ಅಂಕಿ ಅಂಶಗಳು. ಹಣ ತೆತ್ತು ಉತ್ತಮ ವಕೀಲರನ್ನು ನೇಮಕ ಮಾಡಿಕೊಳ್ಳುವ ಹಣವಂತರು-ಬಲಿಷ್ಠರು-ಪ್ರಭಾವಿಗಳನ್ನು ಬಂಧಿಸಿಡುವ ಶಕ್ತಿ ಯಾವ ಜೈಲಿನ ಸಲಾಕೆಗಳಿಗೂ ಇಲ್ಲ.

ಸರ್ಕಾರಿ ಸಂಸ್ಥೆಯೇ ಆಗಿರುವ ನ್ಯಾಶನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೋ ಪ್ರಕಾರ ಶಿಕ್ಷೆಯಾಗಿ ಸೆರೆವಾಸ ಅನುಭವಿಸಿರುವ ವಿಚಾರಣಾಧೀನ ಕೈದಿಗಳ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಹಾಗೂ ಮುಸಲ್ಮಾನರ ಪ್ರಮಾಣ ಶೇ.50.8. ದೇಶದ ಜನಸಂಖ್ಯೆಯಲ್ಲಿ ಇವರ ಒಟ್ಟು ಪ್ರಮಾಣ ಶೇ.39.4. ಈ ಮೂರೂ ಸಮುದಾಯಗಳು ಆರ್ಥಿಕ-ಸಾಮಾಜಿಕ-ಶೈಕ್ಷಣಿಕವಾಗಿ ಹಿಂದುಳಿದವುಗಳು.

ದಾರಿದ್ರ್ಯದ ತಿರುಗಣಿಗೆ ಸಿಕ್ಕ ಈ ಸಮುದಾಯಗಳು ನಿರುದ್ಯೋಗದ ಉರಿಯನ್ನೂ ಎದುರಿಸುತ್ತ ಬಂದಿವೆ. ಭೂ ಒಡೆತನದ ಬಲವೂ ಇವುಗಳಿಗೆ ಇಲ್ಲ. ಬಲಿಷ್ಠ ಜಾತಿಗಳ ದಮನ ದೌರ್ಜನ್ಯ ಹಿಂಸೆಗಳಲ್ಲಿ ಬೇಯುತ್ತ ಬಂದಿವೆ. ಅಮರಿಕೆಯಲ್ಲಿ ಕೂಡ ದಮನಿತ ಜನಾಂಗವಾದ ಕಪ್ಪು ವರ್ಣೀಯರ ಜನಸಂಖ್ಯಾ ಪ್ರಮಾಣ ಶೇ.13. ಆದರೆ ಜೈಲುಗಳಲ್ಲಿ ಕೊಳೆಯುತ್ತಿರುವ ಕಪ್ಪು ಜನರ ಪ್ರಮಾಣ ಶೇ.40.

ತಾರತಮ್ಯ ತುಂಬಿ ತುಳುಕಿರುವ ವ್ಯಾಧಿಗ್ರಸ್ತ ಅಸಮಾನ ಸಮಾಜದ ಪ್ರತಿಬಿಂಬವಿದು. ಸ್ವಾತಂತ್ರ್ಯ, ಸಮಾನತೆ, ಸೋದರತೆ ಹೊಂದಿದ ಸಮಾಜ ಮಾತ್ರವೇ ಆರೋಗ್ಯಕರವೂ ಬಲಿಷ್ಠವೂ ಮತ್ತು ಸಮೃದ್ಧವೂ ಆಗಬಲ್ಲದು.





# ಬಿಟ್‌ಕಾಯಿನ್ ದಂಧೆಗೆ ಯಾರ್‍ಯಾರ ತಲೆದಂಡ?

● ತುರುವನೂರು ಮಂಜುನಾಥ

ಬಿಟ್‌ಕಾಯಿನ್ ದಂಧೆ ಪ್ರಕರಣ ದಿನ ದಿನಕ್ಕೂ ರಾಜ್ಯದಲ್ಲಿ ಹೊಸ ರೂಪವನ್ನು ಪಡೆದುಕೊಳ್ಳುತ್ತಿದೆ. ಹ್ಯಾಕರ್ ಶ್ರೀಕಿಯ ಸಾವಿರಾರು ಕೋಟಿ ಹ್ಯಾಕ್ ಮಾಡಿದ್ದರೂ ಕೂಡ ಆತನ ಇನ್ನೂ ಗಂಭೀರವಾಗಿ ಪರಿಗಣಿಸಿಲ್ಲ ಅಂದರೆ ಅವನ ಹಿಂದೆ ರಾಜಕಾರಣಿಗಳು,ಪೊಲೀಸ್ ಅಧಿಕಾರಿಗಳು ಮತ್ತು ದೊಡ್ಡ ದೊಡ್ಡ ವ್ಯಕ್ತಿಗಳು ಭಾಗಿಯಾಗಿರುವುದು ದೃಡವಾಗುತ್ತಿದೆ.

ಅದರಲ್ಲೂ ರಾಜ್ಯದ ಮುಖ್ಯದೊರೆಯೊಬ್ಬರು ಈ ಹಿಂದೆ ಈ ಶ್ರೀಕಿಯನ್ನು ಭೇಟಿಯಾಗಿದ್ದು ಮತ್ತು ಆತನಿಂದ ಹಣವನ್ನು ಅವರ ಮಗಳ ಖಾತೆಗೆ ವರ್ಗಾಯಿಸಿದ ದಾಖಲೆಯೊಂದು ಪತ್ತೆಯಾಗಿದೆ ಇದು ಈಗ ಅವರ ಅಧಿಕಾರಕ್ಕೆ ಕಂಠಕ ತಂದಿದೆ. ಇದೇ ರೀತಿ ಬಿಜೆಪಿಯ ಇನ್ನೊಬ್ಬ ದೊಡ್ಡ ವ್ಯಕ್ತಿಯ ಸಂಪರ್ಕವೂ ಇತ್ತು ಎನ್ನುವುದು ದೃಡವಾಗಿದೆ ಹೀಗಾಗಿ ಅವರನ್ನು ಕೂಡ ಬಿಜೆಪಿ ಹೈಕಮಾಂಡ್ ಕೆಳಗಿಳಿಸಲು ನಿರ್ಧರಿಸಿದ್ದು ಈಗಾಗಲೇ ಅವರಿಗೆ ಸೂಚನೆಯನ್ನು ನೂಡಿ ಹೊಸ ವ್ಯಕ್ತಿಯನ್ನು ಅಲ್ಲಿಗೆ ಕೂರಿಸಲು ತಲಾಶ್ ಮಾಡುತ್ತಿದೆ. ಈ ಬಿಟ್ ಕಾಯಿನ್ ದಂಧೆಯಲ್ಲಿ ಈ ಇಬ್ಬರೆ ಅಲ್ಲ ಇನ್ನೂ ಹಲವಾರು ಗಣ್ಯ ವ್ಯಕ್ತಿಗಳು ಭಾಗಿಯಾಗಿದ್ದಾರೆ ಎನ್ನುವುದು ದೃಡವಾಗುತ್ತಿದೆ ಹೀಗಾಗಿಯೇ ಈ ಪ್ರಕರಣವನ್ನು ಗಂಭೀರವಾಗಿ ಪರಗಣಿಸುತ್ತಿಲ್ಲ ಇದೇ ಕಾರಣಕ್ಕೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಮೇಲಿಂದ ಮೇಲೆ ಈ ಪ್ರಕರಣವನ್ನು ಪ್ರಸ್ತಾಪ ಮಾಡುತ್ತಿದ್ದಾರೆ ಇದನ್ನು ಮುಚ್ಚಲು ಆ ಶಕ್ತಿಗಳು ಹಲವು ಪ್ರಯತ್ನಗಳನ್ನು ಮಾಡುತ್ತಿವೆ ಪ್ರಕರಣವನ್ನು ಬೇರೆಡೆಗೆ ಸೆಳೆಯಲು ಇಲ್ಲದ ವಿಷಯಗಳನ್ನು ಪ್ರಸ್ತಾಪ ಮಾಡಲಾಗುತ್ತಿದೆ. ಮುಖ್ಯವಾಗಿ ಸರ್ಕಾರ ಪ್ರಮುಖರು ಮತ್ತು ಆಡಳಿತದ ಪಕ್ಷದ ಚುಕ್ಕಾಣಿ ಹಿಡಿದವರ ಕುಟುಂಬಸ್ಥರ ಹೆಸರುಗಳೇ ಆರೋಪಿ ಶ್ರೀಕಿ ಬಾಯಿಬಿಟ್ಟಿರುವ ಪಟ್ಟಿಯಲ್ಲಿವೆ. ಅದರಲ್ಲೂ ಸರ್ಕಾರದ ಮತ್ತು ಪಕ್ಷದ ಸೂತ್ರದಾರರು ಮತ್ತು ಪ್ರಮುಖ ಸಂಸದರೊಬ್ಬರ ಕುಟುಂಬಸ್ಥರ ಹೆಸರುಗಳು ಹಗರಣದಲ್ಲಿ ಕೇಳಿಬಂದಿವೆ. ಜೊತೆಗೆ ಕೆಲವು ಹಿರಿಯ ಪೊಲೀಸ್ ಅಧಿಕಾರಿಗಳು ಮತ್ತು ಆಡಳಿತ ಪಕ್ಷದ ಆಪ್ತ ಉದ್ಯಮಿಗಳ ಮಕ್ಕಳ ಹೆಸರುಗಳು ಕಾಣಿಸಿಕೊಂಡಿವೆ. ಹಾಗಾಗಿ, ಇಡಿ ಮತ್ತು ಸಿಬಿಐ ವಿಚಾರಣೆ ಕೈಗೆತ್ತಿಕೊಳ್ಳುವ ಮುನ್ನವೇ ಸಿಐಡಿ ಶ್ರೀಕಿ ಪ್ರಕರಣದಲ್ಲಿ ಸಲ್ಲಿಸಿದ ಎಫ್ ಐಆರ್ ಪರಿಶೀಲಿಸಿರುವ ಬಿಜೆಪಿ ಹೈಕಮಾಂಡ್ ದಿಗ್ಭ್ರಮೆಗೊಳಗಾಗಿದೆ.

ಈಗಾಗಲೇ ಹಗರಣದ ಕುರಿತು ಎಫ್ ಬಿಐ ತನಿಖೆ ಕೂಡ ಆರಂಭವಾಗಿರುವುದರಿಂದ, ಖಂಡಿತವಾಗಿಯೂ ಇದು ಪಕ್ಷಕ್ಕೆ ದೊಡ್ಡ ಮುಜಗರ ತರಲಿದೆ ಎಂದು ಅಂದಾಜಿಸಿದೆ. ಆ ಹಿನ್ನೆಲೆಯಲ್ಲೇ ಈಗಾಗಲೇ ರಾಜ್ಯ ನಾಯಕರಿಗೆ ಎಚ್ಚರಿಕೆ ನೀಡಿದ್ದು, ಸಂದರ್ಭ ಬಂದರೆ ತಲೆದಂಡಕ್ಕೂ ಸಿದ್ಧವಾಗಿ ಎಂಬ ಸಂದೇಶ ರವಾನಿಸಿದೆ.ಮತ್ತೊಂದು ಕಡೆ ಹಗರಣದ ವಿವರಗಳನ್ನು ಪಡೆದುಕೊಂಡಿರುವ ಕಾಂಗ್ರೆಸ್ ನಾಯಕರು ಈ ವಿಷಯದಲ್ಲಿ ಆಡಳಿತ ಪಕ್ಷವನ್ನು ಇಕ್ಕಟ್ಟಿಗೆ



ಗಗನಕ್ಕೇರುತ್ತಿರುವ ಬಿಟ್‌ಕಾಯಿನ್‌ಗೆ ಭಾರತದಲ್ಲೇಕೆ ಭಾರೀ ಬೇಡಿಕೆ?

ಬಿಟ್ ಕಾಯಿನ್ ಬಗ್ಗೆ ಕೆಂಧೂಳಿ ಪತ್ರಿಕೆ 2 ತಿಂಗಳ ಹಿಂದೆಯೇ ವರದಿ ಮಾಡಿತ್ತು.

ಸಿಲುಕಿಸುವ ತಂತ್ರ ಹೆಣೆದಿದ್ದಾರೆ. ಅದರ ಸುಳಿವು ಅರಿತಿರುವ ಸರ್ಕಾರದ ಪ್ರಮುಖರು ರಹಸ್ಯ ಸ್ಥಳದಲ್ಲಿ ಮಾತುಕತೆ ನಡೆಸಿ, ಪ್ರತಿ ತಂತ್ರ ರೂಪಿಸಿದ್ದಾರೆ ಎಂಬ ಮಾಹಿತಿಯೂ ಇದೆ. ಬಂಧಿತ ಆರೋಪಿ ಹ್ಯಾಕರ್



ಶ್ರೀಕಿಯ ತಂದೆ ಬಿಜೆಪಿಯ ಬೆಂಗಳೂರಿನ ಪ್ರಭಾವಿ ಸಚಿವರೊಬ್ಬರ ಪರಮಾಪ್ತ ಎಂಬ ಸಂಗತಿ ಕೂಡ ಇದೀಗ ಮುನ್ನೆಲೆಗೆ ಬಂದಿದೆ, ಶ್ರೀಕಿಯ ವಹಿವಾಟಿಗೂ ಆತನ ತಂದೆಗೂ ಏನು ನಂಟಿತ್ತು ಮತ್ತು ಆ ಮೂಲಕ ಸಚಿವರಿಗೂ ಹಗರಣಕ್ಕೂ ಏನಾದರೂ ನಂಟಿದೆಯೇ ಎಂಬ ಬಗ್ಗೆಯೂ ಚರ್ಚೆ ನಡೆಯುತ್ತಿದೆ.

ಈ ನಡುವೆ, ಬರೋಬ್ಬರಿ ಹತ್ತು ಸಾವಿರ ಕೋಟಿ ರೂ.ನಷ್ಟು ಭಾರೀ ಮೊತ್ತದ ಈ ಹಗರಣ ರಾಜ್ಯ ಸರ್ಕಾರದ ಕುರ್ಚಿಗೇ ಕಂಟಕವಾಗಲಿದೆ. ಪ್ರಭಾವಿ ನಾಯಕರು, ಅಧಿಕಾರಿಗಳು ಮತ್ತು ಉದ್ಯಮಿಗಳು ಶ್ರೀಕಿಯ ಅಲಿಯಾಸ್ ಹ್ಯಾಕರ್ ಶ್ರೀಕೃಷ್ಣ ಅಕ್ರಮ ದಂಧೆಯ ಪಾಲುದಾರರು ಎಂಬ ಮಾಹಿತಿ ಪ್ರತಿಪಕ್ಷಗಳ ಕೈಸೇರಿರುವುದು ಆಡಳಿತ ಪಕ್ಷದಲ್ಲಿ ನಡುಕ ಹುಟ್ಟಿಸಿದೆ. ಬೀಸುವ ದೊಣ್ಣೆಯಿಂದ ಪಾರಾಗಲು ಸರ್ಕಾರದ ಪ್ರಮುಖರು ಇನ್ನಿಲ್ಲದ ಯತ್ನ ಆರಂಭಿಸಿದ್ದಾರೆ. ಆದರೆ, ಈಗಾಗಲೇ ಎಫ್ ಬಿಐ ನಂತಹ ಪ್ರಭಾವಿ ಅಂತಾರಾಷ್ಟ್ರೀಯ ಸಂಸ್ಥೆ ತನಿಖೆ ಆರಂಭಿಸಿರುವುದರಿಂದ ಹಗರಣದ ಪಾಲುದಾರರಿಗೆ ಈಗಲೇ ಜ್ವರ ಬಂದಿದೆ ಹಾಗಾಗಿ ಈ ರಾಜ್ಯದ ದೊರೆ ಮತ್ತು ಬಿಜೆಪಿಯ ಸಾರಥಿಯ ತಲೆದಂಡ ಅನಿವಾರ್ಯವಾಗಿದ್ದು ಇನ್ನೆರಡು ತಿಂಗಳ ಒಳಗೆ ಈ ತಲೆದಂಡವಾಗುವುದು ಖಚಿತವಾಗಿದೆ.

ಶ್ರೀಕಿಯ ವಿರುದ್ಧ ಮೊದಲು ದೂರು ದಾಖಲಾಗಿದ್ದು 2020 ಸೆಪ್ಟಂಬರ್ 7 ರಂದು ಸೆಂಟ್ರಲ್ ಪೊಲೀಸ್ ಠಾಣೆಯಲ್ಲಿ ಆಗ ತಮ್ಮ ಸರ್ವರ್‌ಅನ್ನು ಹ್ಯಾಕ್ ಮಾಡಲಾಗಿತ್ತು ಆ ನಂತರ ಕೆಂಪೇಗೌಡ ಪೊಲೀಸ್ ಠಾಣೆಯಲ್ಲೂ ಸಿಸಿಬಿಯೇ ದೂರು ದಾಖಲು ಮಾಡಿತ್ತು

ಶ್ರೀಕಿಯನ್ನು ಬಂಧಿಸಿದಾಗ ಈತ ಅಂತರಾಷ್ಟ್ರೀಯ ಬಿಕ್ ಕಾಯಿನ್ ದಂಧೆ ನಡೆಸುತ್ತಿದ್ದಾನೆ ಹ್ಯಾಕರ್ ಮಾಡುತ್ತಿದ್ದಾನೆ ಎನ್ನುವುದಾಗಿತ್ತು ನಂತರ ತನಿಖೆಯಲ್ಲಿ ಹವಾಲ ನೆಟ್‌ವರ್ಕ ಅನ್ನು ಹೊಂದಿದ್ದಾನೆ ಎನ್ನುವ ಅಂಶ ಬಯಲಾಗಿತ್ತು ಇನ್ನೂ ಸರ್ಕಾರದ ಪ್ರಮುಖ ಟೆಂಡರ್ ಪ್ರಕ್ಯೂರ್‌ಮೆಂಟ್‌ಗಳನ್ನು ಹ್ಯಾಕ್ ಮಾಡಿದ್ದಾನೆ ಅದರಿಂದಲೂ ಸಾವಿರಾರು ಕೋಟಿ ರೂಗಳನ್ನು ವಿವಿಧ ಖಾತೆಗಳಿಗೆ ವರ್ಗಾವಣೆ ಮಾಡಿದ್ದಾನೆ ಈ ಅಂಶ ಈಗ ಆಡಳಿತ ಪಕ್ಷಕ್ಕೆ ತಲೆನೋವಾಗಿ ಪರಿಣಮಿಸಿದೆ ಇಂತ ಎಲ್ಲಾ ಹ್ಯಾಕ್ ಮಾಡಿರುವ ಮತ್ತು ಆತನ ಹಿಂದೆ ಇರುವ ವ್ಯಕ್ತಿಕಗಳ ಬಗ್ಗೆ ಬಿಜೆಪಿ ಹೈಕಮಾಂಡ್‌ಗೆ ದೂರು ದಾಖಲಾಗಿದೆ ಈ ದೂರಿನ ಆಧಾರದ ಮೇಲೆ ರಾಜ್ಯದ ದೊರೆಯನ್ನು ಮತ್ತು ಬಿಜೆಪಿ ಸೂತ್ರದಾರನನ್ನು ಕೆಳಗಿಳಿಸಲು ತೀರ್ಮಾನಿಸಿದ್ದಾರೆ.


## ಬಿಬಿಎಂಪಿ ಟೆಂಡರ್‌ನಲ್ಲೂ ಹ್ಯಾಕ್

ಇನ್ನೂ ಬಿಬಿಎಂಪಿ ಟೆಂಡರ್ ಮಾಫೀಯಾದಲ್ಲೂ ಭಾಗಿಯಾಗಿರುವ ಶ್ರೀಕಿ ಹಲವಾರು ಟೆಂಡರ್‌ಗಳನ್ನು ಹ್ಯಾಕ್ ಮಾಡಿದ್ದಾನೆ ಹೀಗೆ ಹ್ಯಾಕ್ ಮಾಡಿದ ಸಾವಿರಾರು ಕೋಟಿ ರೂಗಳನ್ನು ವರ್ಗಾವಣೆ ಮಾಡಿದ ಬಗ್ಗೆ ದಾಖಲೆಗಳನ್ನು ಈಗ ಪಡೆದುಕೊಂಡಿದ್ದು ಇದರ ಹಿಂದಿರುವ ವ್ಯಕ್ತಿಗಳು ಯಾರು ಎನ್ನುವುದು ಗೊತ್ತಾಗಿದೆ ಈ ಎಲ್ಲರ ಖಾತೆಗೂ ಕೋಟಿಗಟ್ಟಲೆ ಹಣವನ್ನು ಆತ ವರ್ಗಾವಣೆ ಹೀಗಾಗಿ ಸಾವಿರಾರು ಕೋಟಿ ಹ್ಯಾಕ್ ಮಾಡಿಸಿ ಲಾಭ ಪಡೆದವರು ಯಾರು ಇದರ ಹಿಂದೆ ಯಾರಿದ್ದಾರೆ ಲಾಭ ಪಡೆದವರು ಯಾರು ಫವರ್‌ಫುಲ್ ರಾಜಕಾರಣಿಗಳ ಹೀಗಾ ಟೆಂಡರ್ ಬಿಡ್ ಆತ ಯ್ಯಾವ ಟೆಂಡರ್ ತಾನು ಕದ್ದ ಹಣವನ್ನು ಯಾರ್‍ಯಾರಿಗೆ ಹಣವನ್ನು ಸಂದಾಯ ಮಾಡಿದ್ದಾನೆ ಈ ಬಗ್ಗೆ ಈ ತನಿಖೆ ಯಾಕೆ ಮಾಡಿಲ್ಲ ಹವಾಲ ಮೂಲಕ ಪೊಲೀಸರೇ ಹೇಳಿದ್ದ ಡ್ರಗ್ ಪಡ್ಲರ್ ಆಗಿದ್ದ ಈತ ಶ್ರೀಲಂಕಾದ ಕ್ಯಾಸಿನೋ ಎಂಡಿ ಪರಿಚಯವಾಗಿದ್ದ ಈತ ಅಲ್ಲಿಗೂ ಹೋಗಿ ಹ್ಯಾಕ್ ಮಾಡುತ್ತಿದ್ದ ಬಾರಿ ಮೊತ್ತದ ಹಣ ಮಾಡಿದ್ದಾನೆ ಈತನ ಹಿಂದಿನ ಇರುವ ಅಧಿಕೃತ ಬಯಲು ಮಾಡಿ ಈ ತನಿಖೆಗೆ ಅಡ್ಡಿಪಡಿಸುತ್ತಿದ್ದಾರೆ ಇಡೀ ವ್ಯವಸ್ಥೆಯನ್ನು ಬುಡಮೇಲು ಮಾಡಬಹುದು ಎನ್ನುವುದಕ್ಕೆ ಹ್ಯಾಕಿ ಶ್ರೀಕಿಯೇ ಕಾರಣ ಈ ಎಲ್ಲಾ ಮಾಹಿತಿಗಳು ಪ್ರಧಾನಿ ಕಚೇರಿಗೂ ಈ ಮಾಹಿತಿ ಹೋಗಿದೆ.



● 12ನೇ ಪುಟಕ್ಕೆ...

# ಬಿಜೆಪಿಯೇತರ ಪಕ್ಷಗಳ ಒಗ್ಗಟ್ಟಿನ ಪ್ರದರ್ಶನ ಅಗತ್ಯ



ಸನತ್‌ಕುಮಾರ ಬೆಳಗಲಿ





ಚುನಾವಣೆಯ ಮೂಲಕ ದೊರೆತ ಅಧಿಕಾರವನ್ನು ಬಳಸಿಕೊಂಡು ಬಹುತ್ವ ಭಾರತದ ಅಡಿಪಾಯಕ್ಕೆ ಬಾಂಬಿಡುತ್ತಿರುವ ಕೋಮುವಾದಿ ಶಕ್ತಿಗಳನ್ನು ಅಧಿಕಾರದಿಂದ ದೂರವಿಟ್ಟರೆ ಮಾತ್ರ ಭಾರತದ ಜಾತ್ಯತೀತ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕಾಪಾಡಬಹುದು. ಮುಂಬರುವ ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಪ್ರತಿಪಕ್ಷಗಳು ಒಂದಾದರೆ ಮಾತ್ರ ಬಿಜೆಪಿಯ ಜೈತ್ರಯಾತ್ರೆಯನ್ನು ತಡೆಯಬಹುದಾಗಿದೆ.

ಜನಸಾಮಾನ್ಯರ ಜೀವನಮಟ್ಟ ಕುಸಿಯುತ್ತಿದೆ. ಜೀವನಾವಶ್ಯಕ ಪದಾರ್ಥಗಳ ಬೆಲೆ ಏರಿಕೆಯಿಂದ ನಿತ್ಯದ ಬದುಕು ಅಸಹನೀಯವಾಗಿದೆ. ಕೊರೋನ ಎರಡು ಸಲ ಅಪ್ಪಳಿಸಿತು. ಅದನ್ನು ಸರಿಯಾಗಿ ನಿಭಾಯಿಸಲಾಗದ ಸರಕಾರ ಅವೈಜ್ಞಾನಿಕವಾದ ದಿಗ್ಬಂಧನ ಹೇರಿತು. ಪರಿಣಾಮವಾಗಿ ಆರ್ಥಿಕ ಪರಿಸ್ಥಿತಿ ಹಳಿ ತಪ್ಪಿತು. ಕೈಯಲ್ಲಿನ ಉದ್ಯೋಗ ಕಳೆದುಕೊಂಡು ಜನ ಬೀದಿಗೆ ಬಿದ್ದಿದ್ದಾರೆ. ರಾಷ್ಟ್ರೀಯ ನಗರೀಕರಣ ಯೋಜನೆಯ ಹೆಸರಿನಲ್ಲಿ ಸರಕಾರದ ಆಸ್ತಿಯನ್ನು ಗುತ್ತಿಗೆಗೆ ನೀಡಿ ಮುಂದಿನ ಆರು ವರ್ಷಗಳಲ್ಲಿ ಆರು ಲಕ್ಷ ಕೋಟಿ ರೂಪಾಯಿಗಳನ್ನು ಸಂಗ್ರಹಿಸಲು ಸರಕಾರ ಮುಂದಾಗಿದೆ.

ಭಾರತದ ಅಧಿಕಾರ ಸೂತ್ರವನ್ನು 2014ರಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಹಿಡಿದಾಗ ಅನೇಕ ಪ್ರಜ್ಞಾವಂತರಲ್ಲಿ ಮೂಡಿದ ಆತಂಕ ನಿಜವಾಗುತ್ತಿದೆ. ಆ ಬದಲಾವಣೆ ಬರೀ ರಾಜಕೀಯ ಅಧಿಕಾರ ಹಸ್ತಾಂತರ ಆಗಿರಲಿಲ್ಲ. ವಿವಿಧ ಸಮುದಾಯ, ಭಾಷೆಗಳಿಗೆ, ಧರ್ಮಗಳಿಗೆ ಸೇರಿದ ಭಾರತದ ಕೋಟ್ಯಂತರ ಜನರ ಬದುಕು ಇನ್ನು ಮುಂದೆ ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ ಎಂಬ ಆತಂಕ, ಭೀತಿ ಎಲ್ಲೆಡೆ ಆವರಿಸಿದೆ.

ಕಳೆದ 70 ವರ್ಷಗಳಲ್ಲಿ ಅಪಾರ ಪರಿಶ್ರಮದಿಂದ ಗಳಿಸಿದ ಸಂಪತ್ತನ್ನು ಈ ರೀತಿ ಖಾಸಗಿ ರಂಗದ ಮಾರಾಟ ಮಾಡುವುದನ್ನು ಜನ ಪ್ರಶ್ನಿಸಬಾರದು ಎಂದು ಅವರನ್ನು ಮತಾಂಧತೆ, ಕೋಮು ದ್ವೇಷದ ವಿಷ ಸಾಗರದಲ್ಲಿ ಮುಳುಗಿಸಲಾಗುತ್ತಿದೆ.

ರಾಷ್ಟ್ರೀಯ ನಗರೀಕರಣದ ಹೆಸರಿನಲ್ಲಿ 1.6 ಲಕ್ಷ ಕೋಟಿ ರೂ. ಮೌಲ್ಯದ 26,700 ಕಿ.ಮೀ. ಹೆದ್ದಾರಿ, 1.4 ಲಕ್ಷ ಕೋಟಿ ಮೌಲ್ಯದ ರೈಲು ನಿಲ್ದಾಣಗಳು ಮತ್ತು 150 ರೈಲುಗಳು, 67 ಲಕ್ಷ ಕೋಟಿ ಮೌಲ್ಯದ 42,300 ವಿದ್ಯುತ್ ವಾಹಕ ಲೈನುಗಳು, ಇವುಗಳಲ್ಲದೆ ವಿಮಾನ ನಿಲ್ದಾಣಗಳು ಸೇರಿ ಎಲ್ಲವನ್ನೂ ಗುತ್ತಿಗೆ ನೀಡಲು ಈ ಸರಕಾರ ಹೊರಟಿದೆ. ಗುತ್ತಿಗೆಗೆ ಕೊಡುವುದೆಂದರೆ ಸಾರ್ವಜನಿಕ ಸಂಪತ್ತನ್ನು ಖಾಸಗಿ ರಂಗದ ಅಂಬಾನಿ, ಅದಾನಿಯಂತಹ ರಣ ಹದ್ದುಗಳಿಗೆ ಅಗ್ಗದ ಬೆಲೆಗೆ ಬಿಟ್ಟಿಯಾಗಿ ಕೊಡುವುದು.

ಮುಂದಿನ ಲೋಕಸಭಾ ಚುನಾವಣೆ 2023–24ರಲ್ಲಿ ನಡೆಯಲಿದೆ. ಅದಕ್ಕಿಂತ ಮೊದಲು ಉತ್ತರ ಪ್ರದೇಶ, ಉತ್ತರಾಖಂಡ, ಗೋವಾ ಹಾಗೂ ಮಣಿಪುರ ರಾಜ್ಯಗಳ ವಿಧಾನಸಭೆಗೆ ಬರುವ ವರ್ಷ ಮೊದಲ ತಿಂಗಳಲ್ಲಿ ಚುನಾವಣೆ ನಡೆಯಲಿದೆ.

ಚುನಾವಣೆಯನ್ನು ಶತಾಯ ಗತಾಯ ಗೆಲ್ಲಲು ಬಿಜೆಪಿ ಅದರಲ್ಲೂ ವಿಶೇಷವಾಗಿ ನಾಗಪುರದ ಸಂವಿಧಾನೇತರ ಶಕ್ತಿ ಕೇಂದ್ರ ಷಡ್ಯಂತ್ರ ರೂಪಿಸಿದೆ.

ಇದು ಕೊನೆಗೆ ಭಾರತದ ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಗಳ ವಿನಾಶದತ್ತ ಭಾರತವನ್ನು ಕೊಂಡೊಯ್ಯುತ್ತದೆ. ಇದನ್ನು ತಡೆಯವುದು ಬರೀ ಹೋರಾಟದಿಂದ ಮಾತ್ರ ಸಾಧ್ಯವಿಲ್ಲ. ಹೋರಾಟದ ಜೊತೆಗೆ ಚುನಾವಣೆ ಮೂಲಕ ಅವರು ಪಡೆದ ರಾಜಕೀಯ ಅಧಿಕಾರವನ್ನು ಕಿತ್ತುಕೊಳ್ಳಬೇಕಾಗಿದೆ. ಇದಕ್ಕಾಗಿ ಅದೇ ಚುನಾವಣಾ ಅಸ್ತ್ರವನ್ನು ಬಳಸಬೇಕಾಗಿದೆ.

ಕಳೆದ 2017ರ ವಿಧಾನಸಭಾ ಚುನಾವಣೆಯಲ್ಲೂ ಈ ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ಅಂತಹ ಜನಪ್ರಿಯತೆ ಹೊಂದಿರಲಿಲ್ಲ. ಆದರೆ ಪ್ರತಿಪಕ್ಷಗಳ ಅನೈಕ್ಯತೆ ಬಿಜೆಪಿಗೆ ವರದಾನವಾಯಿತು. ಅನೇಕ ಕಡೆ ಬಹುಕೋನ ಸ್ಪರ್ಧೆ ಏರ್ಪಟ್ಟು ಬಿಜೆಪಿ ವಿರೋಧಿ ಮತಗಳು ವಿಭಜನೆಗೊಂಡವು. ಇದರ ಲಾಭ ಬಿಜೆಪಿಗೆ ಆಯಿತು. ಆದರೆ, ಪಶ್ಚಿಮ ಬಂಗಾಳ ಮತ್ತು ದಿಲ್ಲಿಯಲ್ಲಿ ಮಾತ್ರ ಮಮತಾ ಬ್ಯಾನರ್ಜಿ ಹಾಗೂ ಅರವಿಂದ ಕೇಜ್ರಿವಾಲ್ ಬಿಜೆಪಿಗೆ ಸರಿಯಾದ ಪಾಠ ಕಲಿಸಿದರು. ಆದರೆ, ಉತ್ತರ ಪ್ರದೇಶದಂತಹ ರಾಜ್ಯ ಮಾಯಾವತಿ ಅವರ ಬಿಎಸ್ಪಿ, ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ಪಕ್ಷಗಳ ನಡುವಿನ ಒಡಕಿಂದ ಬಿಜೆಪಿ ಗೆದ್ದು ಆದಿತ್ಯನಾಥ್‌ನಂಥವರು ಆ ರಾಜ್ಯದ ಮುಖ್ಯಮಂತ್ರಿ ಆಗುವಂತಾಯಿತು.

ಕೋವಿಡ್ 2ನೇ ಅಲೆ ಬಂದ ಅನಂತರ ನಡೆದ ಮೊದಲ ವಿಧಾನಸಭಾ ಚುನಾವಣೆ ಇದಾಗಿದೆ. ಕೊರೋನ ಎರಡನೇ ಅಲೆಯಲ್ಲಿ ಸಾವಿರಾರು ಅಮಾಯಕರು ಸರಕಾರದ ನಿರ್ಲಕ್ಷದಿಂದ ಸಾವಿಗೀಡಾದ ಬಗ್ಗೆ ಜನಸಾಮಾನ್ಯರಲ್ಲಿ ಆಕ್ರೋಶವಿದೆ. ಇದರ ಜೊತೆಗೆ ಕಳೆದ ಒಂದು ವರ್ಷದಿಂದ ರಾಜಧಾನಿ ದಿಲ್ಲಿಯಲ್ಲಿ ನಡೆದಿರುವ ಐತಿಹಾಸಿಕ ರೈತ ಹೋರಾಟ ಸರಕಾರಕ್ಕೆ ದಿಗಿಲು ಉಂಟು ಮಾಡಿದೆ. ಇದರ ಜೊತೆಗೆ ಉತ್ತರ ಪ್ರದೇಶದ ಲಖಿಂಪುರ ಖೇರಿಯಲ್ಲಿ ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದ ಸಂದರ್ಭದಲ್ಲಿ ಕೇಂದ್ರ ಗೃಹ ಖಾತೆಯ ಸಹಾಯಕ ಸಚಿವನ ಪುತ್ರ ರೈತರ ಮೇಲೆ ಕಾರು ಹರಿಸಿದ ಪರಿಣಾಮವಾಗಿ ನಾಲ್ವರು ಅಸು ನೀಗಿದ ಘಟನೆಯಿಂದ ಬಿಜೆಪಿ ಕಂಗಾಲಾಗಿರುವುದು ನಿಜ.

ಆದರೆ, ಇದೇ ಕಾರಣದಿಂದ ಬಿಜೆಪಿಯು ಉತ್ತರ ಪ್ರದೇಶ ಮತ್ತು ಇತರ ಮೂರು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಪರಾಭವಗೊಳ್ಳುತ್ತದೆ ಎಂದು ಯಾರಾದರೂ ಅಂದುಕೊಂಡರೆ ಅದು ಮೂರ್ಖತನವಾಗುತ್ತದೆ.

ಉತ್ತರ ಪ್ರದೇಶದಲ್ಲಿ ಬಿಜೆಪಿಯನ್ನು ಏಕಾಂಗಿಯಾಗಿ ಎದುರಿಸುವ ಉತ್ಸಾಹದಲ್ಲಿರುವ ಕಾಂಗ್ರೆಸ್ ಅದರಲ್ಲೂ ಪ್ರಿಯಾಂಕಾ ಗಾಂಧಿಯವರು ಲಖಿಂಪುರ ಖೇರಿಯಲ್ಲಿ ರೈತರ ಹತ್ಯೆ ನಡೆದಲ್ಲಿಗೆ ಹೋಗಿ ನೊಂದ ಕುಟುಂಬದವರ ಕಣ್ಣೀರು ಒರೆಸಿದ್ದು ಮತ್ತು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ.40ರಷ್ಟು ಟಿಕೆಟ್ ನೀಡುವುದಾಗಿ ಘೋಷಿಸಿದ್ದು ನಿಜಕ್ಕೂ ದಿಟ್ಟ ಕ್ರಮಗಳಾಗಿವೆ.

ಆದರೆ, ಇದು ತುಂಬ ತಡವಾಯಿತು. ಚುನಾವಣೆ ಹೊತ್ತಿಗೆ ಇದು ಜನರಿಗೆ ತಲುಪಿ ಫಲ ನೀಡುವ ಸಾಧ್ಯತೆ ಕಡಿಮೆ. ಇದರ ಜೊತೆಗೆ ಇತರ ಬಿಜೆಪಿಯೇತರ ಪಕ್ಷಗಳ ಜೊತೆ ಚುನಾವಣಾ ಹೊಂದಾಣಿಕೆ ಅಗತ್ಯವಾಗಿದೆ.

ಚುನಾವಣೆಯ ಮೂಲಕ ದೊರೆತ ಅಧಿಕಾರವನ್ನು ಬಳಸಿಕೊಂಡು ಬಹುತ್ವ ಭಾರತದ ಅಡಿಪಾಯಕ್ಕೆ ಬಾಂಬಿಡುತ್ತಿರುವ ಕೋಮುವಾದಿ ಶಕ್ತಿಗಳನ್ನು ಅಧಿಕಾರದಿಂದ ದೂರವಿಟ್ಟರೆ ಮಾತ್ರ ಭಾರತದ ಜಾತ್ಯತೀತ ಪ್ರಜಾಪ್ರಭುತ್ವ ವ್ಯವಸ್ಥೆ ಕಾಪಾಡಬಹುದು. ಮುಂಬರುವ ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಪ್ರತಿಪಕ್ಷಗಳು ಒಂದಾದರೆ ಮಾತ್ರ ಬಿಜೆಪಿಯ ಜೈತ್ರಯಾತ್ರೆಯನ್ನು ತಡೆಯಬಹುದಾಗಿದೆ.

ಕಾಂಗ್ರೆಸನ್ನು ಬಿಟ್ಟರೆ ಉತ್ತರ ಪ್ರದೇಶದಲ್ಲಿ ಬಿಜೆಪಿಯನ್ನು ವಿರೋಧಿಸುವ ಇನ್ನೆರಡು ಪಕ್ಷಗಳೆಂದರೆ ಮಾಯಾವತಿ ಅವರ ಬಹುಜನ ಸಮಾಜ ಪಕ್ಷ ಮತ್ತು ಮುಲಾಯಂ ಸಿಂಗ್ ಯಾದವರ ಸಮಾಜವಾದಿ ಪಕ್ಷ. ಇವರೆಡೂ ಪಕ್ಷಗಳು ಪರಸ್ಪರ ಎದುರಾಳಿಗಳಾಗಿವೆ. ಚುನಾವಣೆಯಲ್ಲಿ ಪರಸ್ಪರ ಎದುರು ಬದುರಾಗಿ ಸ್ಪರ್ಧಿಸುತ್ತವೆ. ಹೀಗಾಗಿ ಬಿಜೆಪಿ ವಿರೋಧಿ ಮತಗಳು ಸಹಜವಾಗಿ ವಿಭಜನೆಯಾಗುತ್ತವೆ. ಯಾದವ ಸಮುದಾಯದವರು ಸಮಾಜವಾದಿ ಪಕ್ಷದ ಪರವಾಗಿ ಮತ್ತು ದಲಿತರು ಅದರಲ್ಲೂ ಜಾಟರು ಬಹುಜನ ಸಮಾಜ ಪಕ್ಷವನ್ನು ಬೆಂಬಲಿಸುತ್ತಾರೆ. ಮುಸ್ಲಿಮರು ಬಹುತೇಕ ಸಮಾಜವಾದಿ ಪಕ್ಷದ ಪರವಾಗಿ ನಿಲ್ಲುವುದರಿಂದ ಅದರ ಬಲ ಹೆಚ್ಚಾಗುತ್ತದೆ. ಆದರೆ, ಬಹುಮತ ಸಾಧ್ಯವಾಗುವುದಿಲ್ಲ. ಹೀಗೆ ಈ ಒಡಕಿನ ಪರಿಣಾಮವಾಗಿ ಬಿಜೆಪಿ ಮತ್ತೆ ಗೆಲ್ಲುವ ಎಲ್ಲ ಸಾಧ್ಯತೆ ಇರುವುದನ್ನು ತಳ್ಳಿ ಹಾಕಲಾಗುವುದಿಲ್ಲ.






ಉತ್ತರಾಖಂಡ, ಗೋವಾ, ಮಣಿಪುರಗಳಲ್ಲೂ ಪ್ರತಿಪಕ್ಷಗಳು ಒಂದುಗೂಡಿದರೆ ಬಿಜೆಪಿಗೆ ಪಾಠ ಕಲಿಸಲು ಸಾಧ್ಯವಾಗುತ್ತದೆ. ಉತ್ತರ ಪ್ರದೇಶ ಭಾರತದ ಅತ್ಯಂತ ದೊಡ್ಡ ರಾಜ್ಯ. ಅಲ್ಲಿನ ಚುನಾವಣಾ ಫಲಿತಾಂಶ ಮುಂಬರುವ ಲೋಕಸಭಾ ಚುನಾವಣೆಯ ಮೇಲೆ ಪರಿಣಾಮವನ್ನು ಬೀರುತ್ತದೆ. ಅದನ್ನು ಹೇಗಾದರೂ ಉಳಿಸಿಕೊಳ್ಳಲು ಬಿಜೆಪಿ ಅದರಲ್ಲೂ ವಿಶೇಷವಾಗಿ ನಾಗಪುರದ ಸಂವಿಧಾನೇತರ ಶಕ್ತಿ ಕೇಂದ್ರ ಹರ ಸಾಹಸ ಮಾಡುತ್ತಿದೆ.

ಅಲ್ಲಿ ಮುಲಾಯಂ ಮತ್ತು ಅಖಿಲೇಶ್ ಯಾದವರ ಸಮಾಜವಾದಿ ಪಕ್ಷ, ಮಾಯಾವತಿ ಅವರ ಬಹುಜನ ಸಮಾಜ ಪಕ್ಷ ,ಕಾಂಗ್ರೆಸ್ ಪಕ್ಷ, ರಾಷ್ಟ್ರೀಯ ಲೋಕದಳಗಳು ಒಂದಾಗಿ ಚುನಾವಣೆ ಎದುರಿಸಿದರೆ ಆದಿತ್ಯನಾಥ್ ಮಾತ್ರವಲ್ಲ, ಅವರ ದಿಲ್ಲಿ ಬಾಸ್‌ಗಳು ಏನೇ ಸರ್ಕಸ್ ಮಾಡಿದರೂ ಚುನಾವಣೆಯಲ್ಲಿ ಗೆದ್ದು ಅಧಿಕಾರ ಉಳಿಸಿಕೊಳ್ಳುವುದು ಸುಲಭವಲ್ಲ. ಕಳೆದ ಬಾರಿ ಜಯಶಾಲಿಯಾದ ಬಿಜೆಪಿ ಪಡೆದ ಮತಗಳು ಶೇ.39.6. ಪ್ರತಿಪಕ್ಷಗಳು ಒಂದಾಗಿ, ಬಿಜೆಪಿ ವಿರೋಧಿ ಮತಗಳ ವಿಭಜನೆಯನ್ನು ತಪ್ಪಿಸಿದರೆ ಖಂಡಿತ ಬಿಜೆಪಿಯನ್ನು ಉತ್ತರ ಪ್ರದೇಶದಲ್ಲಿ ಸೋಲಿಸಬಹುದು.

ಅದರೆ ಪ್ರತಿಪಕ್ಷಗಳು ಒಂದಾಗದಂತೆ ಮೋದಿ, ಅಮಿತ್ ಶಾ, ಆದಿತ್ಯನಾಥ್ ನಾನಾ ಮಸಲತ್ತು ಮಾಡುತ್ತಾರೆ. ಪ್ರತಿಪಕ್ಷ ನಾಯಕರನ್ನು ಹೆದರಿಸಲು ಸಿಬಿಐ, ಜಾರಿ ನಿರ್ದೇಶನಾಲಯದಂತಹ ಅಸ್ತ್ರಗಳನ್ನು ಪ್ರಯೋಗಿಸುತ್ತಾರೆ. ಈ ಹುನ್ನಾರ ಎದುರಿಸಿ ಒಂದು ಗೂಡಿದರೆ ಮಾತ್ರ ಪ್ರತಿಪಕ್ಷಗಳಿಗೆ ಒಳ್ಳೆಯ ಅವಕಾಶವಿದೆ.

2004ರಲ್ಲಿ ಮತ್ತು ಅದಕ್ಕಿಂತ ಮೊದಲು ಬಿಜೆಪಿ ಕೇಂದ್ರದ ಅಧಿಕಾರ ಸೂತ್ರ ಹಿಡಿಯುವುದನ್ನು ತಪ್ಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕರಾಗಿದ್ದ ಹರಕಿಷನ್ ಸಿಂಗ್ ಸುರ್ಜಿತ್ ಮತ್ತು ಜ್ಯೋತಿ ಬಸು. ಆಗ ರಾಜಕೀಯ ವಲಯದಲ್ಲಿ ಮತ್ತು ಮಾಧ್ಯಮಗಳಲ್ಲಿ ಸುರ್ಜಿತರನ್ನು ಚಾಣಕ್ಯ ಎಂದು ಕರೆಯಲಾಗುತ್ತಿತ್ತು. ಆಗ ಪ್ರತಿಪಕ್ಷಗಳ ಪ್ರಮುಖ ನಾಯಕರಾಗಿದ್ದ ಸೋನಿಯಾ ಗಾಂಧಿ, ಮುಲಾಯಂ ಸಿಂಗ್ ಯಾದವ್, ಲಾಲೂ ಪ್ರಸಾದ್ ಯಾದವ್, ವಿ.ಪಿ.ಸಿಂಗ್, ಕರುಣಾನಿಧಿ ಮುಂತಾದವರು ಕಾಮ್ರೇಡ್ ಸುರ್ಜಿತ್ ಮಾತಿಗೆ ಬಹಳ ಬೆಲೆ ಕೊಡುತ್ತಿದ್ದರು. ಆದರೆ ಸುರ್ಜಿತ್ ಮತ್ತು ಜ್ಯೋತಿ ಬಸು ಅವರ ನಿರ್ಗಮನದ ಅನಂತರ ಪರಿಸ್ಥಿತಿ ಬದಲಾಯಿತು. ಅದೇನೇ ಇರಲಿ ಈಗಲೂ ಬಿಜೆಪಿಯೇತರ ಪ್ರತಿಪಕ್ಷಗಳು ಒಂದು ನಿರ್ದಿಷ್ಟ, ಕನಿಷ್ಠ ಕಾರ್ಯಕ್ರಮದಡಿ ಒಂದುಗೂಡಿ ಮುಂಬರುವ ಚುನಾವಣೆಯನ್ನು ಎದುರಿಸಿದರೆ ಫ್ಯಾಶಿಸ್ಟ್ ಶಕ್ತಿಗಳನ್ನು ಹಿಮ್ಮೆಟ್ಟಿಸಬಹುದು.





ಸ್ವಾತಂತ್ರ್ಯಾನಂತರದ ಭಾರತದ ಇತಿಹಾಸವನ್ನು ಅವಲೋಕಿಸಿದರೆ ಯಾವುದೇ ಬಲಾಢ್ಯ ಪಕ್ಷ ಅಧಿಕಾರದ ಮದದಿಂದ ಪ್ರಜಾಪ್ರಭುತ್ವ ವಿರೋಧಿ ದಮನ ಕಾಂಡ ನಡೆಸಿದರೆ ಅದನ್ನು ಮಣಿಸಲು ಪ್ರತಿಪಕ್ಷ ಏಕತೆಯಿಂದ ಮಾತ್ರ ಸಾಧ್ಯವಾಗಿದೆ.

1977ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಮೊದಲ ಬಾರಿ ಚುನಾವಣೆಯಲ್ಲಿ ಸೋತು ಅಧಿಕಾರ ಕಳೆದುಕೊಂಡಿದ್ದು ವಿರೋಧ ಪಕ್ಷಗಳ ಚುನಾವಣಾ ಪೂರ್ವ ಮೈತ್ರಿಯಿಂದ ಮಾತ್ರ. 2004–09ರಲ್ಲಿ ಬಿಜೆಪಿಯನ್ನು ಕಾಂಗ್ರೆಸ್ ಎದುರಿಸಿದ್ದು ಉಳಿದ ಸಮಾನ ಮನಸ್ಕ ಪ್ರತಿಪಕ್ಷಗಳ ಒಗ್ಗಟ್ಟಿನಿಂದ ಎಂಬುದನ್ನು ಮರೆಯಬಾರದು.

ಬಿಜೆಪಿಗೆ ಆರೆಸ್ಸೆಸ್‌ನ ಬಹುದೊಡ್ಡ ಕಾರ್ಯಕರ್ತರ ಪಡೆ ಇದೆ. ಚಿಕ್ಕ ಮಗುವಾಗಿದ್ದಾಗಿನಿಂದ ಶಾಖೆಗೆ ಸೇರಿಸಿಕೊಂಡು ಬೆಳೆಸುತ್ತಾರೆ.

ಹೀಗೆ ಬೆಳೆದವರು ಕಾರ್ಯಾಂಗ, ನ್ಯಾಯಾಂಗ, ಶೈಕ್ಷಣಿಕ ಕ್ಷೇತ್ರ, ಸೇನೆ, ಪೊಲೀಸ್ ಎಲ್ಲೆಡೆ ನುಸುಳಿದ್ದಾರೆ. ಯಾವುದೇ ಸರಕಾರ ಬಂದರೂ ಇವರು ತಮ್ಮ ಅಜೆಂಡಾ ಜಾರಿಗೆ ತರುತ್ತಾರೆ. 70 ವರ್ಷಗಳ ಹಿಂದೆ ಸಾವರ್ಕರ್ ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದ್ದರು. ಅದೇನೆಂದರೆ ಸೇನೆ, ಪೊಲೀಸ್, ಸರಕಾರ ಎಲ್ಲೆಡೆ ನಮ್ಮವರು ಸೇರಿಕೊಳ್ಳಬೇಕು ಎಂದಿದ್ದರು. ಬಿಜೆಪಿ ಕೇವಲ ಒಂದು ರಾಜಕೀಯ ಪಕ್ಷವಲ್ಲ. ಅದು ಆರೆಸ್ಸೆಸ್ ರಾಜಕೀಯ ವೇದಿಕೆ. ಅದನ್ನು ಎದುರಿಸುವ ಸಂಘಟನೆಗಳು ಅದಕ್ಕಿಂತ ಮಿಗಿಲಾದ ಕಾರ್ಯಕರ್ತರ ಪಡೆ ಕಟ್ಟಿ ಸೈದ್ಧಾಂತಿಕ ತರಬೇತಿ ನೀಡಬೇಕು.

ಹಳ್ಳಿ ಹಳ್ಳಿಗೂ ಹೋಗಿ ಭಾರತ ಎದುರಿಸುತ್ತಿರುವ ಸಮಸ್ಯೆಗಳು, ಬೆಲೆ ಏರಿಕೆ, ರೈತರ ಸಮಸ್ಯೆ, ದಲಿತರ ಮೇಲೆ ನಡೆಯುವ ದೌರ್ಜನ್ಯ, ಮಹಿಳೆಯರು ಮತ್ತು ಮಕ್ಕಳ ಸಮಸ್ಯೆಗಳ ಬಗ್ಗೆ ವಿವರಿಸಿ ಹೇಳಬೇಕು. ಸಂಘಪರಿವಾರ ಸೃಷ್ಟಿಸಿದ ಸುಳ್ಳುಗಳನ್ನು ಬಯಲುಗೊಳಿಸಬೇಕು.

ಎಲ್ಲಕ್ಕಿಂತ ಮುಖ್ಯವಾಗಿ ಚುನಾವಣೆಯಲ್ಲಿ ಕೋಮುವಾದಿ ಶಕ್ತಿಗಳನ್ನು ಸೋಲಿಸುವ ಮೂಲಕ ರಾಜಕೀಯ ಅಧಿಕಾರದಿಂದ ಅವುಗಳನ್ನು ದೂರವಿಡಬೇಕು. ಕಾಂಗ್ರೆಸ್, ಜೆಡಿಎಸ್‌ನಂತಹ ಪಕ್ಷಗಳಲ್ಲೂ ಸಂಘಪರಿವಾರದ ಬೆಂಬಲಿಗರಿದ್ದಾರೆ. ವಿಶ್ವ ಹಿಂದೂ ಪರಿಷತ್ತಿನ ಪದಾಧಿಕಾರಿಗಳಿದ್ದಾರೆ. ಅಂತಹವರನ್ನೆಲ್ಲ ಗುರುತಿಸಿ ಹೊರದಬ್ಬಬೇಕು. ಕಾಂಗ್ರೆಸ್ ಸರಕಾರ ಇದ್ದಾಗಲೂ ಒಳ ನುಸುಳಿ ತಮ್ಮ ಅಜೆಂಡಾ ಜಾರಿಗೆ ತರುವ ಅಪಾಯದ ಬಗ್ಗೆ ಸೆಕ್ಯುಲರ್ ಪಕ್ಷಗಳು ಎಚ್ಚರವಾಗಿರಬೇಕು. ಎಲ್ಲಕ್ಕಿಂತ ಮುಖ್ಯವಾಗಿ ತಮ್ಮ ನಡುವಿನ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಕೋಮುವಾದಿ, ಫ್ಯಾಶಿಸ್ಟ್ ಶಕ್ತಿಗಳನ್ನು ರಾಜಕೀಯ ಅಧಿಕಾರದಿಂದ ಹೊರಗಿಡಲು ಕಾಂಗ್ರೆಸ್ ಸೇರಿದಂತೆ ಜಾತ್ಯತೀತ ಪ್ರತಿಪಕ್ಷಗಳು ಒಂದಾಗಿ ಮುಂಬರುವ ಚುನಾವಣೆಯನ್ನು ಎದುರಿಸಬೇಕಾಗಿದೆ.

ಬದಲಾದ ಸನ್ನಿವೇಶದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಅವಳಿ ಶತ್ರುಗಳು ಎಂಬ ಹಳೆಯ ರಾಜಕೀಯ ನಿಲುವನ್ನು ಬಿಟ್ಟು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಾಶ ಮಾಡಿ ಮನುವಾದಿ ಫ್ಯಾಶಿಸ್ಟ್ ವ್ಯವಸ್ಥೆಯನ್ನು ಹೇರಲು ಹೊರಟಿರುವ ಸಂವಿಧಾನ ವಿರೋಧಿ ಶಕ್ತಿಗಳ ವಿರುದ್ಧ ಒಂದಾಗಿ ಚುನಾವಣೆಯನ್ನು ಎದುರಿಸಿ ಆ ಶಕ್ತಿಗಳನ್ನು ಸೋಲಿಸುವುದು ತುರ್ತು ಅಗತ್ಯವಾಗಿದೆ.



**ಉತ್ತರ ಪ್ರದೇಶ ಸೇರಿದಂತೆ ಐದು ರಾಜ್ಯ ವಿಧಾನ ಸಭೆಗೆ 2022ರ ಆರಂಭದಲ್ಲಿ ಚುನಾವಣೆ ನಡೆಯಲಿದೆ. ಪಂಜಾಬದಲ್ಲಿ ಕಾಂಗ್ರೆಸ್ ಸರ್ಕಾರವಿದೆ. ಇತರ ನಾಲ್ಕು ರಾಜ್ಯಗಳಲ್ಲಿ ಬಿಜೆಪಿಯದೆ ಆಡಳಿತ. ಬೆಲೆ ಏರಿಕೆ, ನಿರುದ್ಯೋಗ, ಹಸಿವು, ಬಡತನ, ಹಣದುಬ್ಬರವೇ ಮುಂತಾದವು ಕೇಂದ್ರದಲ್ಲಿಯೂ ಸರ್ಕಾರ ನಡೆಸುತ್ತಿರುವ ಬಿಜೆಪಿಗೆ ಚುನಾವಣಾ ತಲೆನೋವನ್ನು ತಂದಿದೆ. ನರೇಂದ್ರ ಮೋದಿ ಮೋಡಿಯಲ್ಲಿ ತೇಲಿಹೋಗಿದ್ದ ಜನತೆ ವಾಸ್ತವ ಪ್ರಪಂಚಕ್ಕೆ ಮರಳಿದರೆ ಬಿಜೆಪಿಗೆ ಕಷ್ಟ ಕಾದಿದೆ.**


# ಐದು ರಾಜ್ಯ ಚುನಾವಣೆ: ಬಿಜೆಪಿ ತಲೆನೋವು

ರಾಜಸೂತ್ರ

ಎಂ.ಕೆ. ಭಾಸ್ಕರ ರಾವ್
ಹಿರಿಯ ಪತ್ರಕರ್ತರು



ಕೇಂದ್ರದಲ್ಲಿ ಆಡಳಿತ ನಡೆಸುತ್ತ ಭಾರತದ ಉದ್ದಗಲಕ್ಕೆ ತನ್ನ ಏಕ ಚಕ್ರಾಧಿಪತ್ಯವನ್ನು ವಿಸ್ತರಿಸುವ ಹವಣಿಕೆಯ ರಾಜಕೀಯದಲ್ಲಿ ತೊಡಗಿರುವ ಭಾರತೀಯ ಜನತಾ ಪಕ್ಷಕ್ಕೆ ಉತ್ತರ ಪ್ರದೇಶ ಸೇರಿದಂತೆ ಐದು ರಾಜ್ಯ ವಿಧಾನ ಸಭೆಗಳಿಗೆ 2022ರ ಆರಂಬಿಕ ತಿಂಗಳುಗಳಲ್ಲಿ ನಡೆಯಬೇಕಿರುವ ಚುನಾವಣೆ ಭಾರೀ ಪ್ರತಿರೋಧವನ್ನು ಒಡ್ಡುವ ಸಾಧ್ಯತೆ ದಿನಗಳೆದಂತೆ ಹೆಚ್ಚೆಚ್ಚು ಸ್ಫುಟವಾಗುತ್ತಿದೆ. ಪಶ್ಚಿಮ ಬಂಗಾಳದ ವಿಧಾನ ಸಭಾ ಚುನಾವಣೆಯಲ್ಲಿ ಅದು ಎದುರಿಸಿದ ಘೋರ ಪರಾಭವ ಹೋದಲ್ಲಿ ಬಂದಲ್ಲಿ ಪಕ್ಷಕ್ಕೆ ಕಪ್ಪ ತಂದುಕೊಡುವ ಅಶ್ವಮೇಧಾಶ್ವವನ್ನು ಕಟ್ಟಿ ಹಾಕಿದೆ. ಸಂಖ್ಯಾ ದೃಷ್ಟಿಯಿಂದ ಪಶ್ಚಿಮ ಬಂಗಾಳದಲ್ಲಿ ಹಿಂದೆಂದೂ ಕಂಡಿರದ ಜಯವನ್ನು ಬಿಜೆಪಿ ಕಂಡಿರುವುದು ದಿಟವೇ ಹೌದಾದರೂ ಆಡಳಿತ ಸೂತ್ರ ಹಿಡಿದೇ ಸಿದ್ಧ ಎಂದು ಹೊರಟಿದ್ದ ಅದರ ಛಲ ಮುಗ್ಗರಿಸಿದ ರೀತಿ ಚುನಾವಣೆಯನ್ನು ಲೀಲಾಜಾಲವಾಗಿ ಎದುರಿಸುವ ಅದರ ಧೈರ್ಯವನ್ನು ಉಡುಗಿಸಿದೆ.



ಪ್ರಸ್ತುತ, ಚುನಾವಣೆ ನಡೆಯಬೇಕಿರುವ ಪಂಜಾಬದಲ್ಲಿ ಕಾಂಗ್ರೆಸ್ ಸರ್ಕಾರವಿದೆ. ಅದರ ಹೊರತಾಗಿಸಿ ಉತ್ತರ ಪ್ರದೇಶ, ಉತ್ತರಾಖಾಂಡ್, ಮಣಿಪುರ, ಗೋವಾಗಳಲ್ಲಿ ಬಿಜೆಪಿ ಆಡಳಿತವಿದೆ. ಸರ್ಕಾರ ಇರುವಲ್ಲಿ ಅದನ್ನು ಉಳಿಸಿಕೊಳ್ಳುವ ಹಾಗೂ ಇಲ್ಲದ ಪಂಜಾಬದಲ್ಲಿ ಸರ್ಕಾರ ಸ್ಥಾಪಿಸುವ ಸವಾಲು ಬಿಜೆಪಿ ಮುಂದಿದೆ. ಚುನಾವಣೆ ಯಥಾಪ್ರಕಾರ ನಡೆಯುತ್ತದೆ, "ಎತ್ತು ಏರಿಗೆ ಕೋಣ ನೀರಿಗೆ" ಸ್ವಭಾವದಲ್ಲಿರುವ ವಿರೋಧ ಪಕ್ಷಗಳ ನಡುವೆ ಆಡಳಿತ ವಿರೋಧಿ ಮತಗಳು ಹಂಚಿಕೆಯಾಗಿ ಬಿಜೆಪಿ ಪುನಃ ಅಧಿಕಾರಕ್ಕೆ ಬಂದೇ ಬರುತ್ತದೆಂಬ ಅತಿಯಾದ ಆತ್ಮವಿಶ್ವಾಸ ಬರಲಿರುವ ಚುನಾವಣೆಯಲ್ಲಿ ಚಲಾವಣೆಗೆ ಬಾರದ ನಾಣ್ಯವಾಗಬಹುದು. ಸುಲಭದಲ್ಲಿ ಅಧಿಕಾರವನ್ನು ತನ್ನ ಕಬ್ಜಾಕ್ಕೆ ತೆಗೆದುಕೊಳ್ಳುವ ಆ ಪಕ್ಷದ ಸಾಮ್ರಾಜ್ಯ ವಿಸ್ತರಣಾ ಯೋಜನೆ ಅಷ್ಟೆಲ್ಲ ಸುಲಭದಲ್ಲಿ ಅನುಷ್ಠಾನಗೊಳ್ಳಲಿಕ್ಕಿಲ್ಲ ಎನ್ನುವುದು ಅದರ ತಲೆನೋವಿನ ಮೂಲ ಕಾರಣ. ಐದೂ ರಾಜ್ಯಗಳನ್ನು ಗೆಲ್ಲುವುದು ಹೇಗೆ ಎನ್ನುವುದರ ಜೊತೆಗೇ ಎದುರಾಗಬಹುದಾದ ಸೋಲನ್ನು ತಡೆಯುವುದು ಹೇಗೆ ಎಂಬ ಕುರಿತಾದ ಚಿಂತನಮಂಥನ ಬಿಜೆಪಿ ಉನ್ನತ ಮಟ್ಟದ ಸಭೆಯಲ್ಲಿ ನಡೆದಿದೆ. ಇತ್ತೀಚೆಗೆ ಫಲಿತಾಂಶ ಹೊರಬಿದ್ದಿರುವ ಲೋಕಸಭೆ, ವಿಧಾನ ಸಭೆ ಉಪ ಚುನಾವಣೆಗಳಲ್ಲಿ ಪಕ್ಷ ಕೆಲವು ಕ್ಷೇತ್ರಗಳಲ್ಲಿ ಪಡೆದಿರುವ ಜಯ, ಹಲವೆಡೆ ಕಂಡಿರುವ ಸೋಲಿಗೆ ಕಾರಣವಾಗಿರುವ ಅಂಶಗಳ ವಿಚಾರದಲ್ಲಿ ಆತ್ಮವಿಮರ್ಶಾ ಧಾಟಿಯ ಚರ್ಚೆ ನಡೆದಿರುವುದಾಗಿ ವರದಿಯಾಗಿದೆ. ಹಾಗೆ ನಡೆದ ಚರ್ಚೆಯಲ್ಲಿ ಕರ್ನಾಟಕದ ಹಾನಗಲ್ ವಿಧಾನ ಸಭಾ ಸೀಟಿನ ಸೋಲೂ ಪ್ರಮುಖವಾದುದಾಗಿದೆ. ರಾಜ್ಯದಲ್ಲಿರುವ ಬಿಜೆಪಿ ಸರ್ಕಾರಕ್ಕೆ ಸಿಂದಗಿ ಮತ್ತು ಹಾನಗಲ್ ಉಪ ಚುನಾವಣೆ ಫಲಿತಾಂಶ ಬೇವು ಬೆಲ್ಲ. ಸಿಂದಗಿ ಗೆಲುವಿನ ಬೆಲ್ಲಕ್ಕಿಂತ ಹಾನಗಲ್ ಸೋಲಿನ ಬೇವೇ ಹೆಚ್ಚಾಗಿ ಆಡಳಿತ ಪಕ್ಷ ಕಪಾಳಮೋಕ್ಷದ ಅನುಭವದಲ್ಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತವರು ಜಿಲ್ಲೆ ಹಾವೇರಿ. ಅದೇ ಜಿಲ್ಲೆಯ ಹಾನಗಲ್‌ನಲ್ಲಿ ಪಕ್ಷ ಸೋಲನ್ನು ಕಂಡಿತೆಂದಾದರೆ ಅದರಲ್ಲಿ ಬಹಳ ದೊಡ್ಡದೇ ಆದೊಂದು ಸಂದೇಶದ ರವಾನೆಯಾಗಿದೆ ಎಂಬ ವ್ಯಾಖ್ಯಾನ ಆ ಪಕ್ಷದ ಒಳಗೇ ನಡೆದಿದೆ.





ಉತ್ತರ ಪ್ರದೇಶ ವಿಧಾನ ಸಭೆಗೆ 2017ರಲ್ಲಿ ಚುನಾವಣೆ ನಡೆದಾಗ ರಾಜಕೀಯ ವೀಕ್ಷಕರನೇಕರ ಪ್ರಕಾರ ಬಿಜೆಪಿ ಸೋಲಿನ ದವಡೆಯಲ್ಲಿ ನಿಂತಿತ್ತು. ಅದಕ್ಕೆ ಅವರೆಲ್ಲ ಕೊಟ್ಟ ಕಾರಣ ಐನೂರು ಮತ್ತು ಸಾವಿರ ಮುಖ ಬೆಲೆಯ ದೊಡ್ಡ ಮೊತ್ತದ ನೋಟುಗಳ ಅಮಾನ್ಯೀಕರಣ. ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಈ ಕ್ರಮ (ಕೇಂದ್ರ ಸರ್ಕಾರದ) ಆಡಳಿತ ವಿರೋಧಿ ಅಲೆಯನ್ನು ಸೃಷ್ಟಿಸುತ್ತದೆ, ಬಿಜೆಪಿ ಅಧಿಕಾರಕ್ಕೆ ಬರಲಾರದೆಂಬುದು ಲೆಕ್ಕಾಚಾರವಾಗಿತ್ತು. ಉತ್ತರ ಪ್ರದೇಶದ್ದು 403 ಸದಸ್ಯ ಬಲದ ವಿಧಾನ ಸಭೆ. ಆ ಚುನಾವಣೆಯಲ್ಲಿ ಬಿಜೆಪಿ 312 ಸೀಟನ್ನು ಗೆದ್ದಾಗ ಅದನ್ನು ನಂಬುವುದೇ ಕಷ್ಟವಾಗಿತ್ತು. ಈ ಮಾತಿಗೆ ಈಗ ಐದು ವರ್ಷ ಭರ್ತಿಯಾಗುವುದರಲ್ಲಿದೆ. 312 ಶಾಶಕರನ್ನು ಆಡಳಿತ ಪಕ್ಷ ಹೊಂದಿದ್ದರೂ ಅದರಲ್ಲಿ ಯಾರೊಬ್ಬರಿಗೂ ಮುಖ್ಯಮಂತ್ರಿಯಾಗುವ ಅರ್ಹತೆ ಇಲ್ಲ ಎನ್ನುವುದು ಬಿಜೆಪಿ ವರಿಷ್ಠರ ತೀರ್ಮಾನವಾಗಿತ್ತು. ಅದರ ಫಲವೆಂದರೆ ಗೋರಖಪುರ ಕ್ಷೇತ್ರದ ಲೋಕಸಭಾ ಸದಸ್ಯರಾಗಿದ್ದ ಯೋಗಿ ಆದಿತ್ಯನಾಥರನ್ನು ಕರೆತಂದು ಸಿಎಂ ಗದ್ದುಗೆಯಲ್ಲಿ ಕೂರಿಸಿದ್ದು. ಅವರ ಸಿಎಂ ಗಿರಿಯ ವಿಚಾರದಲ್ಲಿ ಜನ ಏನು ಅಭಿಪ್ರಾಯ ವ್ಯಕ್ತಪಡಿಸಲಿದ್ದಾರೆನ್ನುವುದರ ಶರಾವನ್ನು ಬರಲಿರುವ ಚುನಾವಣೆ ಫಲಿತಾಂಶ ಬರೆಯಲಿದೆ.






ಐದು ವರ್ಷದ ಹಿಂದೆ ಜನಮನ ಯೋಚಿಸುತ್ತಿದ್ದ ರೀತಿಗೂ ಇಂದಿನ ಪರಿಸ್ಥಿತಿಗೂ ಆಕಾಶ ಭೂಮಿಯ ಅಂತರವಿದೆ. ಅಂದು ಜನಮಾನಸದಲ್ಲಿ ಮೋದಿ ಮೋಡಿ ಇತ್ತು. ಇಂದು ಮೋದಿ ಇದ್ದಾರೆ ಆದರೆ ಮೋಡಿ ಕರಗುತ್ತಿದೆ. ಬೆಲೆ ಏರಿಕೆ, ಹಣದುಬ್ಬರ, ಕೋವಿಡ್ ಸಾಂಕ್ರಾಮಿಕವನ್ನು ನಿಯಂತ್ರಿಸಲಾಗದ ಅಧಿಕಾರಶಾಹಿ, ಅನಿಯಂತ್ರಿತವಾಗಿ ಹೆಚ್ಚುತ್ತಿರುವ ಅಪರಾಧ ಪ್ರಕರಣ, ಕುಸಿಯುತ್ತಿರುವ ಕಾನೂನು ಮತ್ತು ಸುವ್ಯವಸ್ಥೆ, ನಿಲ್ಲದ ರೈತ ಚಳವಳಿ, ಜಾಟ್ ಸಮುದಾಯದಲ್ಲಿ ಹೆಚ್ಚುತ್ತಿರುವ ಅಸಹನೆ, ಸಮಾಜವಾದಿ ಪಕ್ಷದತ್ತ ಪುನಃ ವಾಲುತ್ತಿರುವ ಇತರ ಹಿಂದುಳಿದ ಜಾತಿಗಳು (ಒಬಿಸಿ), ತಮ್ಮ ಮನಸ್ಸಿನಲ್ಲಿರುವುದನ್ನು ಇನ್ನೂ ಬಹಿರಂಗಪಡಿಸದೆ ಬಿಜೆಪಿಯ ರಕ್ತದೊತ್ತಡ ಹೆಚ್ಚಿಸಿರುವ ಬ್ರಾಹ್ಮಣ ಸಮುದಾಯ ಆಡಳಿತ ಪಕ್ಷದ ಮಂಡೆ ಬಿಸಿಯನ್ನು ಹೆಚ್ಚಿಸಿವೆ. ಬಿಜೆಪಿಯ ಏಕೈಕ ಆಶಾಕಿರಣವೆಂದರೆ ವಿರೋಧ ಪಕ್ಷಗಳ ನಡುವೆ ನಡೆದಿರುವ ಕಚ್ಚಾಟ. ಮುಲಾಯಂ ಸಿಂಗ್ ಯಾದವ್ ಮತ್ತು ಮಗ ಅಖಿಲೇಶ ಯಾದವ್ ಪರಸ್ಪರ ಮುನಿಸಿಕೊಂಡಿದ್ದಾರೆ. ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗದು. ಈ ಇಬ್ಬರನ್ನೂ ಕಂಡರೆ ಮಾಯಾವತಿಗೆ ಒಗ್ಗದು. ಮಾಯಾವತಿಯ ಮುಖ ಈ ಇಬ್ಬರಿಗೂ ಅಲರ್ಜಿ. ಮಾಯಾವತಿಗೆ ಕಾಂಗ್ರೆಸ್, ಬಿಜೆಪಿ ಎಂದರೆ ವಾಕರಿಕೆ. ಬಿಜೆಪಿ ವಿರೋಧಿಸುವುದಕ್ಕಾಗಿ ಕಾಂಗ್ರೆಸ್ ಜೊತೆ ಕೈಜೋಡಿಸುವುದು ಸ್ವತಃ ಮುಖ್ಯಮಂತ್ರಿ ಸ್ಥಾನಾಕಾಂಕ್ಷಿ ಆಗಿರುವ ಮಾಯಾವತಿಗೆ ಸುತರಾಂ ಇಷ್ಟವಿಲ್ಲ. ಕಾಂಗ್ರೆಸ್ ಪಕ್ಷ ಮುಂದಿನ ಮುಖ್ಯಮಂತ್ರಿಯಾಗಿ ಪ್ರಿಯಾಂಕಾ ಗಾಂಧಿ ವಾಡ್ರಾರನ್ನು ತರಲು ನಿರ್ಣಯಿಸಿದೆ. ಹಾಗಾಗಿ ಆಪ್ ಸೇರಿದಂತೆ ಇತರೆಲ್ಲ ವಿರೋಧ ಪಕ್ಷಗಳು ಕಾಂಗ್ರೆಸ್ ವಿರುದ್ಧ ತೋಳೇರಿಸಿವೆ. ಆದರೆ ತಾನೇ ಮೇಲುಗೈ ಪಡೆಯಬೇಕೆಂದು ಪರಸ್ಪರ ಕತ್ತಿ ಹಿರಿದು ನಿಂತಿವೆ. ವಿರೋಧ ಪಕ್ಷಗಳ ಅನೈಕ್ಯ ಬಿಜೆಪಿಯ ಬಲ ಎನ್ನುವುದು ಮತ್ತೊಮ್ಮೆ ಸಾಬೀತಾಗಲಿದೆಯೆ...? ಗೊತ್ತಿಲ್ಲ.

ಉತ್ತರಾಖಾಂಡಾ ಬಿಜೆಪಿ ಆಡಳಿತವಿರುವ ಮತ್ತೊಂದು ರಾಜ್ಯ. 70 ಶಾಸಕ ಬಲದ ವಿಧಾನ ಸಭೆ ಅಲ್ಲಿಯದು. ಉತ್ತರ ಪ್ರದೇಶದೊಂದಿಗೆ ಯಾವ ದೃಷ್ಟಿಕೋನದಲ್ಲೂ ಹೋಲಿಸಿಕೊಳ್ಳಲಾಗದ ಈ ರಾಜ್ಯದಲ್ಲಿ ರಾಜಕೀಯ ತುಮುಲ ಮಾತ್ರ ಭಾರೀ ಜೋರಾಗಿಯೇ ಇದೆ. 70 ಶಾಸಕರ ಪೈಕಿ 57 ಶಾಸಕರು ಬಿಜೆಪಿಯವರೇ ಇರುವ ರಾಜ್ಯದಲ್ಲಿ ಎಲ್ಲವೂ ಸುಗಮವಾಗಿಯೇ ನಡೆಯಬೇಕಿತ್ತು. ಆದರೆ ಇಷ್ಟರಲ್ಲೇ ಭರ್ತಿಯಾಗಲಿರುವ ಐದು ವರ್ಷದ ಅವಧಿಯಲ್ಲಿ ಆ ಪಕ್ಷದ ಸರ್ಕಾರ ಮೂವರು ಮುಖ್ಯಮಂತ್ರಿಗಳನ್ನು ಕಂಡಿದೆ ಎನ್ನುವುದು ಸ್ಥಳೀಯ ಬಿಜೆಪಿಯಲ್ಲಿ ಕುದಿಯುತ್ತಿರುವ ಆಂತರಿಕ ಬಂಡಾಯದ ಕಥೆಯನ್ನು ಹೇಳುತ್ತದೆ.

ಕರ್ನಾಟಕದಲ್ಲಿ 1989ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ವೀರೇಂದ್ರ ಪಾಟೀಲರ ನಾಯಕತ್ವದಲ್ಲಿ 179 ಸೀಟುಗಳನ್ನು ಗೆದ್ದ ಪ್ರಸಂಗ ಇಲ್ಲಿ ನೆನಪಾಗುತ್ತದೆ. ಅದಕ್ಕೆ ಮೊದಲು ಕಾಂಗ್ರೆಸ್ಸು ಅಷ್ಟು ಸ್ಥಾನ ಗೆದ್ದಿರಲಿಲ್ಲ. ಆ ನಂತರ ಈವರೆಗೆ ಆ ದಾಖಲೆಯನ್ನು ಸ್ವತಃ ಕಾಂಗ್ರೆಸ್ ಸೇರಿದಂತೆ ಯಾವ ಪಕ್ಷವೂ ಮುರಿದಿಲ್ಲ. ಆದರೇನಂತೆ ಗೆದ್ದ ಪಾಟೀಲರು ಮುಖ್ಯಮಂತ್ರಿಯಾಗಿದ್ದಿದ್ದು ಅಲ್ಪಾವಧಿಗೆ. ಅಷ್ಟೆಲ್ಲ ಬಹುಮತವಿದ್ದ ಆ ಪಕ್ಷದ ಸರ್ಕಾರ ವೀರೇಂದ್ರ ಪಾಟೀಲ, ಬಂಗಾರಪ್ಪ, ವೀರಪ್ಪ ಮೊಯಿಲಿ ಹೀಗೆ ಮೂರು ಮುಖ್ಯಮಂತ್ರಿಗಳನ್ನು ನೋಡಿತು. ನಂತರ ನಡೆದ ಚುನಾವಣೆಯಲ್ಲಿ ಆಡಳಿತ ಪಕ್ಷ ವಿಧಾನ ಸಭೆಯಲ್ಲಿ ಮೂರನೇ ಸ್ಥಾನಕ್ಕೆ ಕುಸಿಯಿತು. ಉತ್ತರಾಖಾಂಡದಲ್ಲಿನ ರಾಜಕೀಯ ತುಮುಲವನ್ನು ನೋಡಿದರೆ ಅಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದು ಈ ಕ್ಷಣದ ಮಟ್ಟಿಗೆ ಅನುಮಾನ. ಮೋದಿ ಹೆಸರು ಅಲ್ಲಿ ಕೆಲಸಕ್ಕೆ ಬಾರದಂತಾಗಲು ಆಡಳಿತ ಪಕ್ಷವೇ ಶ್ರಮಿಸುತ್ತಿರುವುದರಿಂದ ವಿರೋಧ ಪಕ್ಷಗಳ ಕೆಲಸ ಕಡಿಮೆಯಾಗಿದೆ.

ಈಶಾನ್ಯ ಭಾರತದ ಮಣಿಪುರದ ವಿಧಾನ ಸಭಾ ಸಾಮರ್ಥ್ಯ 60 ಸೀಟಿನದು. ಕಳೆದ ಚುನಾವಣೆಯಲ್ಲಿ ಬಿಜೆಪಿ ಅಲ್ಲಿ ಗೆದ್ದುದು 21 ಸೀಟುಗಳನ್ನು. ಸರಳ ಬಹುಮತಕ್ಕೆ 31 ಸೀಟು ಬೇಕಾಗಿತ್ತು. ಬಿಜೆಪಿಗೆ ಅಷ್ಟು ಬರಲಿಲ್ಲ, ಆದರೆ ಅಧಿಕಾರ ಬರುವುದು ತಪ್ಪಲಿಲ್ಲ.





ಸ್ಥಳೀಯವಾದ ಎರಡು ಮೂರು ಪಕ್ಷಗಳನ್ನು ಬಲೆಗೆ ಬೀಳಿಸಿಕೊಂಡ ಬಿಜೆಪಿ ಆಡಳಿತ ಸೂತ್ರ ಹಿಡಿದಿದ್ದು ಮತ್ತೆ ಅಧಿಕಾರಕ್ಕೆ ಬರುವ ಆಸೆಯಲ್ಲಿದೆ. ಆಡಳಿತ ಪಕ್ಷದೊಂದಿಗೆ ಈ ನಾಲ್ಕೈದು ವರ್ಷ ಕೈಜೋಡಿಸಿದ್ದ ಕಾನ್ರಾಡ್ ಸಂಗ್ಮಾ ನೇತೃತ್ವದ ಎನ್‌ಪಿಪಿ ಈ ಬಾರಿ ಎಲ್ಲ 60 ಸ್ಥಾನಕ್ಕೂ ಸ್ವತಂತ್ರವಾಗಿ ಸ್ಪರ್ಧಿಸುವ ತೀರ್ಮಾನ ಪ್ರಕಟಿಸಿದ್ದು ಇದು ಬಿಜೆಪಿ ಚಿಂತೆಯನ್ನು ದುಪ್ಪಟ್ಟು ಮಾಡಿದೆ.

ಚುನಾವಣೆ ನಡೆಯಲಿರುವ ಇನ್ನೊಂದು ಚಿಕ್ಕ ರಾಜ್ಯ ಗೋವಾ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಅಲ್ಲಿಯ ಜನ ಬಹುಮತ ನೀಡಿದ್ದರು. ಆ ಸಮಯದಲ್ಲಿ ಮುಖ್ಯಮಂತ್ರಿ ಯಾರು ಆಗಬೇಕೆಂಬ ವಿಚಾರದಲ್ಲಿ ಅಂದಿನ ಎಐಸಿಸಿ ಪ್ರಧಾನ ಕಾರ್ಯದರ್ಶಿ ದಿಗ್ವಿಜಯ ಸಿಂಗ್ ಮಾಡಿದ ಮೂರನೇ ದರ್ಜೆ ರಾಜಕೀಯದ ಕಾರಣವಾಗಿ ಅಧಿಕಾರ ಕಾಂಗ್ರೆಸ್ ಕೈ ತಪ್ಪಿ ಬಿಜೆಪಿ ಬುಟ್ಟಿಗೆ ಬಿತ್ತು. ನರೇಂದ್ರ ಮೋದಿ ಸಂಪುಟದಲ್ಲಿ ರಕ್ಷಣಾ ಸಚಿವರಾಗಿದ್ದ ಮನೋಹರ ಪರಿಕ್ಕರ್ ಅವರ ಜನಾದರಣೆ ಅವರನ್ನು ಸಿಎಂ ಪಟ್ಟದಲ್ಲಿ ಕುಳ್ಳಿರಿಸಿತು. ಮನೋಹರ್ ಈಗ ಇಲ್ಲ. ಅವರನ್ನು ಸರಿಗಟ್ಟುವ ನಾಯಕತ್ವ ಗುಣವುಳ್ಳವರು ಬಿಜೆಪಿಯಲ್ಲೂ ಇಲ್ಲ; ಇತರ ಪಕ್ಷಗಳಲ್ಲೂ ಇಲ್ಲ. ಒಂದು ಬಗೆಯ ಶೂನ್ಯ ಆವರಿಸಿದ ಸ್ಥಿತಿಯಲ್ಲಿ 40 ಸ್ಥಾನ ಬಲದ ಗೋವಾ ವಿಧಾನ ಸಭೆಗೆ ಚುನಾವಣೆ ನಡೆಯಲಿದೆ. ಗೋವಾದಲ್ಲಿ ಬಿಜೆಪಿಗೆ ಒಂದು ಕಡೆಯಿಂದ ಆಮ್ ಆದ್ಮಿ ಪಕ್ಷ ಇನ್ನೊಂದು ಕಡೆಯಿಂದ ತೃಣಮೂಲ ಕಾಂಗ್ರೆಸ್ ಕಾವನ್ನು ಮುಟ್ಟಿಸುತ್ತಿವೆ. ಆಪ್‌ನ ಅರವಿಂದ ಕೇಜ್ರೀವಾಲ್, ಟಿಎಂಸಿಯ ಮಮತಾ ಬ್ಯಾನರ್ಜಿ ಬಿಜೆಪಿಯನ್ನು ಮನೆಗೆ ಕಳಿಸುವ ಸಂಕಲ್ಪ ಮಾಡಿದ್ದಾಗಿದೆ. ಗೋವಾದ ಜನರಿಗೆ ತೋರಿಸಲು ಮನೋಹರ ಪಾರಿಕ್ಕರ್ ಮುಖ ಇಲ್ಲವಾಗಿರುವುದು ಬಿಜೆಪಿಯ ಕಷ್ಟವನ್ನು ಹೆಚ್ಚಿಸಿದೆ.





ಉತ್ತರ ಪ್ರದೇಶ, ಉತ್ತರಾಖಾಂಡ, ಮಣಿಪುರ ಮತ್ತು ಗೋವಾ ಈ ನಾಲ್ಕು ರಾಜ್ಯಗಳಲ್ಲಿ ಇರುವ ಸರ್ಕಾರವನ್ನು ಉಳಿಸಿಕೊಳ್ಳುವುದು ಬಿಜೆಪಿಯ ಮೊದಲ ಚಿಂತೆಯಾದರೆ ಐದು ವರ್ಷದ ಹಿಂದೆ ಇದ್ದ ಅಧಿಕಾರವನ್ನು ಕಳೆದುಕೊಂಡ ಪಂಜಾಬದಲ್ಲಿ ಅದನ್ನು ಮರಳಿ ಸ್ಥಾಪಿಸುವ ಗುರಿ ಆ ಪಕ್ಷದ ಮುಂದಿದೆ. ಹತ್ತು ವರ್ಷ ಕಾಲ ಶಿರೋಮಣಿ ಅಕಾಲಿ ದಳದೊಂದಿಗೆ ಅಧಿಕಾರ ನಡೆಸಿದ ಬಿಜೆಪಿ ಐದು ವರ್ಷದ ಹಿಂದೆ ಕಾಂಗ್ರೆಸ್ ನಾಯಕ ಕ್ಯಾಪ್ಟನ್ ಅಮರೀಂದರ್ ಸಿಂಗ್ ಮುಂದೆ ಮಂಡಿಯೂರಬೇಕಾಯಿತು. ದಶಕಗಳಿಂದ ಮರೀಚಿಕೆಯಾಗಿದ್ದ ಅಧಿಕಾರವನ್ನು ಪಕ್ಷಕ್ಕೆ ತಂದಿತ್ತ ಕ್ಯಾಪ್ಟನ್ ಈಗ ಕಾಂಗ್ರೆಸ್‌ನಲ್ಲಿಲ್ಲ. ಆದರೆ ಇನ್ನೊಂದು ಕಡೆ ಬಿಜೆಪಿ ಜೊತೆಗೆ ಶಿರೋಮಣಿ ಅಕಾಲಿ ದಳವೂ ಇಲ್ಲ. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳನ್ನು ಪ್ರತಿಭಟಿಸಿ ಮುಖ್ಯವಾಗಿ ಪಂಜಾಬ್, ಹರ್‍ಯಾಣಾ ರೈತರು ನಡೆಸಿರುವ ಚಳವಳಿ ದೇಶದ ಜಗತ್ತಿನ ಗಮನ ಸೆಳೆದಿದೆ. ಆದರೆ ಬಿಜೆಪಿಗೆ ಮಾತ್ರ ಅದೊಂದು ಜನಾಂದೋಲನ ಎಂದು ವರ್ಷ ಉರುಳಿದರೂ ಅನಿಸಿಲ್ಲ. ಕೃಷಿ ಕಾಯ್ದೆ ಈಗ ಇರುವಂತೆಯೇ ಮುಂದುವರಿಯಬೇಕೇ ಅಥವಾ ರೈತರು ಮಂಡಿಸಿರುವ ಬೇಡಿಕೆ ಸರಿಯೇ ಎನ್ನುವುದು ಈ ಚುನಾವಣೆಯಲ್ಲಿ ನಿಕಷಕ್ಕೆ ಒಳಗಾಗಲಿದೆ.

ನೂರಾ ಹದಿನೇಳು ಸದಸ್ಯ ಬಲದ ಪಂಜಾಬ್ ವಿಧಾನ ಸಭೆ ಚುನಾವಣೆ ಕಾಂಗ್ರೆಸ್ಸಿಗೂ ಕಷ್ಟದ್ದೇ ಆಗಿರುವ ಸವಾಲನ್ನು ಮುಂದೊಡ್ಡಿದೆ. ಅಲ್ಲಿದ್ದ ಕ್ಯಾಪ್ಟನ್ ಸರ್ಕಾರದ ವಿರುದ್ಧ ಯುದ್ಧ ಸಾರಿದವರು ಅದೇ ಪಕ್ಷದ ಮುಖ್ಯಸ್ಥರಾಗಿ ನೇಲಕಗೊಂಡ ನವಜೋತ ಸಿಂಗ್ ಸಿದು. ಸಿದು ಆ ರಾಜ್ಯಕ್ಕೆ ತಮ್ಮ ಆಯ್ಕೆಯ ವ್ಯಕ್ತಿ ಚೆನ್ನಿಯವರನ್ನು ಸಿಎಂ ಸ್ಥಾನದಲ್ಲಿ ಕೂರಿಸಿದ್ದು ಚುನಾವಣೆ ಬಳಿಕ ತಾವೇ ಸಿಎಂ ಆಗುವ ಕನಸಿನಲ್ಲಿದ್ದಾರೆ. ಕ್ಯಾಪ್ಟನ್ ತಮ್ಮದೇ ಆದೊಂದು ಪ್ರಾದೇಶಿಕ ಪಕ್ಷ ಕಟ್ಟಿದ್ದು ಅದು ಚುನಾವಣೆಯಲ್ಲಿ ಬಿಜೆಪಿ ಜೊತೆ ಕೈ ಜೋಡಿಸುವ ಲಕ್ಷಣವಿದೆ. ಶಿರೋಮಣಿ ಅಕಾಲಿ ದಳ, ಕಾಂಗ್ರೆಸ್, ಬಿಜೆಪಿ ಜೊತೆಗೆ ಹಣಾಹಣಿ ಕದನಕ್ಕೆ ಆಮ್ ಆದ್ಮಿ ಪಾರ್ಟಿ ಮುಂದಾಗಿದೆ. ಪಂಜಾಬ್‌ನ ಸದ್ಯದ ರಾಜಕೀಯ ಗುಣ ಲಕ್ಷಣ ಅರಿತವರ ಪ್ರಕಾರ ಆಮ್ ಆದ್ಮಿ ಪಾರ್ಟಿ ರೇಸಿನಲ್ಲಿ ಬಹಳ ಮುಂದಿದೆ.



# ತಾಯ್ತನ ಮಾರಾಟವೂ ಮತ್ತು ಮಕ್ಕಳ ಮಾರಾಟ ಜಾಲ..!

● ಪರಶಿವ ಧನಗೂರು



ಕರ್ನಾಟಕದಲ್ಲಿ ಮಾನವ ಕಳ್ಳಸಾಗಾಣಿಕೆ ನಿಗ್ರಹ ದಳ ಮತ್ತೆ ಆಕ್ಟೀವ್ ಆಗಲೇಬೇಕಿದೆ. ಏಕೆಂದರೆ ಈಗ ರಾಜ್ಯಾದ್ಯಂತ ಮತ್ತೆ ಮಕ್ಕಳ ಅಪಹರಣ-ಮಾರಾಟ ಜಾಲದ ವಾಸನೆ ಹರಿದಾಡುತ್ತಿದೆ. ಕಳೆದ ತಿಂಗಳು ಹೈಟೆಕ್ ಸಿಟಿ ಬೆಂಗಳೂರಿನ ಮೆಜೆಸ್ಟಿಕ್ ರೈಲ್ವೆ ನಿಲ್ದಾಣದಲ್ಲಿ, ಮಾರುವೇಷದಲ್ಲಿ, ಕತ್ತಲರಾತ್ರಿಯಲ್ಲಿ ಮಕ್ಕಳಕಳ್ಳರನ್ನು ಬಂಧಿಸಲು ಹೊಂಚು ಹಾಕಿ ಕಾದು ಕುಳಿತಿದ್ದ ಪೊಲೀಸರ ಬಲೆಗೆ ಹಸುಗೂಸಿನ ಅಂತಾರಾಜ್ಯ ಮಾನವ ಕಳ್ಳಸಾಗಾಣಿಕೆದಾರರಾದ, ರಂಜನಾ ದೇವಿದಾಸ್ ಖಂಡಗಳೆ ಮತ್ತು ದೇವಿ ಎಂಬಾಕೆ ಸೆರೆಸಿಕ್ಕಿ, ಬರೋಬ್ಬರಿ ಹನ್ನೆರಡು ಮುಗ್ಧ ಮಕ್ಕಳನ್ನು ಬೆಂಗಳೂರು ಪೊಲೀಸರು ರಕ್ಷಿಸಿದಾಗಲೆ ಅವರಿಗೆ ಖಚಿತವಾಗಿ ಹೋದ ವಿಷಯವೇನೆಂದರೆ ಈಗ ಮೊದಲಿಗಿಂತಲೂ ಬಿಂದಾಸ್ ಆಗಿ ರಾಜ್ಯದಲ್ಲಿ ನವಜಾತ ಶಿಶುಗಳ ಮಾರಾಟ ಜಾಲ (ಬೇಬಿ ಸೆಲ್ಲಿಂಗ್ ರ್ಯಾಕೆಟ್) ಮತ್ತೆ ಸಕ್ರಿಯವಾಗಿದೆ ಎಂಬುದು.

ಈ ಮಕ್ಕಳ ಅಪಹರಣ-ಮಾರಾಟ ಜಾಲದ ಕಿಂಗ್ ಪಿನ್ ಬೆಂಗಳೂರು ನಗರದ ವಿಲ್ಸನ್ ಗಾರ್ಡನ್ ನಿವಾಸಿ ದೇವಿ ಎಂಬಾಕೆ ಮತ್ತೊಬ್ಬ ಕಿಂಗ್ ಪಿನ್ ರೇಖಾ ಮರಣಾನಂತರ ತಾನೇ ಈ ಮಕ್ಕಳ ಮಾರಾಟದ ಸಾಮ್ರಾಜ್ಯಕ್ಕೆ ಅಧಿಪತಿಯಾಗಿ ಪ್ರತಿಷ್ಠಾಪನೆಗೊಂಡು ದೂರದ ಬಾಂಬೆಯಿಂದ ರಾತ್ರೋರಾತ್ರಿ ರೈಲಿನಮೂಲಕ ಮಕ್ಕಳನ್ನು ಕಳ್ಳಸಾಗಾಣಿಕೆ ಮೂಲಕ ತರಿಸಿಕೊಂಡು ಲಕ್ಷಾಂತರ ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದ ವಿಷಯ ಬೆಚ್ಚಿ ಬೀಳಿಸುವಂತಿದೆ. ಕಳೆದ 2021ರ ಅಕ್ಟೋಬರ್ ತಿಂಗಳಲ್ಲಿ ಬೆಂಗಳೂರಿನ ರೈಲ್ವೆ ನಿಲ್ದಾಣದಿಂದ ಬಂಧಿಸಿದ ಮೂವರು ಮಹಿಳೆಯರು ನೀಡಿದ ಮಾಹಿತಿ ಮೇರೆಗೆ ಇನ್ನುಳಿದ ಐವರು ಆರೋಪಿಗಳಾದ ಜಾಲಹಳ್ಳಿ ಮಲ್ಲಸಂದ್ರ ನಿವಾಸಿ ಧನಲಕ್ಷ್ಮಿ, ಕತ್ರಿಗುಪ್ಪೆ ರಂಗಪ್ಪ ಲೇಔಟ್ ನಿವಾಸಿ ಮಹೇಶ್ ಕುಮಾರ್, ತಮಿಳು ನಾಡಿನ ಜನಾರ್ದನ್, ಬೆಂಗಳೂರಿನ ವಿದ್ಯಾರಣ್ಯ ಪುರದ ದೇವಿಎಂಬ ಅಂತಾರಾಜ್ಯ ಮಕ್ಕಳ ಕಳ್ಳರನ್ನು ಬಂಧಿಸುವಲ್ಲಿ ಬೆಂಗಳೂರು ದಕ್ಷಿಣ ವಿಭಾಗದ ಉಪ ಪೊಲೀಸ್ ಆಯುಕ್ತರಾದ ಹರೀಶ್ ಪಾಂಡೆ, ತಲಘಟ್ಟಪುರ ಠಾಣೆಯ ಸಬ್ ಇನ್ಸ್ಪೆಕ್ಟರ್ ಶ್ರೀನಿವಾಸ್, ಬಸವನಗುಡಿ ಮಹಿಳಾ ಠಾಣೆ ಇನ್ಸ್ಪೆಕ್ಟರ್ ಮೀನಾಕ್ಷಿ ಮತ್ತು ತಂಡ ಯಶಸ್ವಿ ಕಾರ್ಯಾಚರಣೆ ನಡೆಸಿದೆ. ಇವರ ಜಾಲದಲ್ಲಿ ಸಿಲುಕಿ ಮಾರಾಟವಾಗಲಿದ್ದ ಹನ್ನೆರಡು ಮಕ್ಕಳ ಪೋಷಕರನ್ನು ಹುಡುಕಿ ಪತ್ತೆ ಹಚ್ಚಲು ಮಕ್ಕಳ ಕಲ್ಯಾಣ ಸಮಿತಿಯು ಪೊಲೀಸರೊಡನೆ ಕೈ ಜೋಡಿಸಿದೆಯಂತೆ. ಇದೇ ಪ್ರಕರಣದಲ್ಲಿ ತಲೆಮರೆಸಿಕೊಂಡು ಭೂಗತ ರಾಗಿರುವ ಇತರ ಆರೋಪಿಗಳ ಬಂಧನಕ್ಕೂ ಬಲೆ ಬೀಸಲಾಗಿದೆ.







## ಬಾಡಿಗೆ ತಾಯಿ ಏಜೆಂಟರೆ ಕಳ್ಳಿಯರು!

ಸರೋಗಸಿ ಮಧರ್! ಬಾಡಿಗೆ ತಾಯಿ! ಸಿಂಗಲ್ ಪೇರೆಂಟ್ಸ್ ಸಿಸ್ಟಂ ಹೆಸರಿನಲ್ಲಿ, ವೈಜ್ಞಾನಿಕ ತಂತ್ರದಿಂದ ತಾಯಿಯ ಅಂಡಾಣು ಪಡೆದು, ತಂದೆಯ ವೀರ್ಯಾಣು ಜೊತೆ ಫಲವಂತಿಕೆ ಮಾಡಿ ಬಳಿಕ ಅದನ್ನು ಬಾಡಿಗೆ ತಾಯಿಯ ಗರ್ಭದಲ್ಲಿ ಸೇರಿಸಿ ಮಗುಪಡೆಯುವ ಪ್ರಕ್ರಿಯೆಯನ್ನು ಐ.ವಿ.ಎಫ್(ಇನ್ ವಿಟ್ರೋ ಫರ್ಟಿಲೈಜೇಷನ್) ಎಂದು ಕರೆಯುತ್ತಾರೆ. ಬಂಜೆತನದಿಂದ ಬಳಲುತಿದ್ದವರಿಗೆ ವರವಾಗಲೆಂದು ಈ ಬಾಡಿಗೆ ತಾಯಿಯ ಕಾನ್ಸೆಪ್ಟ್ ಪ್ರಾರಂಭ ವಾಗಿದೆ. ಆದರೇ ಈಗ ಅದೇ ವಿಷಯ ಬೇರೆಯದೇ ತಿರುವು ಪಡೆದುಕೊಂಡು ಬಾಡಿಗೆ ತಾಯಿಯರ ಉದ್ಯಮವೀಗ ಮಕ್ಕಳ ಅಪಹರಣ-ಮಾರಾಟದ ಬ್ರಹತ್ ಜಾಲವಾಗಿ ಮಾನವ ಕಳ್ಳಸಾಗಾಣಿಕೆಯ ಬಹುದೊಡ್ಡ ಅಂತಾರಾಷ್ಟ್ರೀಯ ಅಪರಾಧ ವಾಗಿ ನಮ್ಮ ಮುಂದೆ ಎದ್ದು ನಿಂತಿದೆ.

ಹೈಸೊಸೈಟಿ ಎಂದು ಕರೆಸಿಕೊಳ್ಳುವ ಒಂದು ವರ್ಗದ ಜನರು, ಶ್ರೀಮಂತರು ಹೀಗೆ ಬಾಡಿಗೆ ತಾಯಿಯ ಮೂಲಕ ಮಕ್ಕಳನ್ನು ಪಡೆದು ತಮ್ಮ ಹೆಂಡತಿಯರಿಗೆ ಹೆರಿಗೆ ನೋವನ್ನು ತಪ್ಪಿಸುತ್ತಿದ್ದಾರೆ! ಇದೇ ಸರೋಗಸಿ ಮಧರ್ ವಿಷಯವೀಗ ಸಾರ್ವಜನಿಕ ಚರ್ಚೆಯಾಗಿ ಬಾಡಿಗೆ ತಾಯಿಯ ಹೆಸರಿನಲ್ಲಿ ಬಡ ಹೆಣ್ಣುಮಕ್ಕಳ ಶೋಷಣೆ ನಡೆಯುತ್ತಿದೆ! ನಮ್ಮ ಭಾರತೀಯ ಸಂಸ್ಕೃತಿಗೆ ಇದು ಮಾರಕ ಎಂಬ ವಾದಗಳೂ ಚಿತ್ರ ನಟರಾದ ಶಾರುಕ್ ಖಾನ್, ಅಮೀರ್ ಖಾನ್ ಗಳು ಬೇರೆ ಹೆಣ್ಣುಮಕ್ಕಳ ಬಾಡಿಯನ್ನು ಬಾಡಿಗೆಗೆ ಪಡೆದು ತಮ್ಮ ಮಕ್ಕಳನ್ನು ಪಡೆದಾಗಲೂ ಹುಟ್ಟಿಕೊಂಡಿದ್ದವು! ಸರೋಗಸಿ ತಾಯ್ತನ ಯಾವುದೇ ರೀತಿಯ ವಾಣಿಜ್ಯ ಉದ್ದೇಶಕ್ಕಾಗಿ ಮಾಡಬಾರದೆಂಬ ಕಾನೂನಿದ್ದರೂ ಕೂಡ ಹಣದಾಸೆಗೆ ವೈದ್ಯಕೀಯ ವೆಚ್ಚ, ವಿಮೆ ಯೋಜನೆ ನೀಡಲಾಗುವುದು ಎಂಬ ಆಸೆ ಹುಟ್ಟಿಸಿ ಬಡಹೆಣ್ಣು ಮಕ್ಕಳನ್ನು ಬಳಸಿಕೊಂಡು ಮಕ್ಕಳನ್ನು ಹುಟ್ಟಿಸಿ, ಲಕ್ಷಾಂತರ ರೂಪಾಯಿಗೆ ಅಂತಾರಾಜ್ಯ ಮಾರುಕಟ್ಟೆ ಯಲ್ಲಿ ಮಾರಲಾಗುತ್ತಿದೆ! ಭಾರತದೇಶದಲ್ಲಿ ಬಾಡಿಗೆ ತಾಯಿಯರ ರಾಜಧಾನಿ ಗುಜರಾತ್.ಅದೇ ಈಗ ಮಾಡೆಲ್! 2022ರ ಹೊತ್ತಿಗೆ ಭಾರತದ ಐ.ವಿ.ಎಫ್ ಮಾರುಕಟ್ಟೆ ಶೇಕಡ 25ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆ ಇದೆಯಂತೆ! ತಾಯ್ತನವನ್ನು ಮಾರಿಕೊಳ್ಳುವ ಆಧುನಿಕ ಜಗತ್ತಿನ ಅಸ್ವಾಭಾವಿಕ ವಿದ್ಯಮಾನದ ಅನಿವಾರ್ಯತೆಯನ್ನು ನಾವು ಒಪ್ಪಿಕೊಳ್ಳದಿದ್ದರೂ ಅದು ನಿಲ್ಲುವುದಿಲ್ಲ!

ಐ.ವಿ.ಎಫ್ ಕೇಂದ್ರಗಳಲ್ಲಿ ಬಾಡಿಗೆ ತಾಯಿಯ ರನ್ನು ಒದಗಿಸುವ ನೆಪದಲ್ಲಿ ಏಜೆಂಟರಂತೆ ವರ್ತಿಸುವ ವ್ಯಕ್ತಿ ಗಳು, ಕೆಲವು ವೈದ್ಯರುಗಳೇ ಇಂದಿನ ಮಕ್ಕಳ ಅಪಹರಣ-ಮಾರಾಟ ಜಾಲದ ಸೂತ್ರಧಾರಿಗಳು, ಕಿಂಗ್ ಪಿನ್ ಗಳಾಗಿರುವುದು ದುರಂತವೇ ಸರಿ. ಸಾಮಾನ್ಯವಾಗಿ ಶಿಶು ಮಾರಾಟ ಜಾಲ, ಮಕ್ಕಳ ಅಪಹರಣದ ಹಿಂದೆ ಬಿದ್ದ ಪೊಲೀಸರು ಪ್ರಕರಣ ಬೇಧಿಸಿ ಆರೋಪಿಗಳನ್ನು ಬಂಧಿಸಿದಾಗ ಪ್ರತಿ ಬಾರಿಯೂ ಹೊರಬರುತ್ತಿರುವ ವಿಷಯವೇನೆಂದರೆ ಇದೇ ಸರೋಗಸಿ ಮಧರ್ ಬ್ರೋಕರ್ ಗಳೆಂಬ ಏಜೆಂಟರೆ ದೇಶದಾದ್ಯಂತ ಸಂಪೂರ್ಣವಾಗಿ ಈ ದಂಧೆಯನ್ನು ನಡೆಸುತ್ತಿರುವುದು, ಈ ಮಕ್ಕಳ ಮಾರಾಟದ ಜಾಲದಲ್ಲಿ ಕೆಲ ಆಸ್ಪತ್ರೆಗಳ ವೈದ್ಯರು ಶಾಮೀಲಾಗಿರುವುದು ಕಂಡುಬರುತ್ತಿದೆ.


ಲಕ್ಷಾಂತರ ರೂಪಾಯಿಗೆ ಮಾರಾಟ ವಾಗುತ್ತಿರುವ ಮಕ್ಕಳ ಹೆಸರಿನಲ್ಲಿ ವಾರ್ಷಿಕವಾಗಿ ದೇಶಾದ್ಯಂತ 44.5ಕೋಟಿ ಡಾಲರ್ ವಹಿವಾಟು ನಡೆಯುತ್ತಿದೆ ಎಂದರೆ ನೀವೇ ಊಹಿಸಿಕೊಳ್ಳಿ! ಕಳೆದ ಜುಲೈನಲ್ಲಿ ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿನ ಆಸ್ಪತ್ರೆಯೊಂದರಲ್ಲಿ ವೈಧ್ಯೆಯಾಗಿದ್ದ ಡಾಕ್ಟರ್ ರಶ್ಮಿ ಎಂಬಾಕೆ ಚಾಮರಾಜಪೇಟೆಯ ಬಿಬಿಎಂಪಿ ಆಸ್ಪತ್ರೆಗೆ ವೈದ್ಯೆಯ ವೇಷಧಾರಿಯಾಗಿ ನುಗ್ಗಿ ಗಂಡು ಮಗುವೊಂದನ್ನು ಅಪಹರಿಸಿ ಕೊಪ್ಪಳದ ದಂಪತಿಗಳಿಗೆ 15ಲಕ್ಷ ರೂಪಾಯಿಗಳಿಗೆ ಮಾರಿಕೊಂಡಿದ್ದ ಪ್ರಕರಣವನ್ನು ಹೈಕೋರ್ಟ್ ಚೀಮಾರಿ ಹಾಕಿದ ಮೇಲೆ ಒಂದು ವರ್ಷದ ಬಳಿಕ ಬೆಂಗಳೂರಿನ ಪೊಲೀಸರು ಬೇಧಿಸಿದ್ದರು.

ಮಕ್ಕಳಿಗಾಗಿ ಬಾಡಿಗೆ ತಾಯಿಯ ಮೊರೆ ಹೋಗುವ ಶ್ರೀಮಂತರು, ಮಧ್ಯಮ ವರ್ಗದ ಜನರು ಎಚ್ಚರದಿಂದ ಇರದಿದ್ದರೇ ಲಕ್ಷಾಂತರ ರೂಪಾಯಿ ಹಣದ ಜೊತೆಗೆ ಮಾನಸಿಕ ನೆಮ್ಮದಿಯನ್ನು ಕಳೆದು ಕೊಳ್ಳಬೇಕಾಗುತ್ತದೆ. ಏಕೆಂದರೆ ಹಣದಾಸೆಗೆ ಮಕ್ಕಳ ಕದಿಯುವ ವಂಚಕರು ಗ್ಯಾಂಗ್ ಗಳು ಆಕ್ಟೀವ್ ಆಗಿದ್ದು ನಿಮಗೆ ಬಾಡಿಗೆ ತಾಯಿಯ ಮೂಲಕ ಮಕ್ಕಳನ್ನು ಕೊಡುತ್ತೇವೆಂದು ನಂಬಿಸಿ ಹಣ ಪಡೆದು ಆ ನಂತರ ಆಸ್ಪತ್ರೆಗಳಿಂದಲೋ, ಬಡಜನರಿಂದಲೋ ಶಿಶುಗಳನ್ನು ಕದ್ದು ತಂದು ಮಾರಾಟ ಮಾಡಿ ಯಾಮಾರಿಸಸುತ್ತಿರುವ ಜಾಲಗಳು ಈಗ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕಾರ್ಯಾಚರಣೆ ನಡೆಸುತ್ತಿರುವ ವಿಚಾರ ಪೊಲೀಸರ ತನಿಖೆ ಯಿಂದ ಬೆಳಕಿಗೆ ಬರುತ್ತಿದೆ.

## 50ಸಾವಿರದ ಮಗು 15,ಲಕ್ಷಕ್ಕೆ ಮಾರಾಟ!

ಬಡ ಹಳ್ಳಿಯ ಹೆಂಗಸರಿಂದ ನವಜಾತ ಶಿಶುಗಳನ್ನು 50ಸಾವಿರ ರೂಪಾಯಿಗಳಿಗೆ ಪಡೆದು ಕೊಳ್ಳುವ ಈ ಮಕ್ಕಳ ಕಳ್ಳರ ಜಾಲಗಳು ಆ ಮಕ್ಕಳನ್ನು ತಮ್ಮ ಸರೋಗೇಟ್ ಮಧರ್ ನೆಟ್ವರ್ಕ್ ಏಜೆಂಟರ ಮೂಲಕ ಅಂತಾರಾಜ್ಯ ಮಾರುಕಟ್ಟೆ ಯಲ್ಲಿ ಕೇವಲ ಒಂದೇ ವಾರದಲ್ಲಿ ನೂರಾರು ಮಕ್ಕಳನ್ನು ಬೇಕಾದರೂ ತಲಾ ಹದಿನೈದು ಇಪ್ಪತ್ತು ಲಕ್ಷ ರೂಪಾಯಿ ಗಳಿಗೇ ಒಂದು ಮಗುವನ್ನು ಮಾರಿ ಹಣ ಮಾಡಿಕೊಳ್ಳುವ ಕೆಲಸದಲ್ಲಿ ತೊಡಗಿದ್ದಾರೆ! ಕೆಲವು ಸಾರಿ ಈ ಸರೋಗಸಿ ಮಧರ್ (ಬಾಡಿಗೆ ತಾಯಿ) ಒದಗಿಸುವ ಏಜೆಂಟ(ಮಕ್ಕಳ ಕಳ್ಳ)ರಿಗೆ ತಮ್ಮ ಟೈಮಿಗೆ ಮಗು ಸಿಗದಿದ್ದಾಗ ಅನಿವಾರ್ಯವಾಗಿ ಈ ಮಕ್ಕಳ ಅಪಹರಣ ಜಾಲಕ್ಕೆ ಗಂಟು ಬಿದ್ದು ಮಕ್ಕಳನ್ನು ಹೆರಿಗೆ ಆಸ್ಪತ್ರೆಗಳಿಂದ ಕದ್ದು ಅಥವಾ ಮಕ್ಕಳು ಆಟ ಆಡುತ್ತಿರುವ ಪ್ರದೇಶದಿಂದ ಅಪಹರಿಸಿಕೊಂಡು ಹೋಗಿ ಸರೋಗಸಿ ಮಧರ್ ಮೂಲಕ ಮಗುವನ್ನು ಒದಗಿಸುತ್ತೇವೆಂದು ಒಪ್ಪಿಕೊಂಡಿದ್ದ ಅಡ್ವಾನ್ಸ್ ಹಣ ಪಡೆದಿದ್ದವರಿಗೆ ನೀಡುತ್ತಾರೆ. ಈ ಮಕ್ಕಳ ಕಳ್ಳರ ಜಾಲವು ಈಗ ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಆಕ್ಟೀವ್ ಆಗಿದ್ದು ನವಜಾತ ಶಿಶುಗಳ ಅಪಹರಣ ಮಾರಾಟದ ಪ್ರಕರಣಗಳು ಎಲ್ಲೆಡೆ ವರದಿಯಾಗುತ್ತಿರುವುದನ್ನು ನೋಡುತ್ತಿದ್ದೇವೆ. ಈ ಬಾಡಿಗೆ ತಾಯಿಯ ದಂಧೆ ಕೋರರಿಗೆ ಬಂಜೆತನದ ದಂಪತಿಗಳೇ ಬಂಡವಾಳ. ಈ ಗ್ಯಾಂಗುಗಳ ಜೊತೆಗೆ ಕೆಲವು ಖಾಸಗಿ ಆಸ್ಪತ್ರೆಯ ವೈದ್ಯರು ಶಾಮೀಲಾಗಿರುವ ಶಂಕೆಯೂ ನಿಜವಾಗಿದೆ. ಇನ್ನೂ ಈ ಮಕ್ಕಳ ಮಾರಾಟ ಜಾಲದಲ್ಲಿ ಮಹಿಳೆಯರೇ ಹೆಚ್ಚಾಗಿ ಭಾಗವಹಿಸುತ್ತಿರುವುದು ಆತಂಕಕಾರಿಯಾಗಿದೆ.







## ಬಡವರ ಮಕ್ಕಳೆ ಟಾರ್ಗೆಟ್!

ಹಣದ ಆಸೆ ಆಮಿಷ ತೋರಿಸಿ ಹಲವು ಮಕ್ಕಳಿರುವ ಬಡಕುಟುಂಬ ಗಳನ್ನು ಪುಸಲಾಯಿಸಿ ಕಡಿಮೆ ಹಣಕ್ಕೆ ಕೈ ಕೂಸುಗಳನ್ನು ಖರೀದಿಮಾಡುವ ಮಕ್ಕಳ ಮಾರಾಟಗಾರರ ಈ ಗ್ಯಾಂಗ್ ಮಕ್ಕಳನ್ನು ಸಾಕಲು ಆರ್ಥಿಕ ಕಾರಣದಿಂದ ಕಷ್ಟಪಡುವ ಬಡ ಜನರನ್ನೆ ಟಾರ್ಗೆಟ್ ಮಾಡಿ ಬಲೆ ಬೀಸುತ್ತಿದ್ದಾರೆ. ಮಕ್ಕಳಿಲ್ಲದ ಶ್ರೀಮಂತ ದಂಪತಿಗಳಿಗೆ ಮಹಾರಾಷ್ಟ್ರದ ಬಾಂಬೆ ತಮಿಳುನಾಡಿನಿಂದ ಮಕ್ಕಳನ್ನು ತಂದು ಮಾರಾಟ ಮಾಡುತ್ತಿರುವ ಹಲವಾರು ಗ್ಯಾಂಗ್ ಗಳು ಈಗ ರಾಜ್ಯಾದ್ಯಂತ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಸಕ್ರಿಯವಾಗಿವೆ. ಆಸ್ಪತ್ರೆಯಲ್ಲಿದ್ದ ಹೆರಿಗೆ ವಾರ್ಡಿಗೆ ಹೋಗುತ್ತಿದ್ದ ಈ ಮಕ್ಕಳ ಕಳ್ಳಿಯರು ಅಲ್ಲಿರುವ ಗರ್ಭಿಣಿಯರಿಗೆ ಸಹಾಯ ಮಾಡುವ ನೆಪದಲ್ಲಿ ಪರಿಚಯಿಸಿಕೊಂಡು ಮೊಬೈಲ್ ನಂಬರ್ ಪಡೆದು, ಅವರ ಬಡತನ ಕಷ್ಟ ತಿಳಿದು ಮಕ್ಕಳ ವ್ಯಾಪಾರ ಕುದುರಿಸುವುದು ಇವರ ಚಾಳಿ. ವ್ಯಾಪಾರ ಕುದುರದಿದ್ದರೇ ಅನಿವಾರ್ಯವಾಗಿ ನವಜಾತ ಶಿಶುಗಳನ್ನೇ ಆಸ್ಪತ್ರೆಗಳಿಂದಲೇ ಕುದಿಯುತ್ತಿದ್ದರಂತೆ! ಬೆಂಗಳೂರಿನ ದಕ್ಷಿಣ ವಿಭಾಗದ ಪೊಲೀಸರು ಬಂದಿಸಿದ್ದ ದೇವಿ ಗ್ಯಾಂಗ್ ಒಂದೇ 18ಕ್ಕೂ ಹೆಚ್ಚಿನ ಮಕ್ಕಳನ್ನು ಮಾರಾಟಮಾಡಿದೆ ಎಂದರೆ ಈ ಮಕ್ಕಳ ಮಾರಾಟ ಮಾಫಿಯಾದ ಜಾಲವನ್ನು ಊಹಿಸಲು ಸಾಧ್ಯವೇ.






ಈಗಾಗಲೇ 20 ರಾಷ್ಟ್ರ ಗಳಲ್ಲಿ ವಾಣಿಜ್ಯ ಉದ್ದೇಶದ ಬಾಡಿಗೆ ತಾಯ್ತನದ ಮೇಲೆ ನಿಷೇಧ ಹೇರಲಾಗಿದೆ! ಹೀಗಿದ್ದರೂ

ಕದ್ದುಮುಚ್ಚಿ ನಡೆಯುತ್ತಿರುವ ಸರೋಗಸಿ ಕ್ಲಿನಿಕ್ ಗಳ ಮೇಲೆ ಸರ್ಕಾರದ ಯಾವುದೇ ನಿಯಂತ್ರಣ ಇಲ್ಲವಾಗಿದೆ! ಆದಕಾರಣ ದಿಂದಲೇ ಈಗ ಸಹಜವಾಗಿ ಮಾನವ ಕಳ್ಳಸಾಗಾಣಿಕೆಯು ಜಗತ್ತಿನ ಅತ್ಯಂತ ದೊಡ್ಡ ಸ್ಮಗ್ಲಿಂಗ್ ದಂಧೆಯಾಗಿ ನಡೆಯುತ್ತಿದೆ. ಇದು 2016ರಿಂದೀಚೆಗೆ ಕರ್ನಾಟಕದಲ್ಲಿ ಪೊಲೀಸರ ಮಾಹಿತಿಗೆ-ತನಿಖೆಗೆ ಸಿಗುತ್ತಿದೆ. ಅಂದು ಮೈಸೂರಿನ ಪೊಲೀಸ್ ವರಿಷ್ಠಾಧಿಕಾರಿ ಆಗಿದ್ದ ರವಿ ಡಿ ಚನ್ನಣ್ಣನವರ್ ಮೊದಲಿಗೆ ಈ ಬೇಬಿ ಸೆಲ್ಲಿಂಗ್ ರ್ಯಾಕೆಟ್ ಅನ್ನು ಬೇದಿಸಿ ನಾಲ್ವರನ್ನು ಬಂಧಿಸಿ ಜೈಲಿಗಟ್ಟಿ ಐದು ಮಕ್ಕಳನ್ನು ರಕ್ಷಿಸಿದ್ದರು. 2020ರ ಜನವರಿಯಲ್ಲಿ ದಾವಣಗೆರೆ ಯಲ್ಲಿ ಖಾಸಗಿ ಆಸ್ಪತ್ರೆಗಳ ಆಯಾಗಳ ಮೂಲಕ ಮಾರಾಟವಾಗಿದ್ದ ಆರು ತಿಂಗಳ ಹಸುಗೂಸನ್ನು ರಕ್ಷಿಸಿ 7ಜನರನ್ನು ಅಲ್ಲಿನ ಪೊಲೀಸರು ಬಂಧಿಸಿದ್ದರು. ಹಾಗೆಯೇ ಮೈಸೂರು ಜಿಲ್ಲೆಯಲ್ಲೆ ಮತ್ತೊಂದು ಗ್ಯಾಂಗ್ ಮಕ್ಕಳ ಮಾರಾಟ ಜಾಲದಲ್ಲಿ ತೊಡಗಿರುವುದು ಪೊಲೀಸರ ತನಿಖೆಯಿಂದ ತಿಳಿದುಬಂದಿತ್ತು. ಶ್ರೀಮತಿ ಅಲಿಯಾಸ್ ನಾಡಿಗೇರ್ ಎಂಬಾಕೆಯೇ ಆ ಜಾಲದ ಕಿಂಗ್ ಪಿನ್ ಎಂದು ಗೊತ್ತಾಗಿತ್ತು. ಆಕೆ ಬೀದಿ ಬದಿಯ ನಿರ್ಗತಿಕರ, ಭಿಕ್ಷುಕರ, ವಿಧವೆಯರ ಮಕ್ಕಳನ್ನೇ ಟಾರ್ಗೆಟ್ ಮಾಡಿ ಕೊಂಡು ಅವರ ಬಳಿ ಹೋಗಿ ,'ನಾನೊಂದು ಸುಂದರ ಅನಾಥಾಶ್ರಮ ನಡೆಸುತ್ತಿದ್ದೇನೆ. ನಿಮ್ಮ ಮಗುವನ್ನು ಚೆನ್ನಾಗಿ ಸಾಕಿ ಬೆಳೆಸಿ ಓದಿಸುತ್ತೇನೆ!' ಎಂದು ಸುಳ್ಳು ಹೇಳಿ ನಕಲಿ ವಿಳಾಸ ನೀಡಿ ಮಕ್ಕಳನ್ನು ಪಡೆದು ತಂದು ಸ್ನಾನ ಮಾಡಿಸಿ, ಹೊಸಬಟ್ಟೆ ಉಡಿಸಿ ಲಕ್ಷಾಂತರ ರೂಪಾಯಿ ಗಳಿಗೆ ಆ ನಿರ್ಗತಿಕರ ಭಿಕ್ಷುಕರ ಮಕ್ಕಳನ್ನು ಮಾರಾಟ ಮಾಡಿ ಹಣ ಗಳಿಸುತ್ತಿದ್ದಳೆಂಬುದು ಪೊಲೀಸರ ತನಿಖೆಯಿಂದ ಬಯಲಾಗಿತ್ತು. ಈ ಹಸುಗೂಸು ಮಾರಾಟ ಜಾಲದ ಬೇರುಗಳು ಮೈಸೂರಿನಿಂದ ನಂಜನಗೂಡು, ಹೆಚ್.ಡಿ.ಕೋಟೆ. ಹೊಳೆನರಸೀಪುರ, ಕೊಳ್ಳೇಗಾಲ, ಮಂಡ್ಯ, ಮಂಗಳೂರಿನ ವರೆಗೂ ವಿಸ್ತರಿಸಿವೆಯಂತೆ. ಹಾಗೆಯೇ 2021ರ ಫೆಬ್ರವರಿ ತಿಂಗಳಲ್ಲಿ ಮತ್ತೊಂದು ಮಕ್ಕಳ ಮಾರಾಟ ಪ್ರಕರಣ ದಾಖಲಾಗಿ ರಾಜ್ಯಾದ್ಯಂತ ಜನರನ್ನು ಬೆಚ್ಚಿ ಬೀಳಿಸಿತ್ತು. ಚಿಕ್ಕಮಗಳೂರಿನ ಕೊಪ್ಪದ ಆಸ್ಪತ್ರೆಯ ವೈದ್ಯರು ಮತ್ತು ನರ್ಸ್ ಗಳು ಸೇರಿ ವಿವಾಹ ಪೂರ್ವ ಲೈಂಗಿಕತೆ ಯಿಂದ ಜನಿಸಿದ್ದ ನವಜಾತ ಶಿಶುವನ್ನು ಬಾಳೆಹೊನ್ನೂರಿನ ಶ್ರೀಮಂತ ದಂಪತಿಯೊಬ್ಬರಿಗೆ ಮಾರಾಟ ಮಾಡಿದ್ದ ಪ್ರಕರಣವನ್ನು ಪೊಲೀಸರು ಬೇಧಿಸಿದ್ದರು. ಅಲ್ಲಿಗೆ ಆಸ್ಪತ್ರೆಗಳೇ ಮಕ್ಕಳ ಮಾರಾಟ ದಂಧೆಯ ಕೇಂದ್ರ ಸ್ಥಾನಗಳು ಎಂಬುದು ಸಾಬೀತಾಗಿತ್ತು. ಸೆಪ್ಟೆಂಬರ್ ತಿಂಗಳಲ್ಲಿ ವಿಜಯಪುರದ ಜಿಲ್ಲಾಸ್ಪತ್ರೆಯಲ್ಲಿ ಗಂಡುಮಗುವೊಂದನ್ನು ಮಾರಾಟ ಮಾಡಿದ್ದ ಪ್ರಕರಣ ಬೆಳಕಿಗೆ ಬಂದು ವೈದ್ಯರನ್ನು ದೇವರೆಂದು ಪೂಜಿಸುವ ಕಾಲದಲ್ಲೂ ಅವರು ಹಣದಾಸೆಗೆ ಈ ರೀತಿ ವರ್ತಿಸುತ್ತಿರುವುದು ಜನರಲ್ಲಿ ನೋವು ತಂದಿತ್ತು. ಗಂಡನಿಂದ ದೂರವಿದ್ದ ಮಹಿಳೆಗೆ ಪಕ್ಕದ ಮನೆಯ ಪ್ರಿಯಕರನಿಂದ ಗಂಡುಮಗು ಹುಟ್ಟಿತ್ತೆಂಬ ಕಾರಣಕ್ಕೆ ಮಗು ಹೆತ್ತ ತಾಯಿಗೆ ಕೇವಲ ಐದು ಸಾವಿರ ರೂಪಾಯಿ ನೀಡಿ ವೈದ್ಯರು ಐವತ್ತು ಸಾವಿರ ರೂಪಾಯಿ ಪಡೆದಿದ್ದು ಬೆಳಕಿಗೆ ಬಂದಿತ್ತು. ಮಂಗಳೂರು ಪೊಲೀಸ್ ಆಯುಕ್ತರಾದ ಎನ್ ಶಶಿಕುಮಾರ್ ಮಕ್ಕಳ ಮಾರಾಟ ಜಾಲದ ಪ್ರಮುಖ ರೂವಾರಿಗಳಾದ ಮೂಲ್ಕಿ ನಿವಾಸಿ ರಾಯನ್ ಮತ್ತು ಕವಿತಾ, ಮರಿಯಮ್ಮ ಎಂಬ ಮಕ್ಕಳ ಮಾರಾಟಗಾರರನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದರು. ಮಂಗಳೂರಿನ ಸುತ್ತಮುತ್ತಲ ಕೆಲವು ಆಸ್ಪತ್ರೆಗಳಿಂದಲೇ ಮಕ್ಕಳನ್ನು ದೂರದ ಅರಬ್ ದೇಶಗಳಿಗೆ ಕಳ್ಳಸಾಗಾಣಿಕೆ ಮಾಡುತ್ತಿದ್ದ ಖತರ್ನಾಕ್ ಬೇಬಿ ಸೆಲ್ಲಿಂಗ್ ರ್ಯಾಕೆಟ್ ಅನ್ನು ಅವರೇ ಬೇಧಿಸಿದ್ದರು. ಹೀಗೆ ರಾಜ್ಯಾದ್ಯಂತ ಪೊಲೀಸರು ಪದೇ ಪದೇ ನಿದ್ರೆ ಬಿಟ್ಟು ಕಾರ್ಯಾಚರಣೆ ನಡೆಸಿ ಈ ಮಕ್ಕಳ ಕಳ್ಳರನ್ನು ಹಿಡಿದು ಜೈಲಿಗಟ್ಟಿದರೂ, ಈ ಜಾಲದ ಬಾಲ ಮತ್ತೆಲ್ಲೋ ಉದ್ದುದ್ದ ವಿಸ್ತರಣೆ ಯಾಗಿರುವಂತೆ ಕಾಣುತ್ತದೆ. ಸರೋಗಸಿ ಮಧರ್ ಹೆಸರಿನಲ್ಲಷ್ಟೇ ಅಲ್ಲದೆ ಬೇರೆ ಬೇರೆ ರೀತಿಯಲ್ಲಿಯೂ ಈ ಮಕ್ಕಳ ಅಪಹರಣ, ಮಾರಾಟ ದಂಧೆ ನಡೀತಿದೆ ಎಂಬುದಕ್ಕೆ ಇಂದಿಗೂ ಬೆಂಗಳೂರು ನಗರದ 500ಕ್ಕೂ ಹೆಚ್ಚು ಕಡೆ ಸಾವಿರಾರು ಮಂದಿ ಮಕ್ಕಳು ಭಿಕ್ಷಾಟನೆ ಮಾಡುತ್ತಾ ಟ್ರಾಫಿಕ್ ಸಿಗ್ನಲ್ ಗಳಲ್ಲಿ ಆಟಿಕೆ ಸಾಮಗ್ರಿಗಳನ್ನು ಮಾರುತ್ತಾ ಅಲೆಯುತ್ತಿದ್ದಾರೆ; ಇವರನ್ನು ನಿಯಂತ್ರಿಸುತ್ತಿರುವುದು ಇದೆ ಮಕ್ಕಳ ಮಾರಾಟ ಮಾಫಿಯಾ ವೇನಾ? ಎಷ್ಟೋ ಅನಾಥಾಶ್ರಮಗಳ ಮಕ್ಕಳು ಭಿಕ್ಷೆ ಬೇಡಲು ಬೀದಿಗೆ ಬಂದಿರುವುದು ಯಾಕೇ? ಕೆಲವು ಹಣವಂತರ ಲೈಂಗಿಕ ಚಟಕ್ಕೆ ಬಲಿಯಾಗುತ್ತಿರುವುದು ನಿಜವೆ? ನಗರದಲ್ಲಿ 50ಕ್ಕೂ ಹೆಚ್ಚಿನ ಅಕ್ರಮ ಮಕ್ಕಳ ಹಾರೈಕೆ ಕೇಂದ್ರಗಳಲ್ಲೇನು ನಡೆಯುತ್ತಿದೆ? ಎಂಬ ಪ್ರಶ್ನೆ ಮಾರ್ಮಿಕವಾಗಿ ಮನದಲ್ಲೇ ಒದ್ದಾಡುತ್ತವೆ. ಇದನ್ನೆಲ್ಲಾ ನೋಡಿದರೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ನಿದ್ರೆ ಮಾಡುತ್ತಿದೆಯೇ ಎಂಬ ಅನುಮಾನ ಮೂಡುತ್ತದೆ.








# ಬಿಬಿಎಂಪಿ ಚುನಾವಣೆಗೆ ಸಿದ್ಧತೆ





● ಬಾಲು.ಡಿ.

ಏನಾದರೂ ಮಾಡಿ ಬಿಬಿಎಂಪಿ ಚುನಾವಣೆಯನ್ನು ತಡೆಯಲೇ ಬೇಕು ಎಂದು ಹೊರಟಿರುವ ಒಂದು ವರ್ಗವಾದರೆ ಇನ್ನೊಂದು ವರ್ಗ ಏನಾದರಾಗಲಿ ಚುನಾವಣೆ ನಡೆಯಬೇಕು ಎನ್ನುವ ಹಂಬಲ ಇದು ಸದ್ಯ ಬಿಜೆಪಿಯಲ್ಲಿನ ಬೆಳವಣಿಗೆ.. ಮೊನ್ನೆ ನಡೆದ ಅರುಣ್ ಸಿಂಗ್ ನೇತೃತ್ವದ ಸಭೆಯಲ್ಲೂ ಕೂಡ ಈ ಬಗ್ಗೆ ಪ್ರಸ್ತಾಪವಾಗಿ ಚುನಾವಣೆಗೆ ಸಿದ್ದರಾಗಿ ಎನ್ನುವ ಸಂದೇಶವನ್ನೂ ರವಾನಿಸಲಾಗಿದೆ. ಹೀಗಾಗಿ ಬೆಂಗಳೂರಿನ ಬಿಬಿಎಂಪಿ ಮಾಜಿ ಸದಸ್ಯರು ಮತ್ತು ಆಕಾಂಕ್ಷಿಗಳಲ್ಲಿ ಈಗ ಚುನಾವಣೆ ಸಿದ್ದತೆಗೆ ತಯಾರಿಯಾಗುತ್ತಿದ್ದಾರೆ.

ಈ ಕುರಿತಂತೆ ಸುಪ್ರೀಂ ಕೋರ್ಟ್‌ನಲ್ಲೂ ಕೂಡ ತೀರ್ಪು ಬಾಕಿ ಇದೆ ಈ ಮಧ್ಯೆಯೇ ಹಲವಾರು ಬೆಳವಣಿಗೆಗಳು ಶೀಘ್ರ ಚುನಾವಣೆ ನಡೆಸಲು ಸದ್ಧಾಗಿದೆ .ಅಲ್ಲದೆ ಮುಖ್ಯಮಂತ್ರಿಗಳು ಕೂಡ ಇತ್ತೀಚೆಗೆ ಬೆಂಗಳೂರಿಗೆ ಹಲವಾರು ಯೋಜನೆಗಳನ್ನು ರೂಪಿಸಿರುವುದು ಇದಕ್ಕೆ ಮುಖ್ಯಕಾರಣವಾಗಿದೆ.

ಸುಪ್ರೀಂ ಕೋರ್ಟ್ ಬಿಬಿಎಂಪಿ ಚುನಾವಣೆ ಸಂಬಂಧದ ಪ್ರಕರಣವನ್ನು ತುರ್ತಾಗಿ ವಿಚಾರಣೆ ನಡೆಸುತ್ತಿಲ್ಲ ಎಂದು ಆರೋಪಿಸಿ ಸಲ್ಲಿಕೆ ಮಾಡಿದ್ದ ಅರ್ಜಿಯ ವಿಚಾರಣೆ ನಡೆಸಿದ ವಿಭಾಗೀಯ ಪೀಠ, ಪ್ರಕರಣವನ್ನು ನಾಲ್ಕು ವಾರಗಳ ಗಡುವು ನೀಡಿ ವಿಚಾರಣೆ ಪೂರ್ಣಗೊಳಿಸುವಂತೆ ಸೂಚನೆ ನೀಡಿತ್ತು. ಹಾಗಿಗಿ ವೇಗವಾಗಿ ತೀರ್ಪು ಕೂಡ ಪ್ರಕಟವಾಗುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಸರಕಾರ ಚುನಾವಣೆ ನಡೆಸಲು ಅಗತ್ಯ ವಾದ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವುದು ದೃಡವಾಗಿದೆ.

ಈ ಕುರಿತಂತೆ ಬಿಜೆಪಿ ಎಲ್ಲಾ ಸಿದ್ದತೆಗಳನ್ನು ನಡೆಸುತ್ತಿದ್ದರೆ ಕಾಂಗ್ರೆಸ್ ಪಕ್ಷವೂ ಕೂಡ ಈಗಾಗಲೇ ಸಭೆಯನ್ನು ನಡೆಸಿ ಅಗತ್ಯ ಸಿದ್ದತೆಗೆ ಸೂಚನೆ ನೀಡಿದೆ ಇನ್ನೂ ಜೆಡಿಎಸ್ ಕೂಡ ಸನ್ನದ್ದವಾಗಿದೆ ಒಂದು ಮಾಹಿತಿಯ ಪ್ರಕರಾರ ಬರುವ ಮಾರ್ಚ್ ತಿಂಗಳಲ್ಲಿ ಚುನಾವಣೆ ನಡೆಸುವ ಸಾಧ್ಯತೆಗಳಿವೆ

ಇದಕ್ಕೆ ಪೂರಕವೆನ್ನುವಂತೆ ಬಿಬಿಎಂಪಿ ಈಗಾಗಲೇ, ಮತದಾರರ ಪಟ್ಟಿಯ ಪರಿಷ್ಕರಣೆ ಮಾಡಿ ಬಿಡುಗಡೆ ಮಾಡಿದೆ. ಮತದಾರರ ಪಟ್ಟಿ ಬಿಡುಗಡೆ ಮಾಡಿರು ವುದು ಚುನಾವಣೆಗೆ ನಾವು ಸಿದ್ಧವಾಗಿದ್ದೇವೆ ಎಂಬ ಸಂದೇಶವನ್ನು ನೀಡಿದಂತಾಗಿದೆ. ಆದರೆ, ವಾರ್ಡ್ ವಿಂಗಡಣೆ ಪ್ರಕ್ರಿಯೆ ಬಾಕಿಯಿದ್ದು, 198 ವಾರ್ಡ್‌ಗೆ ಸಂಬಂಧಿಸಿದಂತೆ ಪಟ್ಟಿ ಬಿಡುಗಡೆಯಾಗಿದೆಯೋ, 243 ವಾರ್ಡ್‌ಗಳಿಗೆ ಅನುಗುಣವಾಗಿ ಪಟ್ಟಿ ಬಿಡುಗಡೆಯಾಗಿದೆಯೋ ಎಂಬ ಬಗ್ಗೆ ಇನ್ನೂ ಮಾಹಿತಿ ಸಿಕ್ಕಿಲ್ಲ. ಆದರೆ, ಪಟ್ಟಿಯಂತೂ ಬಿಡುಗಡೆಯಾಗಿದ್ದು, ಚುನಾವಣೆಗೆ ಸಿದ್ಧವಿರುವ ಸುಳಿವು ಸಿಕ್ಕಿದೆ.

ಬಿಜೆಪಿ ಕೂಡ ರೆಡಿ: ಆಡಳಿತಾರೂಢ ಬಿಜೆಪಿ ಕೂಡ ಬಿಬಿಎಂಪಿ ಚುನಾವಣೆಗೆ ಸಕಲ ಸಿದ್ಧತೆಗಳನ್ನು ಆರಂಭಿಸಿದೆ. ಸರಕಾರ ಈಗಾಗಲೇ ಕೆಲವು ಯೋಜನೆಗಳನ್ನು ಘೋಷಣೆ ಮಾಡಿದ್ದು, ಮಿಷನ್-2022 ಕುರಿತು ಸಿಎಂ ಅಧಿಕಾರಿಗಳ ಸಭೆ ನಡೆಸಿ, ಯೋಜನೆಯನ್ನು ಶೀಘ್ರವಾಗಿ ಜಾರಿಗೆ ತರುವ ಮೂಲಕ ಬೆಂಗಳೂರಿನ ಅಭಿವೃದ್ಧಿಗೆ ನಾವು ಬದ್ಧ ಎಂಬ ಭರವಸೆಯನ್ನು ಮೂಡಿಸುವುದು ಉದ್ದೇಶವಾಗಿದೆ. ಹೀಗಾಗಿಯೇ, ಸಭೆಯಲ್ಲಿ ಮೆಟ್ರೋ, ಸಬ್ ಅರ್ಬನ್ ರೈಲ್ವೆ ಯೋಜನೆ, ರಸ್ತೆಗಳ ಅಭಿವೃದ್ಧಿ, ರಾಜಕಾಲುವೆ ಅಭಿವೃದ್ಧಿ ಸೇರಿದಂತೆ ಇನ್ನಿತರ ಯೋಜನೆಗಳಿಗೆ ವೇಗ ನೀಡುವ ಕುರಿತು ಸೂಚನೆ ನೀಡಲಾಗಿದೆ. ಆ ಮೂಲಕ ಅಭಿವೃದ್ಧಿಯನ್ನು ಜನರಿಗೆ ಮನವರಿಕೆ ಮಾಡಿ ಕೊಡುವ ಪ್ರಯತ್ನವನ್ನು ಸರಕಾರ ಈ ಮೂಲಕ ಮಾಡುತ್ತಿದೆ.

ಸುಪ್ರೀಂ ಕೋಟ್' ನಲ್ಲಿ ದಾಖಲಾಗಿರುವ ಬಿಬಿಎಂಪಿ ಚುನಾವಣೆ ಸಂಬಂಧದ ಪ್ರಕರಣದ ವಿಚಾರಣೆ ವಿಳಂಬವಾಗುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್‌ನ ನಾಯಕರು ವಿಭಾಗೀಯ ಪೀಠಕ್ಕೆ ಮನವಿ ಸಲ್ಲಿಸಿದ್ದರು. ಈ ಮನವಿಯನ್ನು ಪುರಸ್ಕರಿಸಿದ ವಿಭಾಗೀಯ ಪೀಠ, ನಾಲ್ಕು ವಾರದ ಗಡುವಿನಲ್ಲಿ ಪ್ರಕರಣವನ್ನು ಇತ್ಯರ್ಥ ಮಾಡುವಂತೆ ಸೂಚಿಸಿದೆ. ಶೀಘ್ರ ಪ್ರಕರಣದ ವಿಚಾರಣೆ ಕೈಗೆತ್ತಿ ಕೊಳ್ಳಲಾಗುತ್ತದೆ. ಈ ಅವಧಿ ಯಲ್ಲಿಯೇ ಪ್ರಕರಣದ ಇತ್ಯರ್ಥ ವಾಗುವ ಸಾಧ್ಯತೆಯೂ ಇದೆ ಎಂದು ಹೇಳಲಾಗುತ್ತಿದೆ.

## ಬಿಬಿಎಂಪಿ ವಿಸ್ತರಣೆ ಪ್ರಕ್ರಿಯೆ:

ಬಿಬಿಎಂಪಿ ಕೌನ್ಸಿಲ್‌ನ ಒಟ್ಟು ಸದಸ್ಯರ ಸಂಖ್ಯೆಯನ್ನು 198ರಿಂದ 243ಕ್ಕೆ ಹೆಚ್ಚಿಸಿ ಸಮಿತಿಯ ಶಿಫಾರಸನ್ನು ಒಪ್ಪಿದ್ದ ಸರ್ಕಾರ ವಾರ್ಡ್‌ಗಳ ಸಂಖ್ಯೆಯನ್ನು ಗರಿಷ್ಠ 250ಕ್ಕೆ ಹೆಚ್ಚಿಸಲು ಅವಕಾಶ ಕಲ್ಪಿಸಿ 1976ರ ಕೆಎಂಸಿ ಕಾಯ್ದೆಗೆ ತಿದ್ದುಪಡಿ ತಂದಿತ್ತು. 2020ರ ಅ. 14ರಂದು ನಗರಾಭಿವೃದ್ಧಿ ಇಲಾಖೆಯು ಬಿಬಿಎಂಪಿ ಕೌನ್ಸಿಲ್ ಸದಸ್ಯರ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಿ ಅಧಿಸೂಚನೆ ಹೊರಡಿಸಿತ್ತು. ವಾರ್ಡ್‌ಗಳ ಮರುವಿಂಗಡಣೆಗಾಗಿ ಬಿಬಿಎಂಪಿ ಆಯುಕ್ತರ ಅಧ್ಯಕ್ಷತೆಯಲ್ಲಿ ಅದೇ ದಿನ ಸಮಿತಿಯನ್ನೂ ರಚಿಸಲಾಗಿತ್ತು. ಈ ಸಮಿತಿಯಲ್ಲಿ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು, ಬಿಬಿಎಂಪಿಯ ವಿಶೇಷ ಆಯುಕ್ತರು (ಕಂದಾಯ) ಸದಸ್ಯರಾಗಿದ್ದಾರೆ'ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸಿ ವಾರ್ಡ್ ಮರುವಿಂಗಡಣೆ ಮಾಡುವ ಕುರಿತು ಸಮಿತಿಯು ಮೊದಲ ಸಭೆ ಇತ್ತೀಚೆಗೆ ನಡೆಯಿತು.

## ತಿದ್ದುಪಡಿಗೆ ಒತ್ತಾಯ

ಬಿಜೆಪಿಯಲ್ಲಿಯೇ ಸರಕಾರ ಜಾರಿಗೆ ತರಲು ಉದ್ದೇಶಿಸಿದ್ದ ಬಿಬಿಎಂಪಿ ಕಾಯಿದೆ ವಿರುದ್ಧ ಆಕ್ರೋಶ ಕೇಳಿಬಂದಿದೆ. ಸರಕಾರ 243 ವಾರ್ಡ್‌ಗಳಿಗೆ ಚುನಾವಣೆ ನಡೆಸಲು ಕಾಯಿದೆ ಜಾರಿಗೆ ತಂದಿದ್ದು, ಅದರಲ್ಲಿ 14 ಆಕ್ಷೇಪಣಾರ್ಹ ಅಂಶಗಳಿವೆ ಎಂಬುದು ಬಿಜೆಪಿಯವರೇ ಆದ ಹಿರಿಯ ಪಾಲಿಕೆ ಸದಸ್ಯರ ಆರೋಪ. ಈ ಅಂಶಗಳನ್ನು ಕೈಬಿಟ್ಟು ಕಾಯಿದೆಗೆ ತಿದ್ದುಪಡಿ ತರಬೇಕು ಎಂಬ ಒತ್ತಡವನ್ನು ಹೈಕಮಾಂಡ್ ಮೇಲೆ ಆರ್‌ಎಸ್‌ಎಸ್ ಮೂಲಕ ಈ ಸದಸ್ಯರು ತರುತ್ತಿದ್ದಾರೆ. ಮತದಾರರ ಕರಡು ಪಟ್ಟಿ ಬಿಡುಗಡೆ: ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ-2022ರ ಕಾರ್ಯಚಟುವಟಿಕೆಗಳ ಭಾಗವಾಗಿ

ಪರಿಷ್ಕೃತ ಮತದಾರರ ಕರಡು ಪ್ರತಿಯನ್ನು ಬಿಬಿಎಂಪಿ ವ್ಯಾಪ್ತಿಯಲ್ಲಿ ಬಿಡುಗಡೆ ಮಾಡಲಾಗಿದೆ. 28 ವಿಧಾನಸಭಾ ಕ್ಷೇತ್ರಗಳ ಮತದಾರರ ನೊಂದಣಾಧಿಕಾರಿಗಳ ಕಚೇರಿ, ಸಹಾಯಕ ಮತದಾರರ ನೊಂದಣಾಧಿಕಾರಿಗಳ ಕಚೇರಿ ಹಾಗೂ ವಾರ್ಡ್ ಕಚೇರಿಗಳಲ್ಲಿ ಪ್ರಕಟಿಸಲಾಗಿದ್ದು, ಸಾರ್ವಜನಿಕರಿಗೆ ಮತದಾರರ ಪಟ್ಟಿ ಪರಿಶೀಲಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ಮುಖ್ಯ ಆಯುಕ್ತರು ತಿಳಿಸಿದ್ದಾರೆ.

ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಕುರಿತು ರಾಜಕೀಯ ಪಕ್ಷಗಳೊಂದಿಗೆ ನಡೆದ ಸಭೆ ಉದ್ದೇಶಿಸಿ ಮಾತನಾಡಿದ ಅವರು, ರಾಜಕೀಯ ಪಕ್ಷದ ಪ್ರತನಿಧಿಗಳು, ನಾಗರಿಕರು ಪರಿಷ್ಕೃತ ಮತದಾರರ ಕರಡು ಪ್ರತಿ ಪರಿಶೀಲಿಸಿ, ತಿದ್ದುಪಡಿ ಅಥವಾ ಬದಲಾವಣೆ ಇದ್ದರೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.




### ಮತದಾರರ ವಿವರ

| | |
|---|---|
| ಪುರುಷ ಮತದಾರರು | 49,09,042 |
| ಮಹಿಳಾ ಮತದಾರರು | 45, 28, 728 |
| ಇತರ ಮತದಾರರು | 1646 |
| ಒಟ್ಟು | 94,39,416 |

### ಸೇರ್ಪಡೆಗೆ ಅವಕಾಶ

ಕರಡು ಮತದಾರರ ಪಟ್ಟಿಯಲ್ಲಿ ಹೆಸರು ಬಿಟ್ಟುಹೋಗಿದ್ದಲ್ಲಿ, ತಪ್ಪಾಗಿದ್ದಲ್ಲಿ, ತಪ್ಪಾಗಿ ಸೇರ್ಪಡೆಗೊಂಡಿದ್ದಲ್ಲಿ ಹಾಗೂ ಒಂದು ಭಾಗ ಸಂಖ್ಯೆಯಿಂದ ಮತ್ತೊಂದು ಭಾಗದ ಸಂಖ್ಯೆಗೆ ವರ್ಗಾವಣೆಯಾಗಬೇಕಿದ್ದಲ್ಲಿ ಮತ್ತು ಮತದಾರರ ಪಟ್ಟಿಯಿಂದ ಹೆಸರು ತೆಗೆದುಹಾಕಲು ಮತದಾರರ ನೊಂದಣಾಧಿಕಾರಿಗಳ ಕಚೇರಿ, ಸಹಾಯಕ ನೊಂದಣಾಧಿಕಾರಿಗಳ ಕಚೇರಿ, ವಾರ್ಡ್ ಕಚೇರಿ ಹಾಗೂ ಬಿಎಲ್‌ಓ ಅವರುಗಳಿಗೆ ನಮೂನೆ-6, 7, 8 ಮತ್ತು 8ಎ ರಲ್ಲಿ ತಮ್ಮ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಡಿಸೆಂಬರ್ 8 ರವರಗೆ ಅವಕಾಶ ಕಲ್ಪಿಸಲಾಗಿದೆ.





# ಬೌದ್ಧ ಕೇಂದ್ರ ಮತ್ತು ಕದಂಬರ ರಾಜಧಾನಿಯಾಗಿ ಬನವಾಸಿ

ಪರಿಶೋಧನೆ

ಡಾ.ಎಸ್.ವೈ.ಸೋಮಶೇಖರ್
ಕನ್ನಡ ವಿಶ್ವವಿದ್ಯಾಲಯ, ಹಂಪಿ



ಬನವಾಸಿಯು ಕರ್ನಾಟಕದ ಪ್ರಾಚೀನ ಮತ್ತು ಪ್ರಸಿದ್ಧ ಪಟ್ಟಣ. ಇದು ಸನ್ನತಿ ಮತ್ತು ಬ್ರಹ್ಮಗಿರಿಯಷ್ಟೇ ಪ್ರಸಿದ್ಧವಾದ ಪ್ರಾಚೀನ ಬೌದ್ಧ ನೆಲೆಯೂ ಆಗಿದೆ. ಬನವಾಸಿಯನ್ನು ಮಹಾಭಾರತದಲ್ಲಿ 'ವನವಾಸಕ' ಎಂದೂ, ಶಾಸನಗಳಲ್ಲಿ 'ವನವಾಸಿಕ', 'ಜಯಂತಿಪುರ', 'ವೈಜಯಂತಿ' ಬನವಾಸಿಪುರ ಎಂದೂ ಕರೆಯಲಾಗಿದೆ. ಪ್ರಾಚೀನ ಭಾರತಕ್ಕೆ ಭೇಟಿ ನೀಡಿದ್ದ ಗ್ರೀಕ್ ಪ್ರವಾಸಿ ಟಾಲಮಿಯು ಇದನ್ನು 'ಬನೌಸಿ' ಎಂದೇ ಕರೆದಿರುವನು. ಹಾಗೆಯೇ ಚೀನಾದ ಬೌದ್ದ ಯಾತ್ರಿಕನಾದ ಹೂಯೆನ್‌ತ್ಸಾಂಗನು 'ಕೊನ್‌ಕಿನಪುಲೊ' (ಕೊಂಕಣಪುರ) ಎಂದು ಕರೆದುದಲ್ಲದೆ ಅಲ್ಲಿನ ಪ್ರಾಚೀನ ಬೌದ್ಧ ಸಂಘಾರಾಮ, ಸ್ಥೂಪ ಮತ್ತು ಶ್ರೀಗಂಧದ ಬುದ್ದನ ಮೂರ್ತಿಗಳನ್ನು ಕುರಿತು ಪ್ರಸ್ತಾಪಿಸಿರುವುದು ಅಧ್ಯಯನಾರ್ಹ ಸಂಗತಿಯೇ ಆಗಿದೆ. ಮಧು ಮತ್ತು ಕೈಟಭರೆಂಬ ಸಹೋದರರು ಇಲ್ಲಿ ವಾಸವಿದ್ದರೆಂದೂ, ಪಾಂಡವರ ತಮ್ಮ ವನವಾಸವನ್ನು ಇಲ್ಲಿ ಕಳೆದರೆಂಬ ಪ್ರತೀತಿಗಳಿವೆ.

ಬನವಾಸಿಯು ಆದಿಕವಿ ಪಂಪನ ತಾಯಿಯ ತವರೂರು. ತನ್ನ ವಿಕ್ರಮಾರ್ಜುನ ವಿಜಯ ಕೃತಿಯಲ್ಲಿ, "ಮನುಷ್ಯನಾಗಿ ಹುಟ್ಟುವುದಕ್ಕೆ ಪುಣ್ಯಬೇಕು. ಈ ಪುಣ್ಯವಿಲ್ಲದಿದ್ದರೆ ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನವನದೊಳ್ ಬನವಾಸಿದೇಶದೊಳ್" ಎಂದು ಹಂಬಲಿಸಿದ್ದಾನೆ. ಹಾಗೆಯೇ "ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಂ" ಎಂದು ನೆನಯುತ್ತಾನೆ. ಚಾಮರಸ ಬರೆದ ಪ್ರಭುಲಿಂಗಲೀಲೆ ಕಾವ್ಯದ ಪ್ರಮುಖ ಸ್ಥಳ ಬನವಾಸಿಯೇ ಆಗಿದೆ. ಬನವಾಸಿಯು ನಿಜಕ್ಕೂ ಈ ಬಣ್ಣನೆಗೆ ಶ್ರೇಯವೇ ಆಗಿದೆ. ಮಲೆನಾಡಿನ ಸೆರಗಿನಲ್ಲಿ ಹಸಿರನ್ನು ಹೊದ್ದು, ವರದಾ ನದಿಯು ವನಮಾಲೆಯಂತೆ ಸುತ್ತುವರಿದಿರುವುದು ಈ ಪಟ್ಟಣಕ್ಕೆ ಪ್ರಾಕೃತಿಕ ಸೊಬಗನ್ನು ಹೆಚ್ಚಿಸಿದೆ. ಬನವಾಸಿಯನ್ನು ಮೂರು ಕಡೆಗಳಲ್ಲಿ ಮಾಲೆಯಂತೆ ಸುತ್ತುವರಿದಿರುವುದರಿಂದ ವೈಜಯಂತಿ ಎಂಬ ಹೆಸರು ಅನ್ವರ್ಥಕವಾಗಿದೆ.

ಬನವಾಸಿಯು ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲೂಕಿನಲ್ಲಿ ಬರುವ ಐತಿಹಾಸಿಕ ತಾಣ. ಇಲ್ಲಿನ ಮಧುಕೇಶ್ವರ ದೇವಾಲಯವು ಕರ್ನಾಟಕದ ಪ್ರಾಚೀನ ಕಲೆ, ವಾಸ್ತುಶಿಲ್ಪ ಮತ್ತು ಸಂಸ್ಕೃತಿಯ ಮಹತ್ವದ ಆಲಯವೂ ಆಗಿದೆ. ಕ್ರಿ.ಪೂ. 3ನೆಯ ಶತಮಾನದಲ್ಲಿ ಆಳ್ವಿಕೆ ಮಾಡಿದ ಮೌರ್ಯ ಅಶೋಕನ ಕಾಲದ ಹೊತ್ತಿಗೆ ಇದು ಪ್ರಸಿದ್ಧ ಧಾರ್ಮಿಕ ನೆಲೆಯಾಗಿತ್ತು. ಮೊಗ್ಗಲಿಪುತ್ತ ತಿಸ್ಸನು ಬೌದ್ಧ ಧರ್ಮ ಪ್ರಸಾರಕ್ಕಾಗಿ ರಖ್ಖಿತ ಎಂಬ ಬಿಕ್ಷುವನ್ನು ಇಲ್ಲಿಗೆ ಕಳುಹಿಸಿದ್ದುದು ಮಹಾವಂಸದಲ್ಲಿ ಹೇಳಿದೆ. ಮಹಾರಥಿ/ಚುಟು ಆನಂದ ಹಾಗೂ ಸಾತವಾಹನರ ಅರಸರ ಕಾಲದ ಆಡಳಿತ ಕೇಂದ್ರವಾಗಿಯೂ ಇದು ಹೆಸರಾಗಿತ್ತು. ಮಯೂರವರ್ಮನಿಂದ ಪ್ರಾರಂಭವಾದ ಕದಂಬ ಅರಸು ಮನೆತನದ ಅತ್ಯಂತ ವೈಭವಯುತ ರಾಜಧಾನಿ ಬನವಾಸಿಯೇ ಆಗಿತ್ತು. ಇತ್ತೀಚೆಗೆ ಎಸ್. ಶೆಟ್ಟರ್ ಅವರು 'ಇಸಿಲ' ಪದದ ಬಳಕೆ ಕುರಿತ ಸುದೀರ್ಘ ಚರ್ಚೆಯನ್ನೇ ಮಾಡಿದ್ದು, ಇಸಿಲ ಕನ್ನಡ ಪದವಲ್ಲ, ಆದರೆ ಕೂಪಣ(ಕೊಪ್ಪಳ) ಮತ್ತು ವನವಾಸಿಕ(ಬನವಾಸಿ) ಕನ್ನಡದ ಅತ್ಯಂತ ಪ್ರಾಚೀನ ಸ್ಥಳನಾಮಗಳು ಎಂಬುದನ್ನು ಸ್ಪಷ್ಟಪಡಿದ್ದಾರೆ. ಇದರಿಂದಾಗಿ ಬನವಾಸಿಯು ಕ್ರಿ.ಶ. 1-2ನೆಯ ಶತಮಾನದಲ್ಲಿ ಬಳಕೆಯಿದ್ದ ಪ್ರಾಚೀನ ಕನ್ನಡ ಹೆಸರೆಂಬುದು ಗಮನಾರ್ಹ. ಕದಂಬರು ಮೂಲತಃ ಬ್ರಾಹ್ಮಣರೆಂಬುದು ಇದುವರೆಗಿನ ಅಭಿಪ್ರಾಯವಾಗಿತ್ತು. ಆದರೆ ಇತ್ತೀಚೆಗೆ ಕದಂಬ ಎಂಬ ವೃಕ್ಷವು ಈಚಲುಮರವೆಂದೂ ಮತ್ತು ಈಚಲು ಮರದೊಂದಿಗೆ ಇಂದಿಗೂ ಅವಿನಾಭಾವ ಸಂಬಂಧವನ್ನು ಹೊಂದಿದ ಸ್ಥಳೀಯ ಸಮುದಾಯ ಎಂಬುದಾಗಿಯೂ ಅಭಿಪ್ರಾಯಿಸಲಾಗಿದೆ.

ಬೌದ್ಧ ಧರ್ಮದ ಪ್ರಾಚೀನ ಕೇಂದ್ರ: ಕರ್ನಾಟಕದ ಪ್ರಾಚೀನ ಬೌದ್ಧ ಕೇಂದ್ರಗಳಲ್ಲಿ ಬನವಾಸಿಯೂ ಒಂದು. ಇಲ್ಲಿ ಕೈಗೊಳ್ಳಲಾಧ ಉತ್ಖನನದಲ್ಲಿ ಅನೇಕ ಬಗೆಯ ಬೌದ್ಧ ಅವಶೇಷಗಳು, ಕಟ್ಟಡಗಳು ಕಂಡುಬಂದಿವೆ. ಕಂಚಿ ಮನೆ, ಉಮಿ ಗುಡ್ಡ, ಕಾಗೆ ಗುಡ್ಡ, ದೋಣಿ ಗುಡ್ಡ ಎಂದು ಸ್ಥಳೀಯವಾಗಿ ಕರೆಯುವ ಸ್ಥಳಗಳಲ್ಲಿ ಇಟ್ಟಿಗೆಯ ಅರ್ಧವೃತ್ತಾಕಾರದ ಕಟ್ಟಡ ಮತ್ತು ಚುಟುಕುಲಾನಂದ, ಮುಲಾನಂದರ ಸೀಸದ ನಾಣ್ಯ, ಮಡಕೆ ಮತ್ತಿತರ ಅವಶೇಷಗಳು ಬೆಳಕಿಗೆ ಬಂದಿವೆ. ಅಲ್ಲದೆ ಯಕ್ಷ, ಯಕ್ಷಿ, ವಿಷ್ಣು, ನರಸಿಂಹ, ಕಾರ್ತಿಕೇಯ, ತೀರ್ಥಂಕರ, ನಿಷದಿ ಕಲ್ಲು ಶಿಲ್ಪಗಳು ಬನವಾಸಿಯ ಧಾರ್ಮಿಕ ಸಂಗತಿಗಳೇ ಆಗಿವೆ. ಶಿವಸಿರಿ ಪುಳುಮಾವಿಯ ಪತ್ನಿ ಮಹಾದೇವಿಯ ಸ್ಮಾರಕ ಶಿಲಾಶಾಸನವೂ ಇಲ್ಲಿ ದೊರೆತಿದೆ. ಚುಟುಕುಲದ ವಿಣ್ಹುಕಡ ಚುಟುಕುಲಾನಂದನ ಮಗಳಾದ ಶಿವಸ್ಕಂದ ನಾಗಶ್ರೀ ಹಾಕಿಸಿದ ನಾಗಪ್ರತಿಮೆ ಶಾಸನವು ಪ್ರಮುಖವಾದದ್ದಾಗಿದೆ. ಕರ್ನಾಟಕದ ಮಟ್ಟಿಗೆ ವಿಹಾರ, ಕೆರೆ ಮತ್ತು ನಾಗಪ್ರತಿಮೆ ಮಾಡಿಸಿ ದಾನನೀಡಿದ ಪ್ರಾಚೀನ ಮಹಿಳೆ ಶಿವಸ್ಕಂದ ನಾಗಶ್ರೀ ಆಗಿರುವುದು ಗಮನಾರ್ಹ ಅಂಶ. ಪ್ರಾಕೃತ ಭಾಷೆ ಮತ್ತು ಬ್ರಾಹ್ಮಿ ಲಿಪಿಯಲ್ಲಿರುವ ಪ್ರಾಚೀನ ಶಾಸನಗಳಿವು. ಬನವಾಸಿಯು ವಿವಿಧ ಧರ್ಮಗಳ ನೆಲೆವೀಡೇ ಸರಿ. ಕ್ರಿ.ಪೂ. 3ನೆಯ ಶತಮಾನದಿಂದ ಕ್ರಿ.ಶ. 3ನೆಯ ಶತಮಾನದವರೆಗೆ ಬೌದ್ಧಧರ್ಮದ ನೆಲೆಯಾಗಿ, ಕದಂಬರ ಕಾಲದಲ್ಲಿ ಶೈವ ಮತ್ತು ವೈಷ್ಣವ ಧರ್ಮಗಳ ತಾಣವಾಗಿ, ನಂತರ ಕಾಲದಲ್ಲಿ ಜೈನರ ಕೇಂದ್ರವಾಗಿಯೂ ಕಾರ್ಯ ನಿರ್ವಹಿಸಿದೆ.

ಚುಟು, ಶಾತವಾಹನ, ಕದಂಬರಿಂದ ಹಿಡಿದು ಮಧ್ಯಯುಗೀನ ಅವಧಿಯವರೆಗೆ ಬನವಾಸಿಯು ರಾಜಧಾನಿಯಾಗಿ ಮೆರೆದ ತಾಣ. ನಂತರದ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ವಿಜಯನಗರ ಅರಸರ ಕಾಲದಲ್ಲಿ ಬನವಾಸಿ ಪನ್ನಿರ್ಚ್ಛಾಸಿರ ಅಥವಾ ಬನವಾಸಿ-12000 ಎಂಬುದಾಗಿಯೂ, ಕದಂಬ ಶಾಖೆಯಾದ ಹಾನಗಲ್ಲು ಕದಂಬರ ಆಡಳಿತದ ಕೇಂದ್ರವೂ ಆಗಿದ್ದಿತು. ಬನವಾಸಿಯ ಕೋಟೆಯ ಬಹಳ ಪ್ರಾಚೀನವಾದುದೇ ಆಗಿದೆ. ಇದು ಚುಟು ಅರಸರ ಕಾಲದಲ್ಲಿ ಕಟ್ಟಲಾದ ಇಟ್ಟಿಗೆಯ ಕೋಟೆಯಾಗಿತ್ತೆಂಬುದು ಅ. ಸುಂದರ ಅಭಿಪ್ರಾಯ. ಬಾದಾಮಿ ಚಾಲುಕ್ಯ ಇಮ್ಮಡಿ ಪುಲಕೇಶಿಯ ಐಹೊಳೆ ಶಾಸನದಲ್ಲೂ ಈ ಕೋಟೆಯ ಉಲ್ಲೇಖವಿರುವುದು ಗಮನೀಯ.

ಮಧುಕೇಶ್ವರ ದೇವಾಲಯ: ಬನವಾಸಿಯು ಅತ್ಯಂತ ಪ್ರಸಿದ್ಧ ಐತಿಹಾಸಿಕ ಮತ್ತು ಪ್ರವಾಸಿ ತಾಣವೆಂದರೆ ಅದು ಈ ಮಧುಕೇಶ್ವರ ದೇವಾಲಯವೇ ಆಗಿದೆ. ಕದಂಬರಿಂದ ಹಿಡಿದು ಸೌದಿ ಅರಸರವರೆಗಿನ ಅನೇಕ ವಿಭಿನ್ನ ರಚನೆಗಳನ್ನು ಈ ದೇವಾಲಯದಲ್ಲಿ ಕಾಣುತ್ತೇವೆ. ಸೋದೆ ಅರಸರು ನಿರ್ಮಿಸಿದ ಅತ್ಯಂತ ಸೂಕ್ಷ್ಮ ಕೆತ್ತನೆಯುಳ್ಳ ಶಿಲಾಮಂಟಪ(ಮಂದಾಸನ)ವು ವಿಶಿಷ್ಟ ಬಗೆಯದ್ದು. ಈ ದೇವಾಲಯ ಆವರಣದಲ್ಲಿ ನರಸಿಂಹ, ಗಣೇಶ, ಪಾರ್ವತಿ, ಅಮೃತೇಶ್ವರ, ಶಿಥಿಕಂಠೇಶ್ವರ, ಅಲ್ಲಮಪ್ರಭು, ಸದಾಶಿವ ಮೊದಲಾದವು ಕಾಲಾನಂತರದ ಸೇರ್ಪಡೆಗಳೇ ಆಗಿವೆ.

# ಅರುಣ್‌ಸಿಂಗ್ ಹೇಳಿಕೆ ನಾಯಕತ್ವ ಬದಲಾವಣೆಯ ಮುನ್ಸೂಚನೆಯೇ?

● ವರದಿಗಾರ

ಉಪ ಚುನಾವಣೆ ಫಲಿತಾಂಶದ ಬಳಿಕ ಮೊದಲ ಸಲ ಬೆಂಗಳೂರಿಗೆ ಬಂದಿರುವ ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಸದ್ಯಕ್ಕೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ಕಟೀಲ್ ಅವರ ಬದಲಾವಣೆ ಇಲ್ಲ ಎಂದಿದ್ದಾರೆ ಇದು ಸಹಜವಾಗಿಯೇ ಮಹತ್ವವನ್ನು ಪಡೆದುಕೊಂಡಿದೆ ಯಾಕೆಂದರೆ ಇಂತ ಪ್ರಸ್ತಾಪಗಳೇ ಅವರ ಅಧಿಕಾರದಿಂದ ಕೆಳಗಿಳಿಸುವ ಮುನ್ನಡಿಯಾಗುತ್ತದೆ ಎನ್ನುವುದು ಕೂಡ ಅಷ್ಟೆ ಪುಷ್ಟಿ ಪಡೆದಿದೆ

ಅರುಣ್ ಸಿಂಗ್ ಹಲವು ಲೆಕ್ಕಾಚಾರಗಳನ್ನು ಮಾಡಿಟುಕೊಂಡೇ ಬೆಂಗಳೂರಿಗೆ ಬಂದಿದ್ದು .ಹೈಕಮಾಂಡ್ ಸೂಚನೆ ಮೇರೆಗೆ ಇಲ್ಲಿನ ಕೆಲ ಬೆಳವಣಿಗೆಗಳ ಮೂಲಕ ರಾಜ್ಯದ ಒಂದಿಬ್ಬರು ನಾಯಕರ ವಿರುದ್ದ ಕೇಳಿ ಬಂದಿರುವ ದೂರು ಹಾಗೂ ಉಪ ಚುನಾವಣೆಯಲ್ಲಿ ಸೋಲು ಕುರಿತ ಮಾಹಿತಿ ಹಿನ್ನೆಲೆಯಲ್ಲಿ ಬಂದಿದ್ದಾರೆ. ನಾಯಕತ್ವ ಬದಲಾವಣೆ ಬಳಿಕ ರಾಜ್ಯದಲ್ಲಿ ಬಿಜೆಪಿಗೆ ಮಿಶ್ರ ಬೆಂಬಲ ವ್ಯಕ್ತವಾಗಿದೆ. ಜೊತೆಗೆ ಸಿಎಂ ಬೊಮ್ಮಾಯಿ ಅವರ ತವರು ಜಿಲ್ಲೆಯಲ್ಲಿಯೆ ಬಿಜೆಪಿಗೆ ಹಿನ್ನಡೆಯಾಗಿದೆ. ಅಷ್ಟೇ ಅಲ್ಲ ಹಾನಗಲ್ ಉಪ ಚುನಾವಣೆ ಸೋಲಿನ ಹಿಂದೆ ಕೆಲ ಬಿಜೆಪಿ ನಾಯಕರೂ ಇದ್ದಾರೆ ಎಂಬ ಚರ್ಚೆಗಳು ಆರಂಭವಾಗಿರುವುದು ಕೂಡ ಹೈಕಮಾಂಡ್ ಗಮನಕ್ಕೆ ಬಂದಿದೆ ಈ ಎಲ್ಲಾ ಕುರಿತು ಸ್ಪಷ್ಟೀಕರಣ ಮತ್ತು ಬಿಟ್‌ಕಾಯಿನ್ ದಂಧೆಯಲ್ಲಿ ಕೇಳಿ ಬಂದಿರುವ ಹೆಸರುಗಳ ಕುರಿತು ಮಾಹಿತಿಯನ್ನು ಪಡೆಯಲಿದ್ದಾರೆ.





ಇದೇ ವೇಳೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರನ್ನು ಬದಲಾವಣೆ ಮಾಡಲಾಗುತ್ತದೆ ಎಂಬ ವಿಚಾರ ಮುನ್ನೆಲೆಗೆ ಬಂದಿರುವುದು ಕುತೂಹಲ ಮೂಡಿಸಿದೆ. ಈ ಬಗ್ಗೆ ಬೆಂಗಳೂರಿನಲ್ಲಿ ಅರುಣ್ ಸಿಂಗ್ ಮಹತ್ವದ ಹೇಳಿಕೆ ನೀಡಿದ್ದಾರೆ. ಸಿಎಂ ಹಾಗೂ ರಾಜ್ಯಾಧ್ಯಕ್ಷರನ್ನು ಬಿಜೆಪಿ ಬದಲಾವಣೆ ಮಾಡಲಿದೆಯಾ? ಮುಂದಿದೆ ಮಾಹಿತಿ! ಉಪ ಚುನಾವಣೆ ಫಲಿತಾಂಶದ ಬಗ್ಗೆ ಹೈಕಮಾಂಡ್ ನಿಲುವು! ಉಪ ಚುನಾವಣೆ ಫಲಿತಾಂಶದ ಹಿನ್ನೆಲೆಯಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷರ ಬದಲಾವಣೆ ಕುರಿತು ಚರ್ಚೆಗಳು ನಡೆಯುತ್ತಿವೆ. ಬೆಂಗಳೂರಿಗೆ ಆಗಮಿಸಿದ ಬಳಿಕ ಈ ವಿಚಾರದ ಬಗ್ಗೆ ಪ್ರತಿಕ್ರಿಯೆ ಕೊಟ್ಟಿರುವ ಅರುಣ್ ಸಿಂಗ್, "ಸಿಂದಗಿ ವಿಧಾನಸಭಾ ಉಪ ಚುನಾವಣೆಯಲ್ಲಿ ನಾವು ಭರ್ಜರಿ ಜಯಗಳಿಸಿದ್ದೇವೆ. ಆದರೆ ಬಹಳಷ್ಟು ಪ್ರಯತ್ನ ಮಾಡಿದರು ಕಡಿಮೆ ಮತಗಳ ಅಂತರದಿಂದ ನಾವು ಹಾನಗಲ್ ಉಪ ಚುನಾವಣೆಯಲ್ಲಿ ಸೋತಿದ್ದೇವೆ. ಹಾನಗಲ್‌ನಲ್ಲಿ ಪಕ್ಷದ ಕಾರ್ಯಕರ್ತರು ವಿಶೇಷ ಶ್ರಮವಹಿಸಿದ್ದರು. ಮುಖ್ಯಮಂತ್ರಿ ಬೊಮ್ಮಾಯಿ ಹಾಗೂ ಸಚಿವರು ಮತ್ತು ಪಕ್ಷದ ಮುಖಂಡರು ಹೆಚ್ಚಿನ ಶ್ರಮ ವಹಿಸಿದ್ದಾರೆ. ಆದರೂ ನಾವು ಕಡಿಮೆ ಮತಗಳ ಅಂತರದಿಂದ ಸೋತಿದ್ದೇವೆ" ಎಂದು ವಿಶ್ಲೇಷಿಸಿದ್ದಾರೆ. ಪೆಟ್ರೋಲ್ ಬೆಲೆ ಏರಿಕೆ ವಿರುದ್ಧ ಪಾಕಿಸ್ತಾನ ಸಂಸದ ಪ್ರತಿಭಟನೆ ಬೊಮ್ಮಾಯಿ, ಕಟೀಲ್ ಬದಲಾಗುತ್ತಾರಾ? ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಪಕ್ಷದ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರನ್ನು ಬದಲಾವಣೆ ಮಾಡುವ ಬಗ್ಗೆ ಪ್ರತಿಕ್ರಿಯೆ ಕೊಟ್ಟಿರುವ ಅರುಣ್ ಸಿಂಗ್, "ಅದೆಲ್ಲ ಕೇವಲ ಊಹೆ ಮಾತ್ರ. ಅದು ಕಾಂಗ್ರೆಸ್ ಧ್ವನಿಯಷ್ಟೇ. ಕಾಂಗ್ರೆಸ್ ಅಂಥ ವದಂತಿಗಳನ್ನು ಹಬ್ಬಿಸುತಿದೆ ಎಂದಿದ್ದಾರೆ.

## ಹಿಂದೆ ಹೇಳಿದ್ದೇನೆ?

ಹಿಂದೆ ಯಡಿಯೂರಪ್ಪ ಬದಲಾವಣೆ ನಿರಾಕರಿಸಿದ್ದ ಸಿಂಗ್! ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಸ್ಪಷ್ಟನೆ ಬಳಿಕವೂ ಬದಲಾವಣೆ ಚರ್ಚೆ ಮುಂದುವರೆದಿದೆ. ಈ ಹಿಂದೆ ಮುಖ್ಯಮಂತ್ರಿ ಹುದ್ದೆಯಿಂದ ಯಡಿಯೂರಪ್ಪ ಅವರನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡುವುದಿಲ್ಲ ಎಂದು ಅರುಣ್ ಸಿಂಗ್ ಸ್ಪಷ್ಟವಾಗಿ ಹೇಳಿದ್ದರು. ಅದಾದ ಎರಡು ದಿನಗಳಲ್ಲಿ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಕೊಟ್ಟಿದ್ದರು. ಆದರೆ ಈಗಿನ ಪರಿಸ್ಥಿತಿಯೇ ಬೇರೆಯಿದೆ ಎಂಬ ಚರ್ಚೆಯೂ ರಾಜ್ಯ ಬಿಜೆಪಿಯಲ್ಲಿ ನಡೆದಿದೆ. ನಾಳೆ ಮಂಗಳವಾರ ಹಾಗೂ ನಾಡಿದ್ದು ಬುಧವಾರ ಬೆಂಗಳೂರಿನಲ್ಲಿ ವಿವಿಧ ಸಭೆಗಳನ್ನು ಅರುಣ್ ಸಿಂಗ್ ಮಾಡಲಿದ್ದಾರೆ.



ಆ ಬಗ್ಗೆ ಮಾಹಿತಿ ಮುಂದಿದೆ. ವೇದಾವತಿ ನದಿಗೆ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣಕ್ಕೆ ಸಚಿವ ಸಂಪುಟದಲ್ಲಿ ಅನುಮೋದನೆ ಬಿಬಿಎಂಪಿ ಚುನಾವಣಾ ಸಿದ್ಧತಾ ಸಭೆ! ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಕೋರಕಮಿಟಿ ಸಭೆಯಲ್ಲಿ ಭಾಗವಹಿಸಿದ್ದು ಈವೇಳೆ ಹಲವು ಮಹತ್ವದ ಚರ್ಚೆಗಳನ್ನು ಮಾಡಿದ್ದಾರೆ ಕೆಲ ನಾಯಕರಿಂದ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದಾರೆ.

ಇದೇ ವೇಳೆ ವಿಧಾನಪರಿಷತ್ ಚುನಾವಣೆ ಕೂಡ ಪ್ರಕಟವಾಗಿದ್ದು ಈ ಕುರಿತು ಚರ್ಚೆ ಮಾಡಲಾಗಿದೆ ಪ್ರಮುಖವಾಗಿ ನಾಯಕತ್ವ ಚರ್ಚೆಯೂ ಮುನ್ನಲೆಗೆ ಬಂದಿದೆ ಇದೇ ವೇಳೆ ಬಿಬಿಎಂಪಿ ಚುನಾವಣೆ ತಯಾರಿ ಕುರಿತು ಸಮಗ್ರ ಚರ್ಚೆ ನಡೆಸಿದೆ ಈ ಬಾರಿ ಶತಾಯಗತಾಯ ಬಿಬಿಎಂಪಿಯಲ್ಲಿ ಹೆಚ್ಚು ಸ್ಥಾನಗಳನ್ನು ಗಳಿಸಿ ಅಧಿಕಾರ ಹಿಡಿಯಬೇಕು ಎನ್ನುವ ಕುರಿತು ಮಾಹಿತಿಯನ್ನು ನೀಡಿದ್ದಾರೆ.

● 5ನೇ ಪುಟದಿಂದ...

## ಮಕ್ಕಳ ಖಾತೆಗೂ ಹೋಗಿದೆ ಹಣ

ಒಂದು ಕಡೆ ಹ್ಯಾಕರ್ ಶ್ರೀಕಿಯಿಂದ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದವರ ಮಕ್ಕಳ ಖಾತೆಗಳಿಗೆ ಬಿಟ್ ಕಾಯಿನ್ ವರ್ಗಾವಣೆಯಾಗಿದೆ ಎನ್ನುವುದು ಖಚಿತವಾಗಿದೆ ಅದಕ್ಕೆ ಬೇಕಾದ ಎಲ್ಲಾ ದಾಖಲೆಗಳನ್ನು ವ್ಯಕ್ತಿಯೊಬ್ಬರು ಸಂಗ್ರಹಿಸಿದ್ದಾರರೆ ಅಲ್ಲದೆ ತನಿಖೆ ನಡೆಸುತ್ತಿರುವ ಪೊಲೀಸರಿಂದಲೂ ಈ ಮಾಹಿತಿ ತಿಳಿದಿದೆ ಆದರೆ ಸದ್ಯ ಆ ಮಹಿತಿ ಹೊರಬಂದಿಲ್ಲ ಅಂದರ ಅಧಿಕಾರ ಹಿಡಿದವರ ಪ್ರಭಾವ ಎಷ್ಟಿರಬಹುದು ಎನ್ನುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ .ಆ ಬೃಹತ್ ಮೊತ್ತದ ಬಿಟ್ ಕಾಯಿನ್ ಗಳ ವರ್ಗಾವಣೆಯ ವಿವರಗಳನ್ನು ಬಹಿರಂಗಪಡಿಸದೇ ಮುಚ್ಚಿಡುತ್ತಿರುವುದು ಅನುಮಾನಗಳಿಗೆ ಪುಷ್ಟಿ ನೀಡುತ್ತಿದೆ. ಹಾಗೇ ಆತ ಬಿಜೆಪಿ ನಾಯಕರೊಂದಿಗೆ ಹೊಂದಿರುವ ನಂಟು ಮತ್ತು ಆತನ ಹ್ಯಾಕ್ ಟಾರ್ಗೆಟ್ ಗಳು ಬಿಜೆಪಿ ವಿರೋಧಿಗಳು ಎಂಬುದು ಕೂಡ ಇಡೀ ಹಗರಣದ ಹಿಂದಿನ ಕಾಣದ ಕೈಗಳ ಕೈವಾಡದ ಬಗ್ಗೆ ಸೂಚನೆ ನೀಡುತ್ತಿವೆ!


## ಬೆಚ್ಚಿಬೀಳಿಸಿದ ಹಗರಣ

ಬಿಟ್ ಕಾಯಿನ್ ಮತ್ತು ಡ್ರಗ್ಸ್ ಪ್ರಕರಣ ಪ್ರಮುಖ ಆರೋಪಿ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯ ಕುರಿತು ಸಿಸಿಬಿ ಸಲ್ಲಿಸಿರುವ ಚಾರ್ಜ್ ಶೀಟ್ ವಿವರಗಳು ದಿನದಿಂದ ದಿನಕ್ಕೆ ಆಘಾತಕಾರಿ ಸಂಗತಿಗಳನ್ನು ಬಹಿರಂಗಪಡಿಸುತ್ತಿದ್ದು, ಪ್ರಕರಣ ಅಗಾಧತೆ ಮತ್ತು ಅದರ ಹಿಂದಿನ ಕಾಣದ ಕೈಗಳ ಕೈವಾಡದ ಕುರಿತ ವಿವರಗಳು ಬೆಚ್ಚಿಬೀಳುಸುತ್ತಿವೆ.

ಹಣ ವಿನಿಮಯ ಏಜೆನ್ಸಿಗಳು ಮತ್ತು ಗೇಮಿಂಗ್ ಜಾಲತಾಣಗಳನ್ನು ಹ್ಯಾಕ್ ಮಾಡಿ ಬಿಟ್ ಕಾಯಿನ್ ದೋಚುತ್ತಿದ್ದ ಹ್ಯಾಕರ್ ಶ್ರೀಕೃಷ್ಣನ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ತನಿಖೆ ನಡೆಸಿದ್ದ ಸಿಸಿಬಿ ಪೊಲೀಸರು ಎಸಿಎಂಎಂ ನ್ಯಾಯಾಲಯಕ್ಕೆ ಸಲ್ಲಿಸಿರುವ ಆರೋಪ ಪಟ್ಟಿಯ ವಿವರಗಳು ಇದೀಗ ರಾಜಕೀಯ ವಲಯದಲ್ಲಿ ಬಿರುಗಾಳಿ ಎಬ್ಬಿಸಿವೆ.

ಮುಖ್ಯವಾಗಿ ಮಾಜಿ ಮುಖ್ಯಮಂತ್ರಿ ಹಾಗೂ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ನಿರಂತರವಾಗಿ ಈ ಹಗರಣದ ವಿಷಯದಲ್ಲಿ ಸರ್ಕಾರವನ್ನು ಪ್ರಶ್ನಿಸುವ ಮೂಲಕ, ಸಿಸಿಬಿ ತನಿಖೆಯ ವಿವರಗಳನ್ನು ಮುಚ್ಚಿಟ್ಟು, ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸುತ್ತಿರುವವರನ್ನು ಇಕ್ಕಟ್ಟಿಗೆ ಸಿಲುಕಿಸಿದ್ದಾರೆ. “ಹ್ಯಾಕರ್ ಶ್ರೀಕಿಯನ್ನು ವಿಚಾರಣೆ ನಡೆಸಿದ್ದ ಸಿಸಿಬಿ ಬರೋಬ್ಬರಿ ಐದು ಸಾವಿರ ಬಿಟ್ ಕಾಯಿನ್ ದೋಚಿರುವುದನ್ನು ಸ್ವತಃ ಆರೋಪಿಯೇ ಒಪ್ಪಿಕೊಂಡಿದ್ದಾನೆ ಎಂದು ಹೇಳಿದೆ. ಆದರೆ, ಆ ಐದು ಸಾವಿರ ಬಿಟ್ ಕಾಯಿನ್ ಈಗ ಏನಾಗಿವೆ? ಅವನ್ನು ಸಿಸಿಬಿ ವಶಪಡಿಸಿಕೊಂಡಿದೆಯೇ? ಅಥವಾ ಈವರೆಗೂ ಅವುಗಳನ್ನು ಪತ್ತೆಮಾಡಲಾಗಿಲ್ಲವೆ? ಎನ್ನುವ ಅಂಶವೂ ಕೂಡ ಈಗ ರಾಜಕೀಯ ವಲಯದಲ್ಲಿ ಸಾಕಷ್ಟು ಸದ್ದು ಮಾಡುತ್ತಿದೆ

ಆ ಮೂಲಕ ಬಿಟ್ ಕಾಯಿನ್ ಹಗರಣದ ಮೂಲಕ್ಕೆ ಅವರು ಕೈಹಾಕಿದ್ದು, ವಾಸ್ತವವಾಗಿ ಶ್ರೀಕಿ ಎಷ್ಟು ಪ್ರಮಾಣದ ಬಿಟ್ ಕಾಯಿನ್ ಹ್ಯಾಕ್ ಮಾಡಿದ್ದಾನೆ. ಅವುಗಳ ಒಟ್ಟು ಮೌಲ್ಯವೆಷ್ಟು? ಆ ಬಳಿಕ ಆ ಸಂಪಾದನೆಯನ್ನು ಆತ ಹೇಗೆ ಬಳಸಿದ್ದಾನೆ? ಆತ ಹ್ಯಾಕ್ ಮಾಡಿದ್ದು ಯಾವೆಲ್ಲಾ ಖಾತೆಗಳಿಂದ ಮತ್ತು ನಂತರ ಅವುಗಳನ್ನು ಯಾವೆಲ್ಲಾ ಖಾತೆಗಳಿಗೆ ವರ್ಗಾಯಿಸಲಾಗಿದೆ? ಎಂಬುದು ಮೂಲಭೂತವಾಗಿ ಇರುವ ಪ್ರಶ್ನೆ. ಅಂದರೆ, ನಟೋರಿಯಸ್ ಹ್ಯಾಕರ್ ಯಾರ ಖಾತೆಯಿಂದ ಎಷ್ಟು ಮೌಲ್ಯದ ಬಿಟ್ ಕಾಯಿನ್ ದೋಚಿದ್ದ ಮತ್ತು ಹಾಗೆ ದೋಚಿದ ಬಿಟ್ ಕಾಯಿನ್ ಗಳನ್ನು ಯಾರು ಖರೀದಿಸಿದ್ದರು ಅಥವಾ ಯಾರ ಖಾತೆಗೆ ವರ್ಗಾಯಿಸಲಾಗಿತ್ತು? ಎಂಬ ವಿವರಗಳು ಹೊರಬಂದರೆ, ಇಡೀ ಹಗರಣದ ಪಾಲುದಾರರು ಮತ್ತು ಸೂತ್ರಧಾರರು ಬೆತ್ತಲಾಗಲಿದ್ದಾರೆ.





# ಬಿಟ್‌ಕಾಯಿನ್ ದಂಧೆಗೆ ಯಾರ್‍ಯಾರ ತಲೆದಂಡ?

ಹಾಗಾಗಿಯೇ ಕಾಂಗ್ರೆಸ್ ಈ ಅಂಶದ ಮೇಲೆ ಬಿಜೆಪಿ ವಿರುದ್ಧ ಹರಿಹಾಯುತ್ತಿದೆ.

ಹಾಗೇ, ಪ್ರಕರಣ ತನಿಖೆ ನಡೆಸಿದ್ದ ಸಿಸಿಬಿ ಪೊಲೀಸರು ಕಳೆದ ಜನವರಿಯಲ್ಲಿ ಶ್ರೀಕಿಯಿಂದ ಸುಮಾರು 9 ಕೋಟಿ ಮೌಲ್ಯದ 31 ಬಿಟ್ ಕಾಯಿನ್ ವಶಪಡಿಸಿಕೊಂಡಿರುವುದಾಗಿ ಹೇಳಿದ್ದರು. ಆದರೆ, ವಾಸ್ತವವಾಗಿ ಅದು ಕೂಡ ನಿಜವಲ್ಲ. ಪೊಲೀಸರ ಒತ್ತಡಕ್ಕೆ ಮಣಿದ ಆರೋಪಿ, ಆ 31 ಬಿಟ್ ಕಾಯಿನ್ ಗಳನ್ನು ಕೂಡ ಇನ್ನೊಂದು ಹ್ಯಾಕ್ ಮೂಲಕ ದೋಚಿ ಪೊಲೀಸರಿಗೇ ಯಾಮಾರಿಸಿದ್ದ ಎಂಬ ಸಂಗತಿಯನ್ನು ಸಿಸಿಬಿಯ ಹಿರಿಯ ಅಧಿಕಾರಿಯೊಬ್ಬರು ಹೇಳಿರುವುದಾಗಿ ‘ದ ಹಿಂದೂ’ ವರದಿ ಮಾಡಿದೆ. ಅಲ್ಲದೆ, ಪೊಲೀಸರು ಈವರೆಗೆ ಆರೋಪಿಯಿಂದ ಒಂದೇ ಒಂದು ಬಿಟ್ ಕಾಯಿನ್ ಕೂಡ ವಾಪಸ್ ಪಡೆಯಲಾಗಿಲ್ಲ ಎಂಬ ಸಂಗತಿಯನ್ನು ಕೂಡ ಶ್ರೀಕಿಯನ್ನು ಬಂಧಿಸಿದ್ದ ಆ ಅಧಿಕಾರಿಯೇ ಬಹಿರಂಗಪಡಿಸಿರುವುದಾಗಿಯೂ ವರದಿಯನ್ನು ಹೇಳಲಾಗಿದೆ.

ಅಂದರೆ, ಶ್ರೀಕಿ ನಡೆಸಿದ ಹತ್ತಾರು ಸಾವಿರ ಕೋಟಿ ಬಿಟ್ ಕಾಯಿನ್ ಹ್ಯಾಕಿಂಗ್ ದಂಧೆಯ ಪೈಕಿ, ಆ ಪ್ರಕರಣದ ಕುರಿತು ತನಿಖೆ ನಡೆಸಿದ ಪೊಲೀಸರು ಒಂದೇ ಒಂದು ರೂಪಾಯಿ ಮೊತ್ತದಷ್ಟನ್ನೂ ವಶಪಡಿಸಿಕೊಳ್ಳಲು ಆಗಿಲ್ಲ ಎಂಬುದನ್ನು ಸ್ವತಃ ಸಿಸಿಬಿಯ ಮೂಲಗಳೇ ಒಪ್ಪಿಕೊಂಡಿವೆ. ಹಾಗಿರುವಾಗ ನಮ್ಮ ಪೊಲೀಸರು ಪ್ರಕರಣದ ತನಿಖೆಯನ್ನು ಯಶಸ್ವಿಯಾಗಿ ಮಾಡಿದ್ದಾರೆ ಎಂದು ಸ್ವತಃ ಸಿಎಂ ಬೊಮ್ಮಾಯಿ ಮತ್ತು ಗೃಹ ಸಚಿವ ಆರಗ ಅವರು ಹೇಳಿರುವುದು ಏನನ್ನು ಸೂಚಿಸುತ್ತದೆ? ಎಂಬುದು ಇಲ್ಲಿನ ಮೂಲ ಪ್ರಶ್ನೆ.

## ಜನ್‌ದನ್ ಖಾತೆಗೂ ಹ್ಯಾಕ್

ಅದೇ ಹೊತ್ತಿಗೆ, ಹ್ಯಾಕರ್ ಶ್ರೀಕೃಷ್ಣ ಕೇಂದ್ರ ಸರ್ಕಾರದ ಜನ್ ಧನ್ ಖಾತೆ ಸೇರಿದಂತೆ ಕೇಂದ್ರ ಸರ್ಕಾರದ ಇ-ಪೇಮೆಂಟ್ ಜಾಲತಾಣಗಳನ್ನು ಕೂಡ ಹ್ಯಾಕ್ ಮಾಡಿ ಭಾರೀ ಮೊತ್ತದ ಹಣವನ್ನು ದೋಚಿದ್ದಾನೆ ಎಂಬ ಅಂಶ ಕೂಡ ಸಿಸಿಬಿ ಚಾರ್ಜ್ ಶೀಟ್ ನಲ್ಲಿ ನಮೂದಾಗಿದೆ

ಹಾಗಾಗಿ ಕೇಂದ್ರ ಸರ್ಕಾರದ ಜನ್ ಧನ್ ಖಾತೆಯೂ ಸೇರಿದಂತೆ ವಿವಿಧ ಇಲಾಖೆಗಳ ಇ-ಪೇಮೆಂಟ್ ಖಾತೆಗಳನ್ನು ಹ್ಯಾಕ್ ಮಾಡಿರುವ ಕೋಟ್ಯಂತರ ರೂಪಾಯಿ ಹಣದ ವಿಷಯದಲ್ಲಿ ಸಿಸಿಬಿ ತನಿಖೆ ಏನು ಹೇಳುತ್ತದೆ? ಆ ಹಣವನ್ನು ಆರೋಪಿ ಏನು ಮಾಡಿದ? ಯಾವ ಖಾತೆ ಮೂಲಕ ಮತ್ತು ಯಾವ ಖಾತೆಗೆ ಆ ಹಣದ ವರ್ಗಾವಣೆ ಆಗಿದೆ? ಆ ಮೊತ್ತದ ಹಣವನ್ನು ವಶಕ್ಕೆ ಪಡೆಯಲು ಯಾವ ಪ್ರಯತ್ನಗಳನ್ನು ಮಾಡಲಾಗಿದೆ ಮತ್ತು ವಶಕ್ಕೆ ಪಡೆಯಲಾಗಿದೆಯೇ? ಎಂಬ ಪ್ರಶ್ನೆಗಳು ಉದ್ಭವವಾಗಿದೆ.

ಮುಖ್ಯವಾಗಿ ಆರೋಪಿ ಬೆಂಗಳೂರಿನ ಬಿಜೆಪಿಯ ಪ್ರಭಾವಿ ಸಚಿವರೊಬ್ಬರ ಆಪ್ತರ ಪುತ್ರ ಮತ್ತು ಆತ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಮೋದಿ ಮತ್ತು ಅವರ ಸರ್ಕಾರದ ನೀತಿಗಳ ಕಟುಟೀಕಾಕಾರರಾದ ಪತ್ರಕರ್ತೆ ಬರ್ಕಾ ದತ್, ಎನ್ ಡಿಟಿವಿ ಸುದ್ದಿವಾಹಿನಿಯ ಸಾಮಾಜಿಕ ಜಾಲತಾಣ ಖಾತೆಗಳನ್ನು ಕೂಡ ಹ್ಯಾಕ್ ಮಾಡಿದ್ದ ಎಂಬ ಅಂಶ ಕೂಡ ಶ್ರೀಕಿ ಎಂಬ ಹ್ಯಾಕರ್ ಹಿಂದೆ ಆಡಳಿತಪಕ್ಷದ ಶ್ರೀರಕ್ಷೆ ಇರುವ ಸುಳಿವು ನೀಡಿದೆ.

ರಾಹುಲ್ ಗಾಂಧಿ, ಬರ್ಕಾ, ಎನ್ ಡಿಟಿವಿ ಮತ್ತು ವಿಜಯ್ ಮಲ್ಯ ಜಾಲತಾಣ ಖಾತೆಗಳನ್ನು ನಿರ್ವಹಿಸುತ್ತಿದ್ದ ನೆಟ್4ಇಂಡಿಯಾ ದತ್ತಾಂಶ ಕೇಂದ್ರದ ಸರ್ವರ್ ಹ್ಯಾಕ್ ಮಾಡಿ ಆ ಸಂಸ್ಥೆಗೆ ಭಾರೀ ಮೊತ್ತದ ಹಣಕ್ಕಾಗಿ ಬೇಡಿಕೆ ಇಟ್ಟಿದ್ದ. ‘ಲಿಜಿಯೋನ್’ ಹೆಸರಿನಲ್ಲಿ ಈ ಕೃತ್ಯ ನಡೆಸಿದ್ದ ಆತ ಬಿಟ್ ಕಾಯಿನ್ ರೂಪದಲ್ಲಿ ಹಣ ಪಾವತಿಸಲು ಕೇಳಿದ್ದ ಮತ್ತು ಕೇಳಿದಷ್ಟು ಹಣ ಕೊಡದೇ ಇದ್ದರೆ ಎಲ್ಲಾ ದತ್ತಾಂಶ ಅಳಿಸಿಹಾಕುವ ಬೆದರಿಕೆ ಒಡ್ಡಿದ್ದ. ನೆಟ್4ಇಂಡಿಯಾ ಕಂಪನಿಯ ಅಧಿಕಾರಿಗಳು ಆರಂಭದಲ್ಲಿ ಆರೋಪಿಗೆ ಹಣ ನೀಡಿದ್ದರು. ಮತ್ತಷ್ಟು ಹಣಕ್ಕೆ ಬೇಡಿಕೆ ಇಟ್ಟಾಗ ಆತನ ವಿರುದ್ಧ ದೆಹಲಿ ಆರ್ಥಿಕ ಅಪರಾಧ ದಳಕ್ಕೆ ದೂರು ನೀಡಿದ್ದರು. ಆದರೆ, ಲಿಜಿಯೋನ್ ಎಂಬ ನಕಲಿ ಹೆಸರಿನಿಂದಾಗಿ ಅವರಿಗೆ ಈತನನ್ನು ಪತ್ತೆ ಮಾಡುವುದು ಸಾಧ್ಯವಾಗಿರಲಿಲ್ಲ ಎಂಬ ಅಂಶವನ್ನೂ ಸಿಸಿಬಿ ಪೊಲೀಸರು ಚಾರ್ಜ್ ಶೀಟ್ ನಲ್ಲಿ ಪ್ರಸ್ತಾಪಿಸಿದ್ದಾರೆ!

## ಅಪಹರಿಸಲಾಗಿತ್ತು

ಶ್ರೀಕಿ ದಿನದ ಬಹುಪಾಲು ಸಮಯವನ್ನು ಹ್ಯಾಕಿಂಗ್‌ಗೆ ಮೀಸಲಿರಿಸುತ್ತಿದ್ದ. ಜೊತೆಗಿದ್ದ ಸ್ನೇಹಿತರೇ, ಆತನನ್ನು ಅಪಹರಿಸಿ ಬಿಟ್ ಕಾಯಿನ್‌ಗಳನ್ನು ತಮ್ಮದಾಗಿಸಿಕೊಳ್ಳಲು ಮುಂದಾಗಿದ್ದರು’ ಎಂಬ ಅಂಶ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಶ್ರೀಕೃಷ್ಣನನ್ನು ಅಪಹರಿಸಿದ್ದ ಹಾಗೂ ಅಕ್ರಮ ಬಂಧನದಲ್ಲಿಟ್ಟಿದ್ದ ವಿಷಯವನ್ನು ಪ್ರಸ್ತಾಪಿಸಿದ್ದಾರೆ‘ಶ್ರೀಕೃಷ್ಣನಿಂದ ಬಿಟ್ ಕಾಯಿನ್‌ಗಳನ್ನು ಪಡೆದು ಬೇರೆಯವರಿಗೆ ಮಾರಾಟ ಮಾಡುತ್ತಿದ್ದ ‘ರಾಬಿನ್ ಆನ್‌ಲೈನ್ ಸರ್ವೀಸ್ ಮಾಲೀಕ ರಾಬಿನ್ ಖಂಡೇಲ್‌ವಾಲಾ, ಶ್ರೀಕೃಷ್ಣನ ಅಪಹರಣದ ಬಗ್ಗೆ ಹೇಳಿಕೆ ನೀಡಿದ್ದಾನೆ. ಜೊತೆಗೆ, ಸ್ನೇಹಿತರಿಂದ ತಪ್ಪಿಸಿಕೊಂಡ ಬಗೆಯನ್ನೂ ವಿವರಿಸಿದ್ದಾನೆ’ ಎಂದು ಆರೋಪ ಪಟ್ಟಿಯಲ್ಲಿ ಹೇಳಲಾಗಿದೆ.ಶ್ರೀಕೃಷ್ಣನ ಜೊತೆ ಬಿಟ್ ಕಾಯಿನ್ ವ್ಯವಹಾರ ಇಟ್ಟುಕೊಂಡಿದ್ದ ರಾಬಿನ್, 2020ರ ಆಗಸ್ಟ್ 13ರಂದು ಬೆಂಗಳೂರಿಗೆ ಬಂದಿದ್ದ. ಹೋಟೆಲ್ ಶೆರಟಾನ್‌ನಲ್ಲಿ ಎರಡು ದಿನ, ಗೋಕುಲಂ ಹೋಟೆಲ್‌ನಲ್ಲಿ 2 ದಿನ ಹಾಗೂ ಪ್ರೆಸ್ಟೀಜ್ ಗಾಲ್ಫ್ ಶೇರ್‌ನಲ್ಲಿ 30 ದಿನ ವಾಸವಿದ್ದ. ಇದೇ ಸಮಯದಲ್ಲೇ ಶ್ರೀಕೃಷ್ಣ, ಜಾಲತಾಣಗಳನ್ನು ಹ್ಯಾಕ್ ಮಾಡಿ ಬಿಟ್ ಕಾಯಿನ್ ದೋಚುತ್ತಿದ್ದ. ಅದೇ ಕಾಯಿನ್‌ಗಳನ್ನು ರಾಬಿನ್ ಮೂಲಕ ಮಾರಾಟ ಮಾಡಿಸಿ, ವಿವಿಧ ಖಾತೆಗಳಿಗೆ ಹವಾಲಾ ಮೂಲಕ ಹಣ ಹಾಕಿಸಿಕೊಳ್ಳುತ್ತಿದ್ದ’ ಎಂಬ ಸಂಗತಿ ಪಟ್ಟಿಯಲ್ಲಿದೆ.

ಟ್ ಕಾಯಿನ್ ನೀಡದಿದ್ದಕ್ಕೆ ಜಗಳ: ‘ಹ್ಯಾಕ್‌ನಿಂದ ದೋಚಿದ್ದ ಬಿಟ್ ಕಾಯಿನ್‌ಗಳನ್ನು ಶ್ರೀಕೃಷ್ಣ, ಸ್ನೇಹಿತರಿಗೆ ಕೊಟ್ಟಿರಲಿಲ್ಲ. ಪ್ರಕರಣದ ಆರೋಪಿಗಳಾದ ಸುನೀಶ್ ಹೆಗ್ಡೆ, ಸುಜಯ್ ಹಾಗೂ ಇತರರು ಶ್ರೀಕೃಷ್ಣನ ಮೇಲೆ ಸಿಟ್ಟಾಗಿದ್ದರು. ಬಿಟ್ ಕಾಯಿನ್ ನೀಡದಿದ್ದನ್ನು ಪ್ರಶ್ನಿಸಿ ಜಗಳ ಮಾಡಿ ಪರಸ್ಪರ ಕೈ ಕೈ ಮಿಲಾಯಿಸಿದ್ದರು’ ಎಂಬ ಮಾಹಿತಿಯನ್ನು ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.‘ರಾಬಿನ್ ಮುಂದಿಟ್ಟುಕೊಂಡು ಶ್ರೀಕೃಷ್ಣನನ್ನು ಹೆದರಿಸಿ ಬಿಟ್ ಕಾಯಿನ್‌ಗಳನ್ನು ತಮ್ಮದಾಗಿಸಿಕೊಳ್ಳಲು ಆರೋಪಿಗಳು ಸಂಚು ರೂಪಿಸಿದ್ದರು. ರಾಬಿನ್ ಕಾಲಿಗೆ ಬ್ಯಾಂಡೇಜ್ ಸುತ್ತಿ, ಆತನಿಗೆ ಹೊಡೆದಿರುವುದಾಗಿ ಶ್ರೀಕೃಷ್ಣನಿಗೆ ತೋರಿಸಿದ್ದರು. ಬಿಟ್ ಕಾಯಿನ್ ನೀಡದಿದ್ದರೆ ಜೀವಂತ ಬಿಡುವುದಿಲ್ಲವೆಂದು ಶ್ರೀಕೃಷ್ಣನನ್ನು ಬೆದರಿಸಿದ್ದರು. ಅದಕ್ಕೆ ಸೊಪ್ಪು ಹಾಕದ ಶ್ರೀಕೃಷ್ಣ, ಹೋಟೆಲ್‌ನಿಂದ ಪರಾರಿಯಾಗಿದ್ದ.ಶ್ರೀಕೃಷ್ಣನಿಗಾಗಿ ಆರೋಪಿಗಳು ಹಲವೆಡೆ ಹುಡುಕಾಟ ಆರಂಭಿಸಿದ್ದರು. ಸ್ನೇಹಿತರ ಮನೆಯಲ್ಲೂ ಶೋಧ ನಡೆಸಿದ್ದರು. ಶ್ರೀಕೃಷ್ಣನ ಬಗ್ಗೆ ಯಾವುದೇ ಸುಳಿವು ಸಿಕ್ಕಿರಲಿಲ್ಲ. ಇದೇ ಸಂದರ್ಭದಲ್ಲೇ ರಾಬಿನ್‌ಗೆ ಕರೆ ಮಾಡಿದ್ದ ಶ್ರೀಕೃಷ್ಣ, ಬಿಡದಿ ಬಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ವೊಂದರಲ್ಲಿ ಇರುವುದಾಗಿ ಹೇಳಿದ್ದ. ರಾಬಿನ್ ಹಾಗೂ ಇತರೆ ಆರೋಪಿಗಳು ಸ್ಥಳಕ್ಕೆ ಹೋಗಿದ್ದರು. ಆಗಲೂ ಶ್ರೀಕೃಷ್ಣ, ಜಾಲತಾಣವೊಂದನ್ನು ಹ್ಯಾಕ್ ಮಾಡುತ್ತಿದ್ದದ್ದನ್ನು ಕಂಡಿದ್ದರು’ ಎಂಬ ಮಾಹಿತಿಯೂ ಪಟ್ಟಿಯಲ್ಲಿದೆ. ಶ್ರೀಕೃಷ್ಣನನ್ನು ಅಪಹರಿಸಿ ಬೆಂಗಳೂರಿಗೆ ಕರೆತಂದಿದ್ದ ಆರೋಪಿಗಳು, ಸುನೀಶ್‌ಗೆ ಸೇರಿದ್ದ ಫ್ಲ್ಯಾಟ್‌ನಲ್ಲಿ ಅಕ್ರಮ ಬಂಧನದಲ್ಲಿರಿಸಿದ್ದರು. ಬಿಟ್ ಕಾಯಿನ್‌ಗಳನ್ನು ತಮಗೆ ಹಸ್ತಾಂತರ ಮಾಡುವಂತೆ ಒತ್ತಾಯಿಸಿದ್ದರು. ಅದಕ್ಕೆ ಶ್ರೀಕೃಷ್ಣ ಒಪ್ಪಿರಲಿಲ್ಲ. ರಾಬಿನ್‌ನನ್ನೂ ಆತನ ಜೊತೆಯಲ್ಲೇ ಕೊಠಡಿಯಲ್ಲಿ ಕೂಡಿ ಹಾಕಿದ್ದರು. ಯಾರಿಗೂ ಬಿಟ್ ಕಾಯಿನ್ ಕೊಡುವುದಿಲ್ಲವೆಂದು ಹೇಳಿದ್ದ ಶ್ರೀಕೃಷ್ಣ, ರಾಬಿನ್ ಜೊತೆಯಲ್ಲಿ ತಡರಾತ್ರಿ ಫ್ಲ್ಯಾಟ್‌ನಿಂದ ತಪ್ಪಿಸಿಕೊಂಡಿದ್ದ. ಬಾಣಸವಾಡಿಯ ವಸತಿಗೃಹವೊಂದರ ಕೊಠಡಿಯಲ್ಲಿ ಉಳಿದುಕೊಂಡಿದ್ದ. ಮರುದಿನ ಬೇರೊಬ್ಬ ಸ್ನೇಹಿತನ ಜೊತೆ ಶ್ರೀಕೃಷ್ಣ ಹೊರಟುಹೋಗಿದ್ದ. ರಾಬಿನ್ ವಾಪಸು ತಮ್ಮೂರಿಗೆ ಹೋಗಿದ್ದ’ ಎಂಬ ಅಂಶವನ್ನು ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

## ಶ್ರೀಕೃಷ್ಣನ ಮೂಲಕವೇ ವರ್ಗಾವಣೆ?

ಹಣ ವಿನಿಮಯ ಏಜೆನ್ಸಿಗಳ ಸರ್ವರ್ ಹಾಗೂ ಆನ್‌ಲೈನ್ ಗೇಮಿಂಗ್ ಜಾಲತಾಣಗಳನ್ನು ಹ್ಯಾಕ್ ಮಾಡಿ ಶ್ರೀಕೃಷ್ಣ, ಬಿಟ್ ಕಾಯಿನ್ ರೂಪದಲ್ಲಿ ಹಣ ದೋಚುತ್ತಿದ್ದ. ಆತನ ಮೂಲಕವೇ ಬಿಟ್ ಕಾಯಿನ್‌ಗಳನ್ನು ಬೇರೊಬ್ಬರು ಅಕ್ರಮವಾಗಿ ವರ್ಗಾಯಿಸಿಕೊಂಡಿರುವ ಆರೋಪಗಳು ಸದ್ಯಕ್ಕಿವೆ’ ಎಂದೂ ಪೊಲೀಸ್ ಮೂಲಗಳು ವಿವರಿಸಿವೆ.‘ರಾಜ್ಯದ ಎರಡು ತನಿಖಾ ಸಂಸ್ಥೆಗಳ ಐ.ಪಿ ಅಡ್ರೆಸ್‌ಗಳು, ಅಕ್ರಮ ವರ್ಗಾವಣೆಗೆ ಬಳಕೆಯಾಗಿರುವ ಪ್ರಾಥಮಿಕ ಮಾಹಿತಿ ತನಿಖಾ ತಂಡಗಳಿಗೆ ಗೊತ್ತಾಗಿದೆ. ಆದರೆ, ಐ.ಪಿ ಅಡ್ರೆಸ್‌ಗಳನ್ನು ಬದಲಾಯಿಸಿ ಪ್ರಕರಣದ ದಿಕ್ಕು ತಪ್ಪಿಸುವ ಪ್ರಯತ್ನ ನಡೆದಿರುವ ಅನುಮಾನವಿದೆ. ಹೀಗಾಗಿ, ತನಿಖಾ ತಂಡಗಳು ಐ.ಪಿ ಅಡ್ರೆಸ್ ವಿಷಯದಲ್ಲಿ ಇದುವರೆಗೂ ಯಾವುದೇ ಅಂತಿಮ ನಿರ್ಧಾರಕ್ಕೆ ಬಂದಿಲ್ಲ. ಮತ್ತಷ್ಟು ಮಾಹಿತಿ ಕಲೆಹಾಕುವತ್ತ ಗಮನ ಹರಿಸಿವೆ.’

## ಹೊರದೇಶಕ್ಕೆ ವರ್ಗಾವಣೆ?:

‘ಕಂಪ್ಯೂಟರ್ ಅಥವಾ ಮೊಬೈಲ್‌ನಲ್ಲಿ ಅಂಕಿಗಳ ರೂಪದಲ್ಲಷ್ಟೇ ನೋಡಲು ಸಿಗುವ ಬಿಟ್ ಕಾಯಿನ್ ವ್ಯವಹಾರ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದೆ. ಬ್ಯಾಂಕ್ ಹಾಗೂ ಯಾವುದೇ ಮಧ್ಯವರ್ತಿಗಳಿಲ್ಲದೆ ಕಡಿಮೆ ವರ್ಗಾವಣೆ ಶುಲ್ಕದಲ್ಲಿ ವಹಿವಾಟು ನಡೆಸಬಹುದಾಗಿದೆ’ ಎಂದು ಮೂಲಗಳು ತಿಳಿಸಿವೆ.‘ಶ್ರೀಕೃಷ್ಣನ ಮೂಲಕ ಬಿಟಿಸಿ ಮಾಹಿತಿ ತಿಳಿದುಕೊಂಡು, ಆತನ ಮೂಲಕವೇ ಹೊರದೇಶಗಳ ಮಧ್ಯವರ್ತಿಗಳಿಗೆ ಬಿಟಿಸಿ ವರ್ಗಾವಣೆ ಮಾಡಿರುವ ಆರೋಪವಿದೆ. ಆದರೆ, ಈ ವರ್ಗಾವಣೆಗೆ ನಿಖರ ಪುರಾವೆ ಸದ್ಯಕ್ಕೆ ಲಭ್ಯವಾಗಿಲ್ಲ. ಕರ್ನಾಟಕದ ಸೈಬರ್ ಲ್ಯಾಬ್ ಒಂದರ ನೆರವು ಪಡೆದಿರುವ ತನಿಖಾ ತಂಡಗಳು, ಐ.ಪಿ ಅಡ್ರೆಸ್ ಮೂಲಕವೇ ಪ್ರಕರಣದ ಜಾಡು ಭೇದಿಸಲು ಯತ್ನಿಸುತ್ತಿವೆ’ ಎಂದೂ ಹೇಳಿವೆ.

## ‘ಮೊದಲ ಪ್ರಕರಣದಲ್ಲೇ ಜಾಮೀನು’

‘ನೆದರ್ಲೆಂಡ್ಸ್‌ನಲ್ಲಿ ಬಿ.ಎಸ್ಸಿ ಮುಗಿಸಿ ಬೆಂಗಳೂರಿಗೆ ಬಂದಿದ್ದ ಶ್ರೀಕೃಷ್ಣ, ಇಲ್ಲಿಯ ಸ್ನೇಹಿತರ ಜೊತೆ ಹೆಚ್ಚು ಓಡಾಡುತ್ತಿದ್ದ. 2017ರಲ್ಲಿ ಮೊದಲ ಬಾರಿಗೆ ಪೋಕರ್ ಬಾಜಿ ಆನ್‌ಲೈನ್ ಗೇಮಿಂಗ್ ಜಾಲತಾಣ ಹ್ಯಾಕ್ ಮಾಡಿ, ? 50 ಲಕ್ಷ ದೋಚಿದ್ದ. ಜಾಲತಾಣದ ಸಿಇಒ ಅವರು ಬೆಂಗಳೂರು ನಗರ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.‘ಪ್ರಕರಣದಲ್ಲಿ ಶ್ರೀಕೃಷ್ಣನ ಮೂವರು ಸ್ನೇಹಿತರನ್ನು ಪೊಲೀಸರು ಬಂಧಿಸಿದ್ದರು. ಶ್ರೀಕೃಷ್ಣ ಮಾತ್ರ ತಲೆಮರೆಸಿಕೊಂಡಿದ್ದ. ಆದರೆ, ಆತ ಅಂತರರಾಷ್ಟ್ರೀಯ ಹ್ಯಾಕರ್ ಎಂಬ ಮಾಹಿತಿ ಯಾರಿಗೂ ಗೊತ್ತಿರಲಿಲ್ಲ.’‘ನ್ಯಾಯಾಲಯದಿಂದ ಜಾಮೀನು ಪಡೆದಿದ್ದ ಆರೋಪಿ ಶ್ರೀಕೃಷ್ಣ, ವಕೀಲರ ಜೊತೆ ಠಾಣೆಗೆ ಹಾಜರಾಗಿದ್ದ. ಕಾನೂನು ಪ್ರಕ್ರಿಯೆ ಮುಗಿಸಿ ಆತನನ್ನು ವಾಪಸು ಕಳುಹಿಸಲಾಗಿತ್ತು. ಈ ಪ್ರಕರಣ ರಾಜಿಯಲ್ಲಿ ಇತ್ಯರ್ಥವಾಗಿತ್ತು. ಅದಾದ ನಂತರ, ಶ್ರೀಕೃಷ್ಣ ಸಾಕಷ್ಟು ಸೈಬರ್ ಅಪರಾಧಗಳನ್ನು ಎಸಗಿದ್ದಾನೆ’ ಎಂದೂ ತಿಳಿಸಿವೆ.



# ವಾಸ್ತು ಭೂತದ ನೆರಳಲ್ಲಿ..

ಸ್ಥಿತಿಬಿಂಬ

ಡಾ.ಶಿವಕುಮಾರ್ ಕಂಪ್ಲಿ



ಆಧುನಿಕತೆ ಎಂದರೆ ಹೊಸ ವಿಚಾರ ಹೊಸ ಆಲೋಚನೆ ಎಂಬೆಲ್ಲಾ ಹೇಳಿಕೆಗಳು ಇರುವಾಗಲೇ ಆಧುನಿಕತೆಯ ಸೂಚಕವಾದ ಕಂಪ್ಯೂಟರ್ ಮತ್ತು ಟಿ.ವಿ.ಗಳಲ್ಲಿ ನಡೆಯುತ್ತಿರುವುದಾದರೂ ಏನು? ಕಂಪ್ಯೂಟರ್ ಭವಿಷ್ಯ.ಟಿ.ವಿ.ಜ್ಯೋತಿಷ್ಯ!..

ಟಿ.ವಿ.ಯಲ್ಲಂತೂ ಗತಗಳನ್ನ ಇಟ್ಟುಕೊಂಡು ಭವಿಷ್ಯ ಹೇಳುವವರು.ಘಟಿಸಿದ ಘಟನೆಗಳನ್ನೇ ಹಿಡಿದೂ.. ಹಿಡಿದು ಅದಕ್ಕೆ ಗುರು ಹೀಗಿತ್ತು,ಶನಿ ಹೀಗಿತ್ತು,ಅದಕ್ಕೇ ಹೀಗಾಯಿತು. ಎಂದೆಲ್ಲಾ ಬೊಂಬಡಾ ಹೊಡೆಯುವವರು ಇಂತಹ ಘಟನೆ ಘಟಿಸುವುದಕ್ಕೂ ಮೊದಲು ಏನು ಮಾಡುತಿದ್ದರು? ಮೊದಲೇ ಹೀಗಾಗುತ್ತದೆಂದು ಹೇಳ ಬಹುದಿತ್ತಲ್ಲ?ಭವಿಷ್ಯ ಬಲ್ಲ ಇವರು ಬಂದು ನಿಂತು ತಡೆಯ ಬಹುದಿತ್ತಲ್ಲ?.ಎಂಬ ಪ್ರಶ್ನೆಗಳಿಗೆ ಉತ್ತರ ನೀಡರು.

ಜ್ಯೋತಿಷಿಗಳ ಕಥೆ ಹೀಗಾದರೆ? ವಾಸ್ತು ಶಾಸ್ತ್ರಜ್ಞರ ರೀತಿ ಇನ್ನೊಂದು ತೆರ.ಅವರು ನಡೆದಾಡುವ ದೇವರೆಂದೇ ಕರೆಸಿಕೊಳ್ಳುತಿದ್ದಾರೆ. ನಮ್ಮ ದೇಶದಲ್ಲಿ ನಿಜವಾದ ದೇವರು ಮೂಲೆಗೆ ಸರಿದು,ಭವಿಷ್ಯ ಹೇಳುವವರು,ವ್ಯಾಯಾಮ ಮಾಡಿಸುವವರು,ವಾಸ್ತು ಹೇಳುವವರು ಬಹು ಸುಲಭವಾಗಿ ದೇವರುಗಳಾಗಿಬಿಡತ್ತಾರೆ. ಕೆಲವರಂತೂ ದೇವರೇ ನಾಚಿಕೊಳ್ಳುವಷ್ಟು ಆರಾಧನೆ ಪೂಜೆಗಳಿಗೆ ಒಲಿದು ಬಿಡುತ್ತಾರೆ.ಅಮಾಯಕರು, ಮುಗ್ದರು ಆಸರೆಯೇ ಇಲ್ಲದವರು ಸಂತೋಷದಿಂದ ಬದುಕಲಿಕ್ಕಾಗಿ ಇವರನ್ನ ನಂಬಿ ನಿತ್ಯವೂ ಏನೇನೋ ಕಳೆಕೊಳ್ಳುತ್ತಾರೆ.ಏನೇನೋ ಮಾಡುತ್ತಾರೆ.ಬಹುಶಃ ಓಡಾಡುವ ನರ ಮನಷ್ಯರುಗಳೇ ದೇವರುಗಳಾಗುತ್ತಿರುವ ಈ ಕಾಲದಲ್ಲಿ ದೇವರು ಇಳಿದು ಬಂದರೂ ಅವರನ್ನ ಏನಾದರೂ ಮಾಡಿ ಪೋಟೋದೊಳಗೇ ಇರಿಸಿಬಿಡುವಷ್ಟು ಚಾಲಾಕಿತನ ನಮ್ಮ ವ್ಯಾಪಾರಿ ದೇವರುಗಳದಾಗಿದೆ.ಇಂತಹ ಒಂದು ಕಥೆ ಹೀಗಿದೆ..

’ಭೀಮಯ್ಯನವರು ಬಹುವರ್ಷಗಳ ಹಿಂದೆ ದೇವಸ್ಥಾನದ ಮುಂದೆ ಹೌಸಿಂಗ್ ಬೋರ್ಡ ಕಾಲೊನಿಯಲ್ಲಿ ಮನೆಯೊಂದನ್ನ ಕೊಂಡರು. ಆ ಮನೆ ಏನೇನೋ ಪುಕಾರುಗಳಿಗೆ ಸುದ್ದಿಯಾಗಿತ್ತು. ಅದು ಐಗಳ ಮೂಲೆ ಮನೆ.ಬನ್ನಿ ಮರ ಬೇರೆ ಇದೆ.ಬಾಳೆ ಗಿಡಗಳು ಬೇರೆ ಇವೆ. ಅಲ್ಲಿದ್ದವರು ಏನೋ ಲಾಸ್ ಆಗಿ ಮನೆಯನ್ನೇ ಸುಲಭ ಬೆಲೆಗೆ ಮಾರಿ ಬಿಟ್ಟಿದ್ದರಂತೆ! ಅಷ್ಟೇನೂ ದೊಡ್ಡದಲ್ಲದ,ತೀರಾ ಚಿಕ್ಕದೂ ಅಲ್ಲದ ಆ ಮನೆ ಸುಲಭ ಬೆಲೆಗೇ ಸಿಕ್ಕಿದ್ದರಿಂದ ಮೇಷ್ಟ್ರಿಗಂತೂ ನೆಮ್ಮದಿ ತಂದಿತ್ತು.


ಇಂಜಿನಿಯರರಿಂಗ್ ಓದುತ್ತಿರುವ ಮಗ, ಪಿ.ಹೆಚ್.ಡಿ. ಮಾಡುತ್ತಿರುವ ಎರಡನೇ ಮಗ, ಬಿ,ಎಸ್.ಸಿ. ಮುಗಿಸಿ ಬಿ.ಎಡ್.ಗಾಗಿ ಕಾಯುತ್ತಿರುವ ಮಗಳು. ಇವರೆಲ್ಲರ ಖರ್ಚು,ವೆಚ್ಚ ಭರಿಸಿ ದಿನ ದೂಡುವುದೇ ಕಷ್ಟ ಎನ್ನುವಾಗ ಮನೆ ಕೊಳ್ಳುವುದೆಂದರೆ ಈ ಕಾಲದಲ್ಲಿ ಅದೊಂದು ದೊಡ್ಡ ಸಾದನೆಯೇ..!

ಮೊನ್ನೆ ಮೊನ್ನೆ ಹಾಗೆ ಕಟ್ಟಿಸಬೇಕು,ಹೀಗೆ ರೂಪಿಸಬೇಕು ಎಂದು ಬಡಿದಾಡುತಿದ್ದ ಹನುಮಂತಪ್ಪ ಹೃದಯಾಘಾತದಿಂದ ತೀರಿ ಹೋಗಿದ್ದ.ಪಕ್ಕದ ಮನೆಯ ಮೂರ್ತಿ ಅಲ್ಲೆಲ್ಲೋ ಸೈಟು ಕೊಂಡಿದ್ದನೇ ಹೊರತು ಮನೆ ಕಟ್ಟಿಸಿಕೊಳ್ಳಲಾಗಿರಲೇ ಇಲ್ಲ.ಮಧ್ಯಮವರ್ಗದವರಿಗೆ ದೊಡ್ಡೂರಲ್ಲಿ ಮನೆ ಕಟ್ಟಿಸಿಕೊಳ್ಳುವುದೆಂದರೆ ಭರತ ಚಕ್ರವರ್ತಿ ವೃಷಭಾಚಲದ ಮೇಲೆ ಹೆಸರು ಬರೆಸಿದಂತೆಯೇ..ಗರ್ವದ ಸಂಗತಿ.

ಆಧುನಿಕ ಟಿ.ವಿ.ಗಳ ಉಪದ್ವಾಪಗಳನ್ನ ,ಕುಂಡಲಿನಿ,ಜ್ಯೋತಿಷ್ಯಗಳನ್ನ ಅಷ್ಟಾಗಿ ನಂಬದೇ ಕೇವಲ ಮನುಷ್ಯತ್ವದಲ್ಲಿ ನಂಬಿಕೆ ಇಟ್ಟ ಬಸವಧರ್ಮಿ ಭೀಮಯ್ಯ " ಇಲ್ಲಿ ದೇವರು ನಿರ್ಮಿಸಿದ್ದು ಮನಷ್ಯರನ್ನಲ್ಲ ,ಮನುಷ್ಯರೇ ದೇವರುಗಳನ್ನ ಬಗೆ ಬಗೆಯಲ್ಲಿ ನಿರ್ಮಿಸುತಿದ್ದಾರೆ. ದೇವರು ಕೆಲವರಿಗೆ ಮಾರುಕಟ್ಟೆಯ ತಿಜೋರಿಯಾದರೆ, ಮತ್ತೆ ಕೆಲವರಿಗೆ ದೇವರು ಅಧಿಕಾರ ತಂದು ಕೊಡುವ ಪ್ರಧಾನ ಅಸ್ತ್ರ.ಕೆಲವರಿಗೆ ದೇವರು ನಿರಂತರವಾಗಿ ಲೈಮ್ ಲೈಟ್ ನೊಳಗಿಡುವ ತಂತ್ರ. ದೇವರಿಗೇ ಸೆಕ್ಯುರಿಟಿ,ದೇವರ ಕಾಣಲೆಂದೇ ಮುಂಗಡ ಬುಕಿಂಗ್ ಗಳನ್ನ ನಿರ್ಮಿಸಿದ ದೇವರುಗಳ ಈ ಹೊಸ ರಾಜ್ಯವನ್ನ ಅಷ್ಟಾಗಿ ಒಪ್ಪದ ಭೀಮಯ್ಯ ಇಂತಹ ಹೈಟೆಕ್ ಗುಡಿಗಳಿಂದ ದೂರವೇ ಉಳಿದಿದ್ದಾರೆ.ಅವರ ಹೆಂಡತಿ ವಿಶಾಲಾಕ್ಷಮ್ಮ ಅವರಿಗೆ ತದ್ವಿರುದ್ಧ.ನಿತ್ಯ ಗಂಟೆ ಗಟ್ಟಲೆ ಪೂಜಿಸದೇ ಆಕೆ ಎಂದಿಗೂ ನೀರೂ ಸೇವಿಸಳು. ವ್ರತಗಳೂ,ಆಚರಣೆಗಳೂ, ಎಂದರೆ ಆಕೆಗೆ ಪ್ರಾಣ. ಆಕೆಯ ಪುಣ್ಯದಿಂದಲೇ ಈಯಪ್ಪಾ ಖುಷಿಯಾಗಿರುವುದು ಎಂಬ ಹೇಳಿಕೆಗಳೂ ಭೀಮಯ್ಯನವರ ನಾಸ್ತಿಕತೆಯನ್ನೂ ಮರೆಮಾಚುವಷ್ಟಿವೆ.ವಿರುದ್ದ ಧೃವಗಳಂತಹ ಈ ದಾಂಪತ್ಯದಲ್ಲಿ ಆಚರಣೆಗೆ ಸಂಬಂಧಿಸಿದಂತೆ ಪ್ರತಿ ಹಂತದಲ್ಲೂ ಹಲವಾರೂ ಗುಡುಗು,ಸಿಡಿಲು,ಮಳೆಗಳಾದ ’ಮೇಲೆಯೇ ಹೊಸ ಹೊಸ ರಾಜೀ ಸೂತ್ರಗಳು ಜಾರಿಗೆ ಬರುತ್ತಿದ್ದವು.ಇಂತಹ ಒಂದು ಪ್ರಸಂಗವೇ ಮನೆಯ ಗೃಹ ಪ್ರವೇಶ.

ಅದೇನೂ ಬೇಡ ಅಂತಹ ಹಣವನ್ನ ಬೇಕಾದರೆ ಒಂದೆರಡು ವಿದ್ಯಾರ್ಥಿಗಳ ಫೀಜ್ ಕಟ್ಟೋಣ. ಇದು ಅನಗತ್ಯ ಎಂದು ಭೀಮಣ್ಣ ವಾದಿಸಿದರೆ.ಇಲ್ಲ ಸರಳವಾಗಿಯಾದರೂ ಮಾಡಬೇಕೆಂಬುದು ಹೆಂಡತಿಯ ಹಠ.ಕೊನೆಗೆ ಸರಳತೆಗಾದರೂ ಒಲಿದರಲ್ಲಾ ಎಂದು ಭೀಮಯ್ಯ ಸ್ನೇಹಿತರು ಬಂಧುಗಳು,ಮುಖ್ಯವಾಗಿ ತನ್ನ ವಿದ್ಯಾರ್ಥಿಗಳಿಗೆ ತಿಳಿಸಿದರು.ಪುರೋಹಿತರು " ಇವರನ್ನ ಬಲಗಾಲಿಟ್ಟು ಒಳಗೆ ಬನ್ನಿ" ಎಂದು ಕರೆದರೆ, ಇವರು " ಯಾಕೆ? ಎಡಗಾಲಿಗೆ ಬೇರೆ ರಕ್ತ ಹರಿಯುತ್ತದೆಯಾ? ಬಲ ಎಂಬುದೇ ಶುದ್ಧ ನಾನ್ ಸೆನ್ಸ್ ಎಂದು ತಗಲಿಕೊಂಡು ಬಿಡುತ್ತಾರೆಂದು ಮನೆಯ ಮಡದಿ ಇವರ ತಂಟೆಗೇ ಹೋಗಲಿಲ್ಲ. ಭೀಮಯ್ಯ ಹೆಂಡತಿಯ ಕ್ರಿಯಾದಿಗಳ ಕಡೆ ತಲೆ ನೀಡದೇ..ಬಂದ ಹಳೆಯ ಗೆಳೆಯರೊಂದಿಗೆ ಹರಟೆಯ ಆನಂದದಲ್ಲಿ ಮುಳುಗಿಬಿಟ್ಟರು.ಸರ ಸರನೇ ಕ್ರಿಯಾದಿಗಳನ್ನ ಮುಗಿಸಿದ ಪುರೋಹಿತರು ಫಲ ತಾಂಬೂಲ,ದಕ್ಷಿಣೆಗಳನ್ನ ಪಡೆದು ಹೊರಡುವ ಮುನ್ನ ಈಗಲಾದರೂ ನಿಮ್ಮ ಮನೆಯವರನ್ನ ಕರೆಯಿರಿ ಅವರಿಗೆ ಅಗತ್ಯವಾದುದನ್ನ ಹೇಳಲೇ ಬೇಕು. ಅಂತಹ ಮುಖ್ಯವಿಚಾರವೊಂದಿದೆ. ಎಂದು ಗಟ್ಟಿಯಾಗಿ ಕುಳಿತೇ ಬಿಟ್ಟರು.

"ಅಪ್ಪಾ.. ಪುರೋಹಿತರು ಕರೀತಿದಾರೆ.." ಅಂತ ಕಿರಿ




ಮಗ ಪ್ರಶಾಂತ ಹೇಳಿದಾಗ "ಯಾಕೋ ದಕ್ಷಿಣೆಗೆ ಅಮ್ಮನ ಬಳಿಯೇ ಕೊಟ್ಟಿದ್ದೇನಲ್ಲ! ಮತ್ತಾವ ತಿರುಪತಿಯನ್ನ ನಿಮ್ಮಮ್ಮ ಸೃಷ್ಟಿಸಿ ಬಿಟ್ಟಿದ್ದಾಳೋ ಕಂದಾ.." ಎಂದು ನಗಲು..

ದಕ್ಷಿಣೆ ವಿಚಾರವಲ್ಲವಂತೆ ಅಪ್ಪಾ.. ಪುರೋಹಿತರು ಏನೋ ಹೇಳಬೇಕಂತೆ.." ಎನ್ನಲು " ಮಾತಾ ಎಷ್ಟು ಬೇಕಾದರೂ ಹೇಳಲಿ ನಡೀ.." ಎಂದು ಹೊರಟರು. ಹೋಗುತ್ತಲೇ .." ಅಲ್ವೋ..ನನಗಾಗಲೀ..ನಿನಗಾಗಲೀ.. ಅವರ ಹತ್ರ ಏನೋ ವಿಚಾರ? ಎಂದು ಕಿಚಾಯಿಸುತ್ತಲೇ ಎದುರಾದರು. " ಬರ್ರಿ ಮಾಸ್ತರೇ.." ಎಂದು ಕುರ್ಚಿ ತೋರಿಸಿದರು. ಭೀಮಯ್ಯನವರು ನಗುತ್ತಾ ಕೈ ಮುಗಿದರು. ಪೂಜಾರರೇ ಎಲ್ಲಾ ಸಂತೋಷತಾನೇ ಎಂದು ಕೇಳಲು.

" ನೋಡ್ರಿ ಮೇಷ್ಟ್ರೇ ಈ ಮನೆಯ ವಾಸ್ತುವೇ.. ಸರಿ ಇಲ್ಲ!.ಈಶಾನ್ಯ ಶೌಚಾಲಯ,ಸ್ನಾನದ ಕೋಣೆ,ಆಗ್ನೇಯ ಮತ್ತೊಂದು ಶೌಚಾಲಯ,ಸಂಕಷ್ಟಗಳ ಸರಮಾಲೆ ಎದುರಿಸುತ್ತೀರಿ. ಇಲ್ಲಿನ ದೋಷಗಳು ಒಂದಲ್ಲ ಎರಡಲ್ಲ,ಪಶ್ಚಿಮ ವಾಯುವ್ಯಕ್ಕೆ ನೀರಿನ ಸಂಪು,ಪಶ್ಚಿಮಕ್ಕೇ ಅಡುಗೆ ಮನೆ,ಬಹುಶಃ ನಮ್ಮವರಾರೋ ಕಟ್ಟಿದ ಮನೆಯಲ್ಲ. ವಾಸ್ತು ತಿಳಿಯದ ಅದರ್ಮಿಯರು ಕಟ್ಟಿ ಬಿಟ್ಟಿದ್ದಾರೆ. ಇದು ಹೀಗೇ ಇದ್ದರೆ ವಾಸವಾಗಿರುವ ನಿಮ್ಮ ಮಕ್ಕಳಿಗೂ ಹಿನ್ನಡೆ. ಆರ್ಥಿಕ ಮುಗ್ಗಟ್ಟು,ಮದುವೆಯಾದರೂ ಮಗಳಿಗೆ ಮಂಗಲ ವಿಯೋಗವಾದೀತು.ಆರೋಗ್ಯದಲ್ಲಿ ಏರಿಳಿತಗಳಾಗಲೂ ಬಹುದು.ಸದಾ ಔಷಧೋಪಚಾರ,ಆಪರೇಷನ್ ಅಂತ ಸಾಲದ ಬಾಧೆಯಲ್ಲೇ ಇರ ಬೇಕಾದೀತು.ಈ ಮನೆಯಲ್ಲಿ ಸುಖ ಸಂತೋಷಕ್ಕಿಂತಲೂ ಅಶಾಂತಿಯೇ ಎದ್ದು ಕಾಣುತ್ತದೆ ವಿಶಾಲಾಕ್ಷಮ್ಮನವರ ಪುಣ್ಯದಿಂದ ಅಂತಹ ದೊಡ್ಡದೇನೂ ತಕ್ಷಣ ಘಟಿಸಿಲ್ಲ ದಯಮಾಡಿ ಬೇಗನೇ ಸರಿ ಪಡಿಸಿಕೊಳ್ಳುವುದು ಯೋಗ್ಯ" ಎಂದು ಉಸಿರು ಬಿಟ್ಟರು. ಪ್ರತಿಯಾಗಿ ಹೌದಾ? ಎಂದು ಸಣ್ಣಗೆ ನಕ್ಕರು ಭೀಮಯ್ಯ. ಆ ನಗೆಯ ಒಳಗಿನ ವ್ಯಂಗ್ಯ ಅರಿತ ಪುರೋಹಿತರು " ನೋಡಿ ಸ್ವಾಮಿ ಇಂದು ದೊಡ್ಡ ಬದಲಾವಣೆ ಮಾಡದಿದ್ದರೂ ಸರಳ ವಾಸ್ತು ಅಂತ ಬಂದಿವೆ.ಸರಿ ಮಾಡಿಸಿಕೊಳ್ಳಿ.ನೋಡಿ ಈಗೀಗ ಇಂಜಿನಿಯರ್ ಗಳೂ ವಾಸ್ತುವನ್ನಾಧಿರಿಸಿಯೇ ಮನೆಯ ಪ್ಲಾನ್ ಮಾಡಿಕೊಡುತ್ತಾರೆ.ಮೇಸ್ತ್ರಿಗಳು ವಾಸ್ತು ಪ್ರಕಾರವೇ ಕಟ್ಟುತ್ತಾರೆ ಬುದ್ದಿವಂತರಾದ ತಾವು ಹೀಗೇಕೆ ಕಡಿಮೆ ಬೆಲೆಯ ಆಸೆಗೆ ವಾಸ್ತುವಿಲ್ಲದ ಮನೆ ಖರೀದಿಸಿದಿರೋ ತಿಳಿಯದು .ಆಗಿದ್ದು ಆಗಿ ಹೋಗಿದೆ ವಾಸ್ತುವನ್ನಾದರೂ ಬದಲಿಸಿ ಸುಖವಾಗಿರಿ ಎಂದೇ ನನ್ನ ಹಂಬಲ ಸ್ವಾಮಿ" ಎಂದರು.ನಿಮಗೆ ಗೊತ್ತಿರಲಿ ನಮ್ಮ ಜ್ಯೋತಿಷ್ಯ ಶಾಸ್ತ್ರ ನಿಮ್ಮ ವಿಜ್ಞಾನಕ್ಕಿಂತಾ ಪ್ರಾಚೀನವಾದದ್ದು. "ಪುರೋಹಿತರೇ ನನಗೆ ತಿಳಿದ ಮಟ್ಟಿಗೆ ಇದು ತೀರಾ ಇತ್ತೀಚಿನ ವರ್ಷಗಳಲ್ಲಿ ನಮ್ಮ ಜನಗಳಿಗೆ ಹಿಡಿಯುತ್ತಿರುವ ಸಾಮೂಹಿಕ ಸನ್ನಿ ಎನ್ನಬಹುದೇನೋ..! ಈ ಬಗೆಯ ಹೊಸ ಫ್ಯಾಷನ್ ಗಳಿಗೆ ಪ್ರಬಲ ಕಾರಣವೇನೋ ನಮಗಂತೂ ಅರ್ಥ ಸ್ಪಷ್ಟವಾಗಿದೆ" ಎನ್ನಲು. "ಮೇಷ್ಟ್ರೇ, ಬಹಳಷ್ಟು ಜನ ವಾಸ್ತು ಹೇಳುವವರಿಗೆ ನಿಜವಾದ ವಾಸ್ತು ಶಾಸ್ತ್ರದ ವಾಸ್ತವಾಂಶಗಳ ಕಡೆಗೆ ಸೆಳೆವ ಶಕ್ತಿ ಇಲ್ಲ. ಅಂತಲೇ ನಿಮ್ಮಂತವರಿಗೆ ಹೀಗೆ ಅನ್ನಿಸೋದು. ವಾಸ್ತು ಪುರುಷನ ಪಂಚ ಭೂತಗಳಾದ ಭೂಮಿ, ಆಕಾಶ, ವಾಯು,ನೀರು ಮತ್ತು ಅಗ್ನಿ ಇವುಗಳ ಮೂಲದಿಂದಲೇ ಮಾನವ ಜಗತ್ ಸೃಷ್ಟಿ.ಇದರ ಪ್ರಭಾವದಿಂದಲೇ ಮನುಷ್ಯ ಜೀವನಕ್ಕೆ ಆಧಾರ, ಈ ವಾಸ್ತೋಷ್ಪತಿ ಅಂದರೆ ವಾಸ್ತು ಭವನಗಳ ಒಡೆಯ. ಈತ ಕಟ್ಟಡವನ್ನ ಕಾಯುವ ಕ್ಷೇತ್ರ ಪಾಲಕ.ಪುರಾಣಗಳಲ್ಲಿ ಹೇಳುವ ಹಾಗೆ ತ್ರೇತಾಯುಗ ವಿರಾಟ ಪುರುಷನ ಸಂಕಲ್ಪದಿಂದ ಜನಿಸಿದ.ಬ್ರಹ್ಮನೇ ವಾಸ್ತು ಪುರುಷ ಎಂದು ಹೆಸರಿಟ್ಟವ.’ ಭೂಲೋಕದಲ್ಲಿ ಯಾರು ನಿನ್ನನ್ನ ಪೂಜಿಸದೇ ಸಂತೃಪ್ತಿಗೊಳಿಸದೇ ಕಟ್ಟಡ ನಿರ್ಮಿಸುವರೋ ಅವರಿಗೆ ಅನೇಕ ವಿಧದಲ್ಲಿ ತೊಂದರೆ ಕೊಡು ಎಂದು ವರವನ್ನ ನೀಡಿದನಂತೆ." ಗೊತ್ತೇನ್ರೀ.. ಎಂದು ತಮ್ಮ ಶಕ್ತಿ ಪ್ರದರ್ಶಿಸಿದರು.

"ವಾಸ್ತವವಾಗಿ ಪುರಾಣವನ್ನೇ ನಂಬದ ಭೀಮಯ್ಯ " ಅಂದ್ರೆ ಇದು ಕೇವಲ ಹಿಂದೂ ಪುರಾಣದ ಕಥೆ ಮಾತ್ರ ಅನ್ನಿ!,ಆದ್ರೆ ಪುರೋಹಿತರೇ ನಮ್ಮ ದೇಶದಲ್ಲಿ ಕೇವಲ ಹಿಂದೂಗಳಷ್ಟೇ ವಾಸವಾಗಿಲ್ಲ ಅಲ್ಲವೇ? ಅನೇಕ ಮತಧರ್ಮದವರೂ ಬಾಳುತ್ತಿರುವುದೂ ತಮಗೆ ತಿಳಿದಿರುವ ವಿಚಾರವೇ ಅನ್ನಿ.ಬೇರೆ ಧರ್ಮಿಯರಿಗೆ ಅನ್ವಯಿಸದ ಈ ವಾಸ್ತು ವಿಚಾರ ಹಿಂದೂಗಳಿಗೇ ಯಾಕೆ? ತಗಲಿಕೊಂಡು ಕಾಡುತ್ತದೆ!.ಅಂದ ಹಾಗೇ ಜ್ಞಾನಿಗಳಾದ ತಮ್ಮಲ್ಲಿ ನನ್ನದೊಂದು ಭಿನ್ನಹ,ನೀವು ನಮ್ಮ ಭಾರತದ ನಕಾಶೆ ನೋಡಿದರೆ ಏನನಿಸುತ್ತೆ?" ಎಂಬ ಪ್ರಶ್ನೆ ಒಡ್ಡಿದರು.

ತಮ್ಮ ವಿದ್ವತ್ ಪ್ರದರ್ಶನಕ್ಕೆ ಮತ್ತೊಂದು ಅವಕಾಶ ದೊರೆಯಿತು ಎಂದರಿತ ಪುರೋಹಿತರು ಅತ್ಯಂತ ಖುಷಿಯಿಂದಲೇ ಹೇಳತೊಡಗಿದರು." ವಾಸ್ತು ಶಾಸ್ತ್ರದ ಪ್ರಕಾರ ಭಾರತ ದೇಶದ ಉದ್ದ ಅಗಲದ ಕ್ಷೇತ್ರದಲ್ಲಿ ಉತ್ತರ ದಕ್ಷಿಣವೂ, ಪೂರ್ವ ಪಶ್ಚಿಮಗಳ ಅಳತೆಗೆ ಎರಡರಷ್ಟಿದೆ. ಉತ್ತರ ಎತ್ತರವಾಗಿದ್ದು ದಕ್ಷಿಣದಲ್ಲಿ ನೀರಿದೆ.ಹಾಗಾಗಿ ಭಾರತದ ವಾಸ್ತು ಸರಿ ಇಲ್ಲ. ಆದ್ದರಿಂದಲೇ ಇಲ್ಲಿ ಭ್ರಷ್ಟಾಚಾರ,ದೌರ್ಜನ್ಯ,ದಬ್ಬಾಳಿಕೆ ಹೆಚ್ಚಿವೆ. ಜನ ನಾಯಕರಿಗೆ ಕಂಟಕ ಬಂದು ಕಾಡುತ್ತವೆ. ಇಲ್ಲಿ ಸ್ತ್ರೀಯರಿಗೂ ಸುಖ ಕಡಿಮೆ.ವಿಧವೆಯರ ಸಂಖ್ಯೆಯೂ ಹೆಚ್ಚುತ್ತಿದೆ?ಸ್ವತಂತ್ರ.."

ಸಾಕು..ಸಾಕು ಪುರೋಹಿತರೇ ಮೆಚ್ಚಿದೆ ತಮ್ಮ ಪಾಂಡಿತ್ಯಕ್ಕೆ.ನೋಡಿ ನೀವೇ ಹೀಗೆ ಹೇಳುತ್ತೀರಿ ಹಾಗಂದಮೇಲೆ ಮೊದಲು ಈ ದೇಶದ ವಾಸ್ತು ಸರಿ ಮಾಡಬೇಕಲ್ಲವೇ? ಅದು ಬಿಟ್ಟು ನಮ್ಮಂತಹ ಬಡಪಾಯಿಗಳನ್ನ ನಿಮ್ಮ ವಾಸ ಸ್ಥಳ ಸರಿ ಮಾಡಿಸಿ ಎಂದು ಯಾಕೆ ಹೇಳುತ್ತೀರಿ?.ಭಾರತದ ವಾಸ್ತು ಸರಿಯಿರದಿದ್ದರೂ ನೀವೂ ನಾವಂತೂ ಚನ್ನಾಗೇ ಇದ್ದೇವೆ.ಸುಖವಾಗಿದ್ದೇವೆ. ಅಂದ ಮೇಲೆ ವಾಸ್ತು ಭೂತ ಅನಪೇಕ್ಷಿತ ವಿಚಾರ ಅಲ್ಲವೇ?..ಇಲ್ಲಿನ ಬಡವರನ್ನ, ಅಲೆಮಾರಿಗಳನ್ನ,ನಿರ್ಗತಿಕರನ್ನ ನೋಡಿ ಇವರು ಜಾಗದ ವಾಸ್ತು ನೋಡಿ ಬದುಕುತಿದ್ದಾರೆಯೇ? ಹಿಂದಿನ ಮನೆಯ ಮುಸ್ಲಿಂ,ಆಕಡೆ ಮನೆಯ ಕ್ರಿಶ್ಚಿಯನ್ ಗಳಿಗೆ ಇಲ್ಲದ ನಮಗೇಕೆ ಈ ಭಯ.? " ಎನ್ನಲು ಗಲಿಬಿಲಿಗೊಂಡ ಪುರೋಹಿತರು " ಏನೋ ಸ್ವಾಮಿ ನಮಗೆ ತಿಳಿದಿದ್ದು ಹೇಳಿದ್ದೇವೆ ಇದರ ಮೇಲೆ ತಮ್ಮಿಷ್ಟ" ಎಂದು ವಿಶಾಲಾಕ್ಷಮ್ಮನ ಕಡೆ ತಿರುಗಿ ಬರುತ್ತೇವಮ್ಮಾ..ಎಂದು ನಿಲ್ಲದೇ ಹೊರಟೇ ಬಿಟ್ಟರು. " ಅಲ್ರಿ ಪಾಪ ಪುರೋಹಿತರು ನಮ್ಮ ಒಳ್ಳೇದಕ್ಕೆ ಹೇಳಿದರೂ ನೀವು ಅವ್ರನ್ನೇ ಇಲ್ಲದ ಪ್ರಶ್ನೆ ಕೇಳಿ ಕಳಿಸಿ ಬಿಟ್ರಲ್ಲ." ಎಂದು ಕ್ಯಾತೆ ತಗೆಯಲು. ಮಗ ಪ್ರಶಾಂತ " ಅಪ್ಪ ಹೇಳಿದ್ದರಲ್ಲಿ ತಪ್ಪೇನಿದೆಯಮ್ಮಾ? ಪುರೋಹಿತರು ಹೇಳಿದ್ದು ಪರಾಣದ ಕಥೆ ಎನ್ನುವುದು ಗೊತ್ತಾಯಿತಲ್ಲ.ಮಗಳು ಸುಕನ್ಯಾ ಕೂಡಾ ಮುಂದೆ ಬಂದು " ಹೌದಮ್ಮಾ ಮೊನ್ನೆ ನಮ್ಮ ಕ್ಲಾಸ್ ಮೇಟ್ ಸೌಮ್ಯ ಮನೆ ವಾಸ್ತು ಬಗ್ಗೆ ಕೂಡಾ ಹೀಗೇ ಪುರೋಹಿತರು ಹೇಳಿದ್ದರಂತೆ.ಚಿಕ್ಕ ಕಾಂಪೋಂಡ್ ಕಟ್ಟಿಕೊಳ್ಳ ಬೇಕಿಂದ್ದ ಅವರು ಪುರೋಹಿತರು ಹೇಳಿದರಂತ ಮನೆ ಮುಂದಿನ ಹೆಚ್ಚುವರಿ ಜಾಗವನ್ನ ಬಳಸಿಕೊಂಡು ಕಾಂಪೌಂಡ್ ಕಟ್ಟಿದರಂತೆ.ಪುರಸಭೆಯವರು ರಸ್ತೆ ಅಪಘಾತಗಳನ್ನ ತಡೆಯಲು ಅಕ್ರಮ ಜಾಗಗಳನ್ನ ಕಡೆವುತ್ತಾ ಬರಲು ಪಾಪ ಅವರ ಕಾಂಪೋಂಡ್ ಕೂಡಾ ಕೆಡವಿ ಬಿಟ್ಟರು. ಅತ್ತ ದುಡ್ಡೂ ಉಳಿಯಲಿಲ್ಲ.ಇತ್ತ ಕಾಂಪೋಂಡೂ ಉಳಿಯಲಿಲ್ಲ.ಹೋಗಲಿ ದೇವರ ಪೂಜೆಗೆ ಹೂ ಬೆಳಸಬೇಕೆಂಬ ಅವರಮ್ಮನ ಆಸೆಯೂ ನೆರವೇರಲಿಲ್ಲ.ಇದರಿಂದ ಯಾರಿಗೆ ಲಾಭವಾಯ್ತು ಹೇಳು." ಅಂದಳು.ವಾಸ್ತು ಅಂತ ರಸ್ತೆ ಅಕ್ರಮಿಸುವ ಬದಲು ವಿವೇಕದಿಂದ ಚಿಕ್ಕದೇ ಕಾಂಪೋಂಡ್ ನಿರ್ಮಿಸಿಕೊಂಡಿದ್ದರೆ ಹೀಗೆ ಆಗುವುದೂ ತಪ್ಪುತ್ತಿತ್ತಲ್ಲವೇ? ನೋಡೇ ನನ್ನ ಮಕ್ಕಳನ್ನ ಸದ್ಯ ಬಿಡು ವಾಸ್ತು ಭೂತ ನಮ್ಮನ್ನ ಕಾಡದು.ನಮ್ಮ ಹೆಚ್ಚುವರಿ ದುಡ್ಡೂ ಹಾಳಾಗದು ಅಂತ ನಕ್ಕರು.ಬೇರೆ ದಾರಿ ಕಾಣದೆ ವಿಶಾಲಾಕ್ಷಮ್ಮ ಕೂಡಾ ಗಂಡ ಮಕ್ಕಳೊಂದಿಗೆ ನಗುತ್ತಾ ಗೃಹ ಪ್ರವೇಶಿಸಿದರು.

## ಕಾರಣಿಕ ನುಡಿವ ದೈವಗಳೇ!



ಕಣಿ ಹೇಳುವೆ ನಾ
ನಿಮಗೆ
ಹೊಣೆಯರಿತು
ಮಣಿದು ನಿಮ್ಮ
ಚರಣಗಳಿಗೆ
ಮಣಿಯದೇ ಮನ್ನಿಸಿ
ಎನ್ನ ಗರ್ವವ ಪ್ರಭುವೇ.

ಸಪ್ತಗಿರಿವಾಸನೇ
ಕೈಲಾಸಗಿರಿ ಅಧಿಪತಿಯೇ
ಮೆಕ್ಕಾದಲ್ಲಿ ನಲೆನಿಂತ
ದಳಪತಿಯೇ
ಗೋಲ್ಗಥದಲಿ
ಶಿಲುಬೆಗೇರಿದ
ಸೇನಾಧಿಪತಿಯೇ
ಎಚ್ಚರ ನಿಮಗಿದೋ
ಎಚ್ಚರ!

ತಿಲಕಧಾರಿಗಳು
ವಿಭೂತಿಧಾರಿಗಳು
ನಾಮಾಧಾರಿಗಳು
ಬಿಲ್ಲು(ಬಟಟ)ಧಾರಿಗಳು
ಹಗರಣಗಳ
ರೂವಾರಿಗಳು
ಸಾಲದ್ದಕ್ಕೆ
ಖಾವಿಧಾರಿಗಳು
ಖಾಧಿಧಾರಿಗಳು
ಬರುತ್ತಿದ್ದಾರೆ
ನಿಮ್ಮಡಿಗೆ
ಮಡಿಯಲ್ಲಿ
ಅಡಿಗಡಿಗು ನಮಿಸುತ್ತಾರೆ
ಹರಕೆಯ ಕಪ್ಪ ಕಾಣಿಕೆ
ಒಪ್ಪಿಸಲು.
ಎಚ್ಚರ ದೈವಗಳೆ ಎಚ್ಚರ
ನಿಮ್ಮ ಗರ್ಭಗುಡಿಗೂ
ಸಿಡಿಮದ್ದು ಇಟ್ಟಾರು
ಎಡೆಯಲ್ಲಿ ಇಕ್ಕುಮದ್ದು
ಕೊಟ್ಟಾರು
ಎಚ್ಚರ ದೈವಗಳೆ ಎಚ್ಚರ

ಲೇಪಿಸುವ ಗಂಧಕ್ಕೆ
ಹಚ್ಚುವ ಕುಂಕುಮಕ್ಕೆ
ನುಸಿಪುಡಿಯ ಬೆರೆಸ್ಯಾರು
ಅವರು ಕಟ್ಟುವ
ತಳಿರು ತೋರಣಗಳೇ
ನಿಮ್ಮ ಕೊರಳಿಗೆ
ಉರುಳಾದವೂ ಜೋಕೆ

● ಗುರುದೇವ ಎಸ್.ಎಂ.
ದಾವಣಗೆರೆ

# ಶರಿಯಾದ ಆಯ್ದ ವ್ಯಾಖ್ಯಾನ: ದಿ ನ್ಯೂ ವರ್ಸಸ್ ದಿ ಓಲ್ಡ್ ತಾಲಿಬಾನ್

ಶರಿಯಾ ವಿಭಿನ್ನ ವ್ಯಾಖ್ಯಾನಗಳಿಗೆ ಸಾಕಷ್ಟು ನಮ್ಯತೆಯನ್ನು ಒದಗಿಸುತ್ತದೆ. ಈ ಹಿಂದೆ, ತಾಲಿಬಾನ್ ಅಫ್ಘಾನಿಸ್ತಾನದ ಮೇಲೆ ಸಂಪೂರ್ಣ ಹಿಡಿತವನ್ನು ಹೊಂದಿದ್ದಾಗ, ಅವರು ಶರಿಯಾ ಕಾನೂನನ್ನು ಜಾರಿಗೊಳಿಸುವ ವೇಷದಲ್ಲಿ, ಮಹಿಳೆಯರನ್ನು ಮನೆಯಲ್ಲಿಯೇ ಇರುವಂತೆ ಒತ್ತಾಯಿಸಿದರು ಮತ್ತು ಅವರು ಮನೆಯಿಂದ ಹೊರಗೆ ಹೋಗುತ್ತಿದ್ದರೆ ಅವರನ್ನು ಪುರುಷನ ಬೆಂಗಾವಲು ಮಾಡಿ, ಆ ಮೂಲಕ ಮುಕ್ತ ಸಂಚಾರವನ್ನು ನಿರ್ಮೂಲನೆ ಮಾಡಿದರು ಮತ್ತು ಮಹಿಳಾ ಶಿಕ್ಷಣಕ್ಕೆ ಅಪಾಯವನ್ನುಂಟುಮಾಡಿದರು. ಮುಸ್ಲಿಂ ನ್ಯಾಯಶಾಸ್ತ್ರಜ್ಞರು ಶರಿಯಾ ಕಾನೂನಿನಿಂದ ಐದು ಮೂಲಭೂತ ಮಾನವ ಹಕ್ಕುಗಳನ್ನು-ಜೀವನ, ಆಸ್ತಿ, ಧಾರ್ಮಿಕ ಸ್ವಾತಂತ್ರ್ಯ, ಚಿಂತನೆಯ ಸ್ವಾತಂತ್ರ್ಯ (ಅಂದರೆ, ವಾಕ್) ಮತ್ತು ಕುಟುಂಬವನ್ನು ಬೆಳೆಸುವ ಸಾಮರ್ಥ್ಯವನ್ನು ಖಾತರಿಪಡಿಸಬೇಕು ಎಂದು ವಿವರಿಸಿದರು. ಹೊಸ ತಾಲಿಬಾನ್ ವಿಶೇಷವಾಗಿ ಮಹಿಳೆಯರಿಗೆ ಜೀವನದ ಹಕ್ಕು ಮತ್ತು ಆಲೋಚನಾ ಸ್ವಾತಂತ್ರ್ಯವನ್ನು ಖಚಿತಪಡಿಸುತ್ತದೆಯೇ ಎಂಬುದನ್ನು ಮುಂಬರುವ ತಿಂಗಳುಗಳಲ್ಲಿ ನೋಡಬೇಕಾಗಿದೆ.


'ಖ್ರಿಜ ಅಂಟಿತಜಢಿಚಿಣುಹಿಟ' ಎಂಬ ಲೇಖನವೊಂದರಲ್ಲಿ, ಇಸ್ಲಾಮಿಕ್ ಸ್ಟಡೀಸ್ ಪ್ರೊಫೆಸರ್ ಅಸ್ಮಾ ಅಸ್ಪರುದ್ದೀನ್ ಅವರು ಷರಿಯಾ ಕಾನೂನು "ಪುರುಷರು ಮತ್ತು ಮಹಿಳೆಯರ ಸಂಪೂರ್ಣ ಸಮಾನತೆಯನ್ನು ಮನುಷ್ಯರಂತೆ ಗುರುತಿಸುತ್ತದೆ ಮತ್ತು ಅವರು ಸಾಮಾನ್ಯ ಒಳಿತನ್ನು ಉತ್ತೇಜಿಸುವಲ್ಲಿ ಪರಸ್ಪರ ಪಾಲುದಾರರು ಎಂದು ಘೋಷಿಸುತ್ತದೆ" ಎಂದು ಒತ್ತಿ ಹೇಳಿದ್ದಾರೆ. ಶರಿಯಾವು ಆಧುನಿಕ ಪೂರ್ವದಲ್ಲಿ ತಿಳಿದಿಲ್ಲದ ಮಹಿಳೆಯರಿಗೆ ಸವಲತ್ತುಗಳನ್ನು ನೀಡುತ್ತದೆ. ಆಸ್ತಿಯ ಉತ್ತರಾಧಿಕಾರ, ವಿಚ್ಛೇದನ, ಗರ್ಭಪಾತ ಮತ್ತು ಶಿಕ್ಷಣವು ಈ ಹಕ್ಕುಗಳನ್ನು ಒಳಗೊಂಡಿರುವ ಅನೇಕ ವಿಷಯಗಳಲ್ಲಿ ಸೇರಿವೆ. ತಾಲಿಬಾನ್ ಆಳ್ವಿಕೆಯಲ್ಲಿ ಅಫ್ಘಾನ್ ಮಹಿಳೆಯರ ಅನುಭವವು ಅತ್ಯಂತ ಕೆಟ್ಟದಾಗಿದೆ ಎಂಬುದು ಸ್ಪಷ್ಟವಾಗಿದೆ, ಇದು ಮಹಿಳೆಯರು ಧರಿಸುವುದನ್ನು ಹೆಚ್ಚು ನಿಯಂತ್ರಿಸುವ ನೀತಿಗಳನ್ನು ಹೊಂದಿತ್ತು, ಇದು ಮೂಲಭೂತವಾಗಿ ಅವರ ಶಿಕ್ಷಣ, ಕ್ರೀಡೆ ಮತ್ತು ಕೆಲಸದ ಅವಕಾಶಗಳನ್ನು ಅಪರಾಧೀಕರಿಸಿತು.



ಪ್ರಮುಖ ಕಾನೂನು ಅಭಿಪ್ರಾಯದಲ್ಲಿ, ಮುಸ್ಲಿಂ ವಿದ್ವಾಂಸರಾದ ಅಬು ಇಶಾಕ್ ಅಲ್-ಶತಿಬಿ ಅವರು ಷರಿಯಾ ಕಾನೂನಿನ ಪ್ರಾಥಮಿಕ ಗುರಿಯು ಲಿಂಗವನ್ನು ಲೆಕ್ಕಿಸದೆ ಸಮಾನತೆಯನ್ನು ಉತ್ತೇಜಿಸುವುದಾಗಿದೆ ಎಂದು ಹೇಳಿದರು. ಆದ್ದರಿಂದ ಒಟ್ಟಾರೆ ಅಭಿವೃದ್ಧಿ ಅಗತ್ಯಗಳನ್ನು ಪರಿಗಣಿಸಿ ಕಾನೂನು ವಿಮೋಚನೆ ಯಾಗಿರಬೇಕು. ತಾಲಿಬಾನ್ ತನ್ನ ಹಿಂದಿನ ನಿಯಮಕ್ಕಿಂತ ಭಿನ್ನವಾಗಿ ತಮ್ಮ ಆಡಳಿತದಲ್ಲಿ ಶಿಕ್ಷಣ, ಉದ್ಯೋಗ ಮತ್ತು ಸಾಮಾಜಿಕ ಸಮಾನತೆಯ ಮೇಲೆ ಕೇಂದ್ರೀಕರಿಸಬೇಕು. ತಾಲಿಬಾನ್ 1990 ರ ದಶಕದಲ್ಲಿ ಪ್ಯೂರಿಟಾನಿಕಲ್ ಸಲಾಫಿಸಂ ಅನ್ನು ಅಳವಡಿಸಿಕೊಂಡಂತೆ ತೋರುತ್ತಿದೆ, ಅಲ್-ಖೈದಾಕ್ಕೆ ಅದರ ಬೆಂಬಲ ಮತ್ತು ಅದರ ನೈತಿಕ ಸಂಹಿತೆಗಳನ್ನು ಉಲ್ಲಂಘಿಸುವವರಿಗೆ ಕಠಿಣ ಶಿಕ್ಷೆಯನ್ನು ವಿಧಿಸಲಾಯಿತು. 2001 ರಲ್ಲಿ ಅವರ ಪತನ, 2019 ರಲ್ಲಿ ಇಸ್ಲಾಮಿಕ್ ಸ್ಟೇಟ್ ನಾಶ ಮತ್ತು ಒಸಾಮಾ ಬಿನ್ ಲಾಡೆನ್ ಸಾವಿನ ನಂತರ ಅಲ್-ಖೈದಾ ಹಿಮ್ಮೆಟ್ಟುವಿಕೆ ಇವೆಲ್ಲವೂ ಅವರು ಪಾಠಗಳನ್ನು ಕಲಿತಿರಬೇಕು ಎಂದು ಸೂಚಿಸುತ್ತದೆ. ತಾಲಿಬಾನ್ ಈಗ ಮಹಿಳೆಯರನ್ನು ಹೆಚ್ಚು ಒಪ್ಪಿಕೊಳ್ಳುವುದಾಗಿ ಮತ್ತು ಅವರನ್ನು ಹೆಚ್ಚು ಒಳಗೊಳ್ಳುವುದಾಗಿ ಪ್ರತಿಪಾದಿಸುತ್ತದೆ. ಆದಾಗ್ಯೂ ನಿರ್ಬಂಧಿತ ನಡವಳಿಕೆಯನ್ನು ಮಹಿಳೆಯರಿಗೆ (ಮತ್ತು ಪುರುಷರಿಗೆ) ಸಮಾನವಾಗಿ ವಿಧಿಸಲಾಗುವುದು ಮತ್ತು ಇರಾನ್‌ನಂತೆಯೇ ಅವರ ಸಂಪೂರ್ಣ ದೇಹವನ್ನು ಮುಚ್ಚಲು ಒತ್ತಾಯಿಸಲಾಗುತ್ತದೆ ಎಂದು ಹೇಳುವುದು ತಪ್ಪಾಗುವುದಿಲ್ಲ.

ಆದ್ದರಿಂದ ಹೊಸ ತಾಲಿಬಾನ್ ಸರ್ಕಾರವು ತನ್ನ ಹಿಂದಿನ ನಿಯಮಕ್ಕಿಂತ ಎಷ್ಟು ಭಿನ್ನವಾಗಿದೆ ಎಂಬುದನ್ನು ಸ್ಪಷ್ಟಪಡಿಸುವುದು ಕಡ್ಡಾಯವಾಗಿದೆ. ಪ್ರತಿಯೊಂದು ಸಂದರ್ಶನದಲ್ಲಿ ತಾಲಿಬಾನ್ ವಕ್ತಾರರು ತಮ್ಮ ಆಡಳಿತಕ್ಕೆ ಶರಿಯಾ ಕಾನೂನನ್ನು ಮಾರ್ಗದರ್ಶಿ ಕಮಾನು ಎಂದು ಕರೆದಿದ್ದಾರೆ, ಆದರೆ ಪ್ರಸ್ತುತ ಅಂತರರಾಷ್ಟ್ರೀಯ ವ್ಯವಸ್ಥೆಗೆ ಸೂಕ್ತವಾದಂತೆ ಮಾಡಲು ಅವರು ಯಾವ ರೀತಿಯಲ್ಲಿ ಇಸ್ಲಾಮಿಕ್ ಕಾನೂನನ್ನು ಅರ್ಥೈಸುತ್ತಿದ್ದಾರೆ ಎಂಬುದು ಇನ್ನೂ ಸ್ಪಷ್ಟವಾಗಬೇಕಿದೆ. ಆಯ್ದ ವ್ಯಾಖ್ಯಾನವಾದ ಮತ್ತು ಒಂದು ಚಿಂತನೆಯ ಶಾಲೆಗೆ ಉತ್ಕೃಷ್ಟವಾದ ಅನುಸರಣೆಯು ಸ್ಥಳೀಯ ಜನಸಂಖ್ಯೆಯ ನಡುವೆ ಅಪಶ್ರುತಿ ಮತ್ತು ಅಪನಂಬಿಕೆಯನ್ನು ಆಹ್ವಾನಿಸುತ್ತದೆ. ಆದ್ದರಿಂದ ತಾಲಿಬಾನ್ ಉಲ್ಲೇಖಿಸುತ್ತಿರುವ "ಒಳಗೊಳ್ಳುವಿಕೆ" ಎಂದರೆ ರಾಷ್ಟ್ರೀಯ ಪ್ರಗತಿಯ ಯೋಜನೆಗಳಲ್ಲಿ ಮಹಿಳೆಯರೂ ಸೇರಿದಂತೆ ಪ್ರತಿಯೊಂದು ಸಾಮಾಜಿಕ ಮತ್ತು ಧಾರ್ಮಿಕ ಗುಂಪನ್ನು ಸರಿಹೊಂದಿಸುವುದು. ತಾಲಿಬಾನ್ ಕಾನೂನು ಜಾರಿಯಲ್ಲಿ ಕಾನೂನು ಬಹುತ್ವವನ್ನು ಅಭ್ಯಾಸ ಮಾಡಬೇಕು ಮತ್ತು ಹೊಸ ಕಾನೂನು ವ್ಯಾಖ್ಯಾನಗಳಿಗೆ ವ್ಯಾಪ್ತಿಯೊಂದಿಗೆ ರೋಮಾಂಚಕ ಮತ್ತು ಕ್ರಿಯಾತ್ಮಕ ವ್ಯವಸ್ಥೆಯನ್ನು ರಚಿಸಬೇಕು. ಮಾನವ ಹಕ್ಕುಗಳು, ವಿಶೇಷವಾಗಿ ಮಹಿಳೆಯರು ಮತ್ತು ಹುಡುಗಿಯರು, ಶಿಕ್ಷಣ, ವಾಕ್ ಸ್ವಾತಂತ್ರ್ಯ, ಮಾಧ್ಯಮ ಮತ್ತು ಮಾನವ ಹಕ್ಕುಗಳ ಉಲ್ಲಂಘನೆ ಇತ್ಯಾದಿಗಳನ್ನು ಚರ್ಚಿಸುವ ಅಗತ್ಯದಿಂದ ಚರ್ಚೆಯು ಮಾರ್ಗದರ್ಶನ ಮಾಡುವುದು ಅತ್ಯಗತ್ಯ.

ಈ ಬಾರಿ ತಾಲಿಬಾನ್ ಮಹಿಳೆಯರಿಗೆ ಹಕ್ಕುಗಳು, ಹೆಣ್ಣುಮಕ್ಕಳ ಶಿಕ್ಷಣ ಮತ್ತು ಮಾನವ ಹಕ್ಕುಗಳ ಗೌರವಕ್ಕಾಗಿ ಬದಲಾವಣೆ ಮತ್ತು ವ್ಯಾಪ್ತಿಯನ್ನು ಸೂಚಿಸಿದೆ. ಹೆಣ್ಣುಮಕ್ಕಳು ಮಾತ್ರ ಶಾಲೆಗಳಿಗೆ ಹಾಜರಾಗಲು ಸಾಧ್ಯವಾಗುತ್ತದೆ ಎಂದು ಅದು ಹೇಳಿದೆ, ಇದು ಸಂಪೂರ್ಣವಾಗಿ ಮಹಿಳಾ ಬೋಧಕರು ಮತ್ತು ನಿರ್ವಾಹಕರಿಂದ ಸಿಬ್ಬಂದಿಯನ್ನು ಹೊಂದಿರುತ್ತದೆ. ಹೆಚ್ಚುವರಿಯಾಗಿ, ಮಹಿಳೆಯರಿಗೆ ಸೀಮಿತ ಸಂಖ್ಯೆಯ ಉದ್ಯೋಗಗಳಲ್ಲಿ ಕೆಲಸ ಮಾಡಲು ಅನುಮತಿಸಲಾಗುವುದು, ಅಲ್ಲಿ ಲಿಂಗ ಮಿಶ್ರಣವು ಕಡಿಮೆ ಅಥವಾ ಇಲ್ಲ. ಅಫ್ಘಾನ್ ಮಹಿಳೆಯರ ಜೀವನವು ತಾಲಿಬಾನ್‌ನ ಆರಂಭಿಕ ಆಳ್ವಿಕೆಯಲ್ಲಿದ್ದಕ್ಕಿಂತ ಸ್ವಲ್ಪ ಉತ್ತಮವಾಗಿರುತ್ತದೆ. ಇನ್ನೂ, ಇದು ಉದಾರವಾದಿ ಪ್ರಜಾಪ್ರಭುತ್ವಗಳಲ್ಲಿ ಉತ್ತಮವಾಗುವುದಿಲ್ಲ. ತಾಲಿಬಾನ್‌ಗೆ ಒಳಗೊಳ್ಳುವಿಕೆ ಮತ್ತು ಮಾನವ ಹಕ್ಕುಗಳ ಗೌರವ ಎಂದರೆ ಏನು ಎಂಬುದನ್ನು ಸಮಯ ಮಾತ್ರ ಹೇಳುತ್ತದೆ ಮತ್ತು ಅದು ಭವಿಷ್ಯದಲ್ಲಿ ಅದರ ರಾಜಕೀಯ ಪ್ರಸ್ತುತತೆಯನ್ನು ನಿರ್ಧರಿಸುತ್ತದೆ.



# ಉತ್ತರಕುಮಾರರ ಪೌರುಷ..

● ಕೆ.ವಿ.ಪರಮೇಶ್

ಕೋಟ್ಯಂತರ ಕ್ರಿಕೆಟ್ ಪ್ರೇಮಿಗಳ ಮನದಾಸೆಗೆ ಟೀಂ ಇಂಡಿಯಾ ಮತ್ತೊಮ್ಮೆ ಎಳ್ಳುನೀರು ಬಿಟ್ಟಿದೆ. ಕ್ರಿಕೆಟ್ ಅನಿಶ್ಚಿತತೆಯ ಆಟ ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ ಗೆಲ್ಲಲು ಆಡಬೇಕೆಂಬ ಛಲವೇ ಇಲ್ಲದಂತೆ ಆಡಿದರೆ ಕಳಂಕಿತ ಆಟಕ್ಕಿದು ಕುಮ್ಮಕ್ಕೇ ಎನ್ನುವ ಸಂಶಯ ಬಂದರೆ ಖಂಡಿತಾ ಅತಿಶಯೋಕ್ತಿಯಲ್ಲ.

ಹೌದು ಪಿಚ್‌ಗೆ ವಾತಾವರಣಕ್ಕೆ ಹೊಂದಿಕೊಳ್ಳಲಿ ಎಂದು ಒಂದೂವರೆ ತಿಂಗಳ ಮುನ್ನವೇ ನಮ್ಮ ಆಟಗಾರರನ್ನು ದುಬೈಗೆ ಕಳುಹಿಸಿಕೊಡಲಾಗಿತ್ತು. ಅದು ಐಪಿಎಲ್ ಎಂಬ ಹಣದ ಥೈಲಿಯ ಗೇಮ್‌ಗೆ ಕಳುಹಿಸಿದ್ದರೂ ಅದೊಂದು ರೀತಿಯಲ್ಲಿ ಚುಟುಕು ವಿಶ್ವಕಪ್‌ಗೆ ಪೂರ್ವತಯಾರಿ ಎಂದೇ ಬಿಂಬಿಸಲಾಗಿತ್ತು. ವಾಸ್ತವ ಬೇರೆಯದೇ ಆಗಿರುವುದು ಮಾತ್ರ ವಿಪರ್ಯಾಸ. ವಿರಾಟ್‌ಕೊಹ್ಲಿ ಅಗ್ರೆಸಿವ್ ನಾಯಕ ಎನ್ನುವುದರಲ್ಲಿ ಎರಡು ಮಾತಿಲ್ಲ. ಅದರೆ ಎಲ್ಲ ಸಂದರ್ಭಗಳಲ್ಲೂ ಆಟದ ಪೌರುಷ ಅಸಾಧ್ಯ ಎನ್ನುವ ನಿಜಸ್ಥಿತಿ ಒಪ್ಪಲೇಬೇಕು. ಒಂದು ಕಾಲವಿತ್ತು ಸಚಿನ್ ತೆಂಡೂಲ್ಕರ್ ಔಟಾದರೆ ಇಡೀ ತಂಡವೇ ನೂರರೊಳಗೆ ಪೆವಿಲಿಯನ್ ಸೇರುತಿತ್ತು. ಆದರೀಗ ಪರಿಸ್ಥಿತಿ ಬದಲಾಗಿದೆ. ಯುವ ಕ್ರಿಕೆಟಿಗರು ಒಬ್ಬರೇ ನಿಂತು ತಂಡ ಗೆಲ್ಲಿಸುವ ಛಾತಿ ಪಡೆದಿದ್ದಾರೆ. ಹಾಗಿದ್ದೂ ಭಾರತ ಎಡವಿದ್ದೇಕೆ ಎಂಬ ಬಗ್ಗೆ ಪರಾಮರ್ಶೆ ನಡೆಯಲೇಬೇಕಿದೆ. ವಿಶ್ವಕಪ್‌ಗಳಲ್ಲಿ ಭಾರತ ಎಂದೂ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನಕ್ಕೆ ಸೋತದ್ದೇ




ಇಲ್ಲ. ಆದರೆ ಈ ಬಾರಿ ಇತಿಹಾಸ ತಿರುವು ಮುರುವಾಗಿದೆ. 2007ರಲ್ಲಿ ಬಗ್ಗುಬಡಿದು ಕಪ್ ಗೆದ್ದಿದ್ದ ಟೀಂ ಇಂಡಿಯಾ 2021ರಲ್ಲಿ ಪಾಕ್‌ಗೆ ಶರಣಾಗಿದೆ. ಅದೂ ಕೂಡಾ ಹೀನಾಯ ಸೋಲು. ನಮ್ಮ ಆರಂಭಿಕ ಆಟಗಾರರಾದ ರಾಹುಲ್ ಮತ್ತು ರೋಹಿತ್ ಶರ್ಮಾ ಬೇಗನೆ ನಿರ್ಗಮಿಸಿದಾಗಲೇ ಸೋಲಿನತ್ತ ಭಾರತ ಮುಖಮಾಡಿತ್ತು. ಕೊಹ್ಲಿ ಹೋರಾಟ ನಡೆಸಿದರೂ ಅದು ಸಕಾರಾತ್ಮಕ ಟೀಂ ವರ್ಕ್ ತೋರಲಿಲ್ಲ.

**ಟಿ20 ವಿಶ್ವಕಪ್‌ನಿಂದ ಭಾರತಕ್ಕೆ ಗೇಟ್‌ಪಾಸ್**

ಇನ್ನೂ ಪಾಕಿಸ್ತಾನದ ಪೇಸ್ ಬೌಲರ್ ಶಾಹಿನ್ ಅಫ್ರಿದಿ ಮೊದಲ ಓವರ್‌ನಲ್ಲೇ ಮಿಂಚಿದ್ದು ನಮ್ಮವರನ್ನು ಕಂಗೆಡುವಂತೆ ಮಾಡಿತ್ತು. ಬ್ಯಾಟಿಂಗ್‌ನಲ್ಲಿ ಪಾಕಿಸ್ತಾನಿ ನಾಯಕ ಅಜಂ ಬಾಬಾರ್ ಮತ್ತು ರಿಜ್ವಾನ್ ಅಕ್ಷರಶಃ ಭಾರತದ ಬೌಲರ್‌ಗಳನ್ನು ಬಡಿದಟ್ಟಿದರು. ಗಾಯದ ಮೇಲೆ ಬರೆ ಎಳೆದಂತೆ ನ್ಯೂಜಿಲೆಂಡ್ ಟೀಂ ಕೂಡಾ ಭಾರತದ ಮೇಲೆ ಸವಾರಿ ಮಾಡುವ ಮೂಲಕ ನಮ್ಮವರ ವಿಶ್ವಕಪ್ ಗೆಲ್ಲುವ ಕನಸನ್ನು ದೂರ ಮಾಡಿದ್ದರು. ಇನ್ನೂ ಅಫ್‌ಘಾನಿಸ್ತಾನ ಮತ್ತು ಸ್ಕಾಟ್ಲೆಂಡ್ ಮೇಲೆ ನಮ್ಮವರು ಪೌರುಷ ತೋರಿದರು ಅಷ್ಟರಲ್ಲಿ ಕಪ್ ಗೆಲ್ಲುವ ದಾರಿ ಮಸುಕಾಗಿತ್ತು. ಮೊನ್ನೆ ನ್ಯೂಜಿಲೆಂಡ್ ಟೀಂ ಅಫ್‌ಘಾನಿಸ್ತಾವನ್ನು ಮಣಿಸುವ ಮೂಲಕ ಭಾರತದ ಶವಪೆಟ್ಟಿಗೆಗೆ ಕೊನೆ ಮೊಳೆ ಹೊಡೆಯಿತು. ಔಪಚಾರಿಕ ಪಂದ್ಯದಲ್ಲಿ ಭಾರತ ನಮೀಬಿಯಾ ಮೇಲೆ ಗೆದ್ದಿತಾದರೂ ಅದು ಅಂಕಿಸಂಖ್ಯೆಗಳಿಗೆ ಮಾತ್ರ ಸೀಮಿತವಾಗಿತ್ತಷ್ಟೇ. ನಮ್ಮಲ್ಲಿ ವಿರಾಟ್, ರೋಹಿತ್, ರಾಹುಲ್, ರಿಷಬ್, ಹಾರ್ದಿಕ್ ಪಾಂಡ್ಯಾ, ಜಡೇಜಾ, ಬೂಮ್ರಾ, ಶಮಿ, ಅಶ್ವಿನ್ ಅವರಂತಹ ವಿಶ್ವದರ್ಜೆಯ ಆಟಗಾರರಿದ್ದರೂ ವಿಶ್ವಕಪ್ ನಂತಹ ಪ್ರತಿಷ್ಟಿತ ಟೂರ್ನಿಯಲ್ಲಿ ಹೀನಾಯ ಪ್ರದರ್ಶನ ತೋರಿದ್ದು ಮಾತ್ರ ಅಭಿಮಾನಿಗಳ ಪಾಲಿಗೆ ಅಕ್ಷಮ್ಯ. ನಮ್ಮಲ್ಲಿ ಮರೆವಿನ ರೋಗ ಹೆಚ್ಚಾಗಿರುವ ಕಾರಣ ಆಟಗಾರರ ಎಲ್ಲ ತಪ್ಪುಗಳನ್ನೂ ಕ್ಷಮಿಸಿ ಮತ್ತೊಂದು ಟೂರ್ನಿಗೆ ಸಜ್ಜಾಗುವುದಿದೆ. ಇಲ್ಲಿಯೂ ಹಾಗೇ ಅಗುತ್ತಿದೆ. ಮುಂದೆ ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್ ಸರಣಿ ಶುರುವಾಗಲಿದೆ. ಇದಕ್ಕೆ ನಮ್ಮ ರಾಹುಲ್ ದ್ರಾವಿಡ್ ಹೊಸ ಗುರುವಾಗಿದ್ದಾರೆ. ಇಲ್ಲಾದರೂ ಟೀಂ ಇಂಡಿಯಾ ಯಶಸ್ಸು ಕಂಡು ವಿಶ್ವಕಪ್ ಕರಾಳ ನೆನಪನ್ನು ಮರೆಸುವಂತಾಗಲೆಂದು ಹಾರೈಸೋಣ.

## ಕ್ಯಾಪ್ಟನ್ ಸ್ಥಾನ ತೊರೆದ ಕೊಹ್ಲಿ

ನಾಯಕ ಸ್ಥಾನ ಯಾರಿಗೂ ಶಾಶ್ವತ ಅಲ್ಲವೇ ಅಲ್ಲ. ಎಂಥೆಂತಾ ಆಟಗಾರರು ಟೀಂ ಇಂಡಿಯಾ ಮುನ್ನಡೆಸಿದ್ದಾರೆ. ಇದೀಗ ವಿರಾಟ್‌ಕೊಹ್ಲಿ ಕೂಡಾ ಅಧಿಕೃತವಾಗಿ ಟಿ20 ಜೊತೆಗೆ ಒನ್‌ಡೇ ನಾಯಕತ್ವಕ್ಕೂ ಬೈ ಹೇಳಲಿದ್ದಾರೆ. ಅಷ್ಟೇ ಏಕೆ ಐಪಿಎಲ್‌ನಲ್ಲಿ ಆರ್‌ಸಿಬಿ ಟೀಂ ನಾಯಕತ್ವಕ್ಕೂ ಗುಡ್‌ಬೈ ಹೇಳಿ ಆಗಿದೆ. ತೆರವಾದ ಸ್ಥಾನ ತುಂಬುವಲ್ಲಿ ಮುಂಚೂಣಿ ಹೆಸರು ರೋಹಿತ್ ಶರ್ಮಾ ಅಥವಾ ಕನ್ನಡಿಗ ಕೆ.ಎಲ್. ರಾಹುಲ್. ಇಬ್ಬರೂ ಪ್ರತಿಭಾವಂತರೇ ಆದರೆ ನಾಯಕತ್ವ ಸಿಕ್ಕ ತಕ್ಷಣ ಫಾರ್ಮ್ ಕಳೆದುಕೊಳ್ಳುವ ಚಾಳಿ ಇಬ್ಬರಿಗೂ ಬಾರದಿರಲಿ ಎಂದು ಆಶಿಸೋಣ. ಹೊಸಗುರುವಿನ ಗಡಿಯಲ್ಲಿ ಹೊಸ ನಾಯಕರು ಮಿಂಚಲೆಂದು ಶುಭ ಕೋರೋಣ.






# ಬೆಂಗಳೂರಿನಲ್ಲಿ ಒಂದು ವರ್ಷ ಪ್ರದರ್ಶನಗೊಂಡ ಸ್ಕೂಲ್‌ಮಾಸ್ಟರ್

**ತೆರೆಮರೆ — ಕನ್ನಡ ಚಿತ್ರ ಇತಿಹಾಸ — ಭಾಗ-51**





ಅ.ನಾ.ಪ್ರಹ್ಲಾದರಾವ್
ವಾರ್ತಾ ಇಲಾಖೆ, ನಿವೃತ್ತ ಅಧಿಕಾರಿ

ಸ್ಕೂಲ್ ಮಾಸ್ಟರ್ ಕಪ್ಪು-ಬಿಳುಪು ಸಾಮಾಜಿಕ ಚಿತ್ರ 1958ರಲ್ಲಿ ಪದ್ಮಿನಿ ಪಿಕ್ಚರ್ಸ್ ಲಾಂಛನದಲ್ಲಿ ಬಿಡುಗಡೆಹೊಂದಿತು. ಬಿ.ಆರ್.ಪಂತುಲು ಚಿತ್ರವನ್ನು ನಿರ್ಮಿಸಿ ನಿರ್ದೇಶಿಸಿದರು. ಕೆ.ಸಿಂಗಮುತ್ತು, ಎಸ್.ಆರ್.ಪುಟ್ಟಣ್ಣ, ಷಣ್ಮುಗಂ ಸಹಾಯಕ ನಿರ್ದೇಶಕರಾಗಿದ್ದರು.ಬಿ.ಆರ್.ಪಂತುಲು, ಎಂ.ವಿ.ರಾಜಮ್ಮ, ಢಿಕ್ಕಿಮಾಧವರಾವ್, ಉದಯಕುಮಾರ್, ನರಸಿಂಹರಾಜು, ಸಾಹುಕಾರ್ ಜಾನಕಿ, ಬಿ.ಸರೋಜಾದೇವಿ, ಶಿವಾಜಿ ಗಣೇಶನ್, ಸೂರ್ಯಕುಮಾರ್, ಬಾಲಕೃಷ್ಣ, ವಿಮಲ, ಅನ್ನಪೂರ್ಣಮ್ಮ, ಹೆಚ್.ಆರ್.ಕೃಷ್ಣಶಾಸ್ತ್ರಿ, ಮಹೇಶ್ವರಯ್ಯ, ಚಿ.ಉದಯಶಂಕರ್, ಯು.ಕೆ.ವ್ಯಾಸರಾವ್, ಶಿವಶಂಕರ್, ಗೌತಮ್, ಅನಂತರಾವ್, ರವಿ, ಶ್ರೀನಿವಾಸ್, ಚಂದ್ರಯ್ಯಸ್ವಾಮಿ, ಮಾ.ಗೋಪಾಲ್, ವೆಂಕಟೇಶ್, ಅನಂತರಾಮು, ಪದ್ಮಾವತಿ ಅಭಿನಯಿಸಿದರು.

ಮರಾಠಿ ಭಾಷೆಯಲ್ಲಿನ ಶಿರವಾಡ್ಕರ್ ಅವರ 'ವೈಷ್ಣವಿ' ಕಥೆ ಆಧರಿಸಿ 'ಪದ್ಮನಿಪಿಕ್ಚರ್ಸ್' ಸಾಹಿತ್ಯಶಾಖೆ ಚಿತ್ರಕಥೆ ರಚಿಸಿತು.ಕಣಗಾಲ್ ಪ್ರಭಾಕರಶಾಸ್ತ್ರಿ ಸಂಭಾಷಣೆ ಹಾಗೂ ಗೀತೆಗಳನ್ನು ರಚಿಸಿದರು.ರಾಜಲಕ್ಷ್ಮಿ, ಪಿ.ಲೀಲಾ, ಕೃಷ್ಣವೇಣಿ, ಕೋಮಲ, ಜಮುನಾರಾಣಿ, ಎ.ಎಂ.ರಾಜಾ, ಪಿ.ಸುಶೀಲ, ನಾಗೇಶ್ವರರಾವ್‌ಗೀತೆಗಳನ್ನು ಹಾಡಿದ್ದಾರೆ. ಚಿತ್ರಕ್ಕೆ ಸಂಗೀತ ನೀಡಿರುವ ಟಿ.ಜಿ. ಲಿಂಗಪ್ಪ ಒಂದು ಹಾಡಿಗೂ ದನಿಯಾಗಿದ್ದಾರೆ. ಮದರಾಸಿನ ಭರಣಿ ಹಾಗೂ ಪ್ಯಾರಾಮೌಂಟ್ ಸ್ಟುಡಿಯೊಗಳಲ್ಲಿ ಚಿತ್ರ ಚಿತ್ರೀಕರಣಗೊಂಡಿತು.

ರಾಧಾ ಮಾಧವ ವಿನೋದ ಹಾಸ, ಅತಿ ಮಧುರಾ ಅನುರಾಗ, ಸೊಂಪಾದ ಸಂಜೆ ವೇಳೆ, 'ಭಾಮೆಯ ನೋಡಲು ತಾ ಬಂದ, ಸ್ವಾಮಿ ದೇವನೆ ಲೋಕ ಪಾಲನೆ, ನಾನು ನೀನು ಜೋಡಿ, ಇನ್ನೇನು ಆನಂದ ಬೇಕಾಗಿದೆ ಮುಂತಾದ ಎಂಟು ಮಧುರ ಗೀತೆಗಳನ್ನು ಚಿತ್ರದಲ್ಲಿ ಅಳವಡಿಸಲಾಗಿದೆ. ಈ ಚಿತ್ರ ಬೆಂಗಳೂರಿನಲ್ಲಿ ಸತತ 25 ವಾರಗಳು ಪ್ರದರ್ಶನಗೊಂಡಿತು.ಸಂಯೋಜಿತವಾಗಿ 56 ವಾರಗಳು ಪ್ರದರ್ಶನಗೊಂಡು ಆ ಕಾಲಕ್ಕೆ ದಾಖಲೆ ಸ್ಥಾಪಿಸಿತು.ಚಿಕ್ಕ ಪಾತ್ರವೊಂದರಲ್ಲಿ ತಮಿಳಿನ ಖ್ಯಾತ ನಟ ಶಿವಾಜಿ ಗಣೇಶನ್ ಅಭಿನಯಿಸಿದರು.

ಹಿರಿಯ ಲೇಖಕ ಡಿವಿಜಿಯವರ ಸಲಹೆಯಿಂದಾಗಿ ಕನ್ನಡದಲ್ಲಿ 'ಸ್ಕೂಲ್ ಮಾಸ್ಟರ್' ಚಲಚಿತ್ರ ವಿಕಸನಗೊಳ್ಳಲು ಕಾರಣವಾಯಿತು.1934ರಲ್ಲಿ ಕನ್ನಡದ ಮೊದಲ ಚಿತ್ರ 'ಸತಿ ಸುಲೋಚನ' ಬಿಡುಗಡೆಯಾದ ನೆನಪಿನಲ್ಲಿ 1958ರಲ್ಲಿ ಕನ್ನಡ ಚಿತ್ರರಂಗದ ರಜತ ಮಹೋತ್ಸವ ಬೆಂಗಳೂರಿನಲ್ಲಿ ನಡೆಯಿತು. ಕನ್ನಡದ ಪ್ರಖ್ಯಾತ ಲೇಖಕರಾದ ಡಿ.ವಿ.ಗುಂಡಪ್ಪನವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. "ಕನ್ನಡ ಚಿತ್ರರಂಗದ ಈ ಬೆಳ್ಳಿಹಬ್ಬ ಅರ್ಥಪೂರ್ಣವಾಗಬೇಕಾದರೆ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಬಲ್ಲಂತಹ ಅತ್ಯುತ್ತಮ ಕನ್ನಡ ಚಿತ್ರವೊಂದನ್ನು ರೂಪಿಸಲು ಮುಂದಾಗಬೇಕು, ನಿರ್ಮಾತೃ ಪಂತಲು ಇಲ್ಲಿದ್ದಾರೆ, ಅವರು ಈ ಬಗ್ಗೆ ಯೋಚಿಸಲಿ" ಎಂದರು. ಒಂದು ಮಹಾನ್ ಚಿತ್ರವನ್ನು ರಜತಪರದೆಗೆ ತರುವ ನಿಶ್ಚಯ ಬೆಂಗಳೂರಿನಲ್ಲಿ ನಡೆದ ಕನ್ನಡ ಚಲನಚಿತ್ರರಂಗದ ರಜತ ಮಹೋತ್ಸವ ಸಂದರ್ಭದಲ್ಲಿ ಪಂತುಲು ಅವರಲ್ಲಿ ಆವಿರ್ಭವಿಸಿತು.ಡಿ.ವಿ.ಜಿಯವರ ಆಶಯದಂತೆ ಪಂತುಲು ಅವರು 'ಸ್ಕೂಲ್ ಮಾಸ್ಟರ್' ಚಿತ್ರವನ್ನು ಸಿದ್ಧಪಡಿಸಿ, ಕನ್ನಡ ಚಿತ್ರರಂಗದ ರಜತ ವರ್ಷದಲ್ಲೇ ಬಿಡುಗಡೆ ಮಾಡಿದ್ದು ಒಂದು ವಿಶೇಷವಾಯಿತು.ಈ ಚಿತ್ರದ ರಜತಮಹೋತ್ಸವ ಸಮಾರಂಭವನ್ನು ಬೆಂಗಳೂರಿನ ಮೆಜೆಸ್ಟಿಕ್ ಪ್ರದೇಶದಲ್ಲಿದ್ದ ಗೀತಾ ಚಿತ್ರಮಂದಿರದಲ್ಲಿ ಏರ್ಪಡಿಸಲಾಗಿತ್ತು. ಅಂದಿನ ಮುಖ್ಯಮಂತ್ರಿಎಸ್.ನಿಜಲಿಂಗಪ್ಪನವರು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.




ಕೇಂದ್ರ ಸರ್ಕಾರ 1958ರ ರಾಷ್ಟ್ರೀಯ ಪ್ರಶಸ್ತಿಗಳಲ್ಲಿ 'ಸ್ಕೂಲ್‌ಮಾಸ್ಟರ್' ಚಿತ್ರವನ್ನು ಅಖಿಲ ಭಾರತ ಮಟ್ಟದಲ್ಲಿ ಮೂರನೆ ಅತ್ಯುತ್ತಮ ಪ್ರಾದೇಶಿಕ ಚಿತ್ರ ಎಂದು ಪರಿಗಣಿಸಿ ರಾಷ್ಟ್ರಪತಿಗಳ ಬೆಳ್ಳಿಪದಕ ಹಾಗೂ ಪ್ರಶಸ್ತಿಪತ್ರ ನೀಡಿ ಗೌರವಿಸಿತು.1958ರ ಏಪ್ರಿಲ್ 28ರಂದು ನವದೆಹಲಿಯ ವಿಜ್ಞಾನಭವನದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಂತುಲು ಭಾಗವಹಿಸಿ ಬಹಳ ವಿನೀತ ಭಾವದಿಂದ ಭಾರತದ ಪ್ರಥಮ ರಾಷ್ಟ್ರಪತಿಗಳಾಗಿದ್ದ ಬಾಬು ರಾಜೇಂದ್ರಪ್ರಸಾದ್ ಅವರಿಂದ ಪ್ರಶಸ್ತಿ ಸ್ವೀಕರಿಸಿದರು.ಈ ಅಪೂರ್ವ ಸಮಾರಂಭದಲ್ಲಿ ನಿಂತು ಪ್ರಶಸ್ತಿ ನೀಡುತ್ತಿದ್ದ ರಾಷ್ಟ್ರಪತಿಗಳ ಪಕ್ಕದಲ್ಲಿ ಭಾರತದ ಪ್ರಥಮ ಪ್ರಧಾನಮಂತ್ರಿಗಳಾಗಿದ್ದ ಪಂಡಿತ್ ಜವಹರಲಾಲ್ ನೆಹರು ಆಸೀನರಾಗಿದ್ದರು.ಪಂತುಲು ಪ್ರಶಸ್ತಿ ಪಡೆಯುವಾಗ ಅವರ



ಸೌಜನ್ಯವನ್ನು ಕಂಡ ನೆಹರು ಕುಳಿತ ಕಡೆಯಿಂದಲೇ ಎರಡೂ ಕೈ ಮುಗಿದು ತಮ್ಮ ಕೃತಜ್ಞತೆಗಳನ್ನು ಅರ್ಪಿಸಿದರು.

ಸೊಸಲೆ ಅಯ್ಯಾಶಾಸ್ತ್ರಿಗಳು ರಚಿಸಿದ 'ಸ್ವಾಮಿ ದೇವನೆ ಲೋಕಪಾಲನೆ ತೇ ನಮೋಸ್ತು ನಮೋಸ್ತುತೆ' ಗೀತೆಯನ್ನು ಶಾಲಾ ಪ್ರಾರ್ಥನ ಗೀತೆಯನ್ನಾಗಿಬಳಸಿಕೊಳ್ಳಲಾಯಿತು.ಕಣಗಾಲ್ ನಿರ್ದೇಶಿಸಿದರು.ಪಂತುಲು ಅವರೇ ಹಿಂದಿ ಭಾಷೆಯಲ್ಲಿ ನಿರ್ಮಿಸಿ ನಿರ್ದೇಶಿಸಿದರು.ತೆಲುಗಿನಲ್ಲಿ 'ಬಡಿಪಂತುಲು' ಹಾಗೂ ತಮಿಳಿನಲ್ಲಿ 'ಎಂಗಳ್ ಕುಡುಂಬಂ ಪೆರಿಸು' ಹೆಸರುಗಳಿಂದ ಕನ್ನಡದಿಂದ ಡಬ್ ಆಯಿತು.

# ನಿಮ್ಮ ಮಾತು

### ಪುನಿತ್ ಬಗ್ಗೆ ಸಮಗ್ರವಾಗಿ ಪರಿಚಯಿಸಲಾಗಿದೆ

ಪುನಿತ್ ರಾಜ್‌ಕುಮಾರ್ ಅವರ ವಿಶೇಷ ಸಂಚಿಕೆಯಲ್ಲಿ ಅ.ನಾ ಪ್ರಹ್ಲಾದ್ ರಾವ್ ಬರೆದ 'ಮಾನವೀಯ ಮೌಲ್ಯಗಳನ್ನು ರೂಢಿಸಿಕೊಂಡಿದ್ದ ಅಪ್ಪು' ಲೇಖನ ಪುನೀತ್ ರಾಜಕುಮಾರ್‌ಅವರ ಸಾಮರ್ಥ್ಯ, ಸಾಧನೆ, ಸಿದ್ಧಿ ಮತ್ತು ಬದ್ಧತೆಯನ್ನು ಸಮಗ್ರವಾಗಿ ಪರಿಚಯಿಸಿದೆ.

●ಎನ್.ಭೃಂಗೀಶ್ ನಿರ್ದೇಶಕರು(ನಿ), ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಸರ್ಕಾರ.

### ತುಂಬಾ ಚೆನ್ನಾಗಿ ಮೂಡಿ ಬಂದಿದೆ

ಪುನಿತ್ ರಾಜ್ ಕುಮಾರ್ ಕುರಿತ ವಿಶೇಷ ಸಂಚಿಕೆ ಅದ್ಬುತವಾಗಿದೆ ಹಿರಿಯ ಪತ್ರಕರ್ತರಾದ ಗಣೇಶ್ ಕಾಸರಗೂಡು,ಶಶಿಧರ್ ಭಟ್, ಸದಾಶಿವ ಶಣೈ. ಅ.ನಾ.ಪ್ರಹ್ಲಾದ್ ರಾವ್ ಅವರ ಲೇಖನಗಳು ಮನಮಿಡಿಯುವಂತಿದ್ದವು .ಅವರ ಅನುಭವಗಳು ಮತ್ತು ಪುನಿತ್ ಸಾಧನೆ ಅವರ ಸರಳತೆಯ ಕುರಿತು ಬರೆದ ಲೇಖನಗಳು ನಿಜಕ್ಕೂ ಚೆನ್ನಾಗಿವೆ. ಇಂತ ವಿಶೇಷ ಸಂಚಿಕೆ ತರುವ ಮೂಲಕ ಪತ್ರಿಕೋದ್ಯಮದ ಒಂದು ಸಾಧನೆಯೇ ಸರಿ ಎಂದು ಭಾವಿಸಿದ್ದೇನೆ ನಿಮ್ಮ ಪ್ರಯತ್ನಕ್ಕೆ ನನ್ನ ಧನ್ಯವಾದಗಳು

●ಚಂದ್ರಶೇಖರ್.ಬಿ.ಎಲ್ ಹಾವೇರಿ.

### ಚೆನ್ನಾಗಿದೆ ಲೇಖನ

ಪುನೀತ್ ಅವರು ನಟಿಸಿರುವ ಚಿತ್ರಗಳು ಹಾಗು ಸಮಾಜ ಸೇವಾ ಕಾರ್ಯಗಳ ಬಗ್ಗೆ ಅ. ನ.ಪ್ರಹ್ಲಾದ್‌ರಾವ್ ಲೇಖನದಲ್ಲಿ ಸಂಕ್ಷಿಪ್ತವಾಗಿ ಮೂಡಿ ಬರೆದಿದ್ದಾರೆ ಹಾಗೆ ಅವರ ಮಾನವೀಯ ಗುಣಗಳನ್ನು ಪರಿಚಯಿಸಿದ್ದೀರಿ ಅಭಿನಂದನೆಗಳು ಸಾರ್.

●ಲಿಂಗಣ್ಣ, ಪತ್ರಕರ್ತರು, ಮಂಡ್ಯ

### ನಿಮ್ಮ ಪರಿಶ್ರಮವನ್ನು ಮೆಚ್ಚಲೇ ಬೇಕು

ನವೆಂಬರ್ 4 ಪುನೀತ್ ರಾಜ್ ಕುಮಾರ್ ಅವರ ವಿಶೇಷ ಸಂಚಿಕೆ ಎಲ್ಲರ ಗಮನ ಸೆಳೆಯುವಂತಿದ್ದವು. ಹಿರಿಯ ಪತ್ರಕರ್ತರ ಅನುಭವಗಳು ಮತ್ತು ಪುನಿತ್ ಅಳವಡಿಸಿಕೊಂಡಿದ್ದ ಸರಳತೆಯನ್ನು ಅವರು ಬರೆದ ಲೇಖನಗಳು ಮನಮುಟ್ಟುವಂತಿದ್ದವು. ಇಂತ ವಿಶೇಷ ಸಂಚಿಕೆ ಮೂಲಕ ಪತ್ರಿಕೆ ಮತ್ತಷ್ಟು ಜನಪ್ರಿಯವಾಗುತ್ತಿದೆ ಬಹುಶಃ ನಾನು ಗಮನಿಸಿದಂತೆ ಉತ್ತಮ ವಾರಪತ್ರಿಕೆಗಳೇ ಇಲ್ಲದ ಈ ಸಂದರ್ಭದಲ್ಲಿ ನಿಮ್ಮ ಕೆಂಧೂಳಿ ನಿಜಕ್ಕೂ ನಿಮ್ಮ ಇಂತ ಪ್ರಯತ್ನಗಳನ್ನು ಮೆಚ್ಚುವಂತದ್ದೆ. ನಿಮ್ಮ ಈ ಪ್ರಯತ್ನಕ್ಕೆ ಶುಭವಾಗಲಿ ಪತ್ರಿಕೆ ಮತ್ತಷ್ಟು ಮುನ್ನಡೆಯಲಿ ಎಂದು ಆಶಿಸುತ್ತೇನೆ

●ಹಾಲಪ್ಪ ವೈ.ಟಿ ವಿಜಯಪುರ



# ಪ್ರೇಕ್ಷಕರ ಮನಗೆದ್ದ ಟಾಮ್ ಅಂಡ್ ಜೆರ್ರಿ ಚಿತ್ರದ ಹಾಡು



ರಾಘವ್ ವಿನಯ್ ಶಿವಗಂಗೆ ಮೊದಲ ಬಾರಿ ನಿರ್ದೇಶಕನಾಗಿ ಬಡ್ತಿ ಹೊಂದಿರುವ ಸಿನಿಮಾ ಟಾಮ್ ಅಂಡ್ ಜೆರ್ರಿ. ಚಿತ್ರದ ಎರಡು ಹಾಡುಗಳ ಮೂಲಕ ಪ್ರೇಕ್ಷಕರಲ್ಲಿ ಸಿನಿಮಾ ನೋಡುವ ಬಯಕೆ ಸೃಷ್ಟಿಸಿದ್ದ ಈ ಚಿತ್ರತಂಡವೀಗ ಭರವಸೆಯ ಹಾಗೂ ಫ್ರೆಶ್ ಎನಿಸುವ ಟ್ರೇಲರ್ ತುಣುಕನ್ನು ಬಿಡುಗಡೆ ಮಾಡಿ ಎಲ್ಲರ ಹುಬ್ಬೇರುವಂತೆ ಮಾಡಿದೆ. ಏನೋ ಹೊತನವಿದೆ, ಚಿತ್ರತಂಡ ಹೊಸತೇನೋ ಪ್ರಯತ್ನ ಪಟ್ಟಿದೆ ಎಂಬುದನ್ನು ಟ್ರೇಲರ್ ನೋಡಿದ ಮೊದಲ ಬಾರಿಗೆ ಅನ್ನಿಸದೇ ಇರದು. ಅದಕ್ಕೆ ಸಾಕ್ಷಿ ಎನ್ನುವಂತೆ ಬಿಡುಗಡೆಯಾದ ಕೆಲವೇ ಗಂಟೆಗಳಲ್ಲಿ ಒಂದು ಮಿಲಿಯನ್ನೂ ಅಧಿಕ ವೀವ್ಸ್ ಪಡೆದುಕೊಂಡಿದೆ. ಅಷ್ಟೇ ಅಲ್ಲ ಕಮೆಂಟ್ ಸೆಕ್ಷನ್ ನಲ್ಲಿ ಚಿತ್ರದ ಮೇಕಿಂಗ್, ಹೊಸತನದ ಬಗ್ಗೆ ಮೆಚ್ಚುಗೆ ಮಾತುಗಳು ಕೇಳಿ ಬರ್ತಿದ್ದು, ಸಾಮಾಜಿಕ ಜಾಲತಾಣಗಳಲ್ಲೂ ಟ್ರೇಲರ್ ತುಣುಕಿನಲ್ಲಿರುವ ಡೈಲಾಗ್ ಗಳು ಸಖತ್ ವೈರಲ್ ಆಗುತ್ತಿವೆ, ಮೆಚ್ಚುಗೆ ಗಳಿಸಿಕೊಳ್ಳುತ್ತಿವೆ. ಟಾಮ್ ಅಂಡ್ ಜೆರ್ರಿಯಂತೆ ಕಿತ್ತಾಡೋ ಸ್ನೇಹಿತರ ತರಲೆ ತುಂಟಾಟ ಒಂದು ಕಡೆಯಾದ್ರೆ, ಬದುಕಿನ ಬಗ್ಗೆ ಸ್ವಾರಸ್ಯಕರವಾದ ಸತ್ಯಾಸತ್ಯತೆಯನ್ನೇನೋ ಹೇಳ ಹೊರಟಿದೆ ಎನ್ನುವುದರ ಸುಳಿವನ್ನೂ ಟ್ರೇಲರ್ ನೀಡಿದೆ. ಬಿಡುಗಡೆಗೆ ಸಕಲ ಸಿದ್ಧವಾಗಿ ನಿಂತಿರುವ ಸಿನಿಮಾ ನಿರ್ದೇಶಕ ರಾಘವ್ ವಿನಯ್ ಶಿವಗಂಗೆ ಕನಸಿನ ಸಿನಿಮಾವಾಗಿದೆ. ಚಿತ್ರಕ್ಕೆ ಗಂಟುಮೂಟೆ ಖ್ಯಾತಿಯ ನಿಶ್ಚಿತ್ ಕೊರೋಡಿ, ಜೋಡಿಹಕ್ಕಿ ಖ್ಯಾತಿಯ ಚೈತ್ರಾ ರಾವ್ ನಾಯಕ ಹಾಗೂ ನಾಯಕಿ. ಟ್ರೇಲರ್ ಹಾಗೂ ಹಾಡುಗಳ ಮೂಲಕ ಈ ಇಬ್ಬರ ಕಾಂಬಿನೇಶನ್ ಸಖತ್ ಮೋಡಿ ಮಾಡಿದ್ದು, ಪೂರ್ಣ ಪ್ರಮಾಣದಲ್ಲಿ ಈ ಜೋಡಿಯನ್ನು ಸ್ಕ್ರೀನ್ ಮೇಲೆ ಕಾಣಲು ಕಾತರರಾಗಿದ್ದಾರೆ ಚಿತ್ರ ಪ್ರೇಮಿಗಳು. ಚಿತ್ರಕ್ಕೆ ರಿದ್ಧಿ ಸಿದ್ಧಿ ಫಿಲಂಸ್ ಬ್ಯಾನರ್ ನಡಿ ನಿರ್ಮಾಪಕ ರಾಜು ಶೇರಿಗಾರ್ ಹಾಗೂ ಕಾರ್ಯಕಾರಿ ನಿರ್ಮಾಪಕರಾಗಿ ವಿನಯ್ ಚಂದ್ರ ಬಂಡವಾಳ ಹಾಕಿ ನಿರ್ಮಾಣ ಮಾಡಿದ್ದಾರೆ.

# ಎಣ್ಣೆ ಬಾಟಲಿ ಹಿಡಿದು ಹಾಡಿದ ರಚಿತಾ



ಲವ್ ಯು ರಚ್ಚು ಚಿತ್ರದ ಹಾಡಿನ ಕಥೆ ಒಂದಾದರೆ, ಏಕ್ ಲವ್ ಯಾ ಸಿನಿಮಾದ ಹಾಡಿನ ಕಥೆಯೇ ಬೇರೆ. ಈ ಎಣ್ಣೆ ಹಾಡಿನ ಝಲಕ್ ರಿಲೀಸ್ ಆಗಿದೆ. ಹಾಡಿನ ಈ ಸಣ್ಣ ತುಣುಕಿನಲ್ಲಿ ರಚಿತಾ ರಾಮ್ ಕೈಯಲ್ಲಿ ಎಣ್ಣೆ ಬಾಟಲಿ ಹಿಡಿದು "ಎಣ್ಣೆಗೂ ಹೆಣ್ಣಿಗೂ ಎಲ್ಲಿಂದ ಲಿಂಕ್ ಇಟ್ಟೆ ಹೇಳೊ ಭಗವಂತ" ಅಂತ ಹಾಡಿದ್ದಾರೆ. ಈ ಹಿಂದೆ ಇದೇ ಚಿತ್ರದ ಪೋಸ್ಟರ್ ಒಂದರಲ್ಲಿ ರಚಿತಾ ರಾಮ್ ಕೈಯಲ್ಲಿ ಸಿಗರೇಟ್ ಹಿಡಿದು ಹೊಗೆ ಬಿಡುವ ಲುಕ್‌ನಲ್ಲಿ ಕಾಣಿಸಿ ಕೊಂಡಿದ್ದರು. ಈಗ ಕೈಯಲ್ಲಿ ಎಣ್ಣೆ ಬಾಟೆಲ್ ಹಿಡಿದು ಹಾಡುತ್ತಿದ್ದಾರೆ. ರಚಿತಾರ ಈ ಹಾಡು ಮಾಲಶ್ರೀ ಅವರ ಒಳಗೆ ಸೇರಿದರೆ ಗುಂಡು ಹಾಡನ್ನು ನೆನಪಿಸುತ್ತದೆ. ಯಾಕೆಂದರೆ ಎಣ್ಣೆ ಹಾಡು ಅಂತ ಬಂದಾಗ, ಅಲ್ಲಿ ನಾಯಕರೇ ಪ್ರಧಾನ ಆಗಿರುತ್ತಾರೆ. ನಾಯಕಿಯರಿಗಾಗಿ ಎಣ್ಣೆ ಹಾಡು ಬರುವುದು ಅತಿ ಅಪರೂಪ. ಈ ಹಾಡಿಗೆ ಧ್ವನಿ ಆಗಿದ್ದಾರೆ ಗಾಯಕಿ ಮಂಗ್ಲಿ. ರಾಬರ್ಟ್ ಸಿನಿಮಾದ ಕಣ್ಣೇ ಅದಿರಿಂದಿ ಹಾಡಿನ ಮೂಲಕ ಕನ್ನಡ ಪ್ರೇಕ್ಷಕರ ಮನ ಗೆದ್ದ ಮಂಗ್ಲಿ ಸಾಲು ಸಾಲು ಕನ್ನಡ ಸಿನಿಮಾಗಳಲ್ಲಿ ಹಾಡುತ್ತ ಇದ್ದಾರೆ. ಈಗ ಈ ಎಣ್ಣೆ ಹಾಡಿಗೂ ಧ್ವನಿ ನೀಡಿದ್ದು, ರಚಿತಾ ರಾಮ್ ಸ್ಟೆಪ್‌ಗೆ ಮಂಗ್ಲಿ ಧ್ವನಿ ಸೇರಿಕೊಂಡು ಹಾಡಿನ ರಂಗು ಹೆಚ್ಚಿಸಿದೆ. ನವೆಂಬರ್ 12ಕ್ಕೆ ಈ ಹಾಡಿನ ಸಂಪೂರ್ಣ ವಿಡೀಯೋ ರಿಲೀಸ್ ಆಗಲಿದೆ. ಏಕ್ ಲವ್ ಯಾ ಚಿತ್ರದಲ್ಲಿ ನಟಿ ರಕ್ಷಿತಾ ಅವರ ಸಹೋದರ ರಾಣ ಅಭಿನಯಿಸುತ್ತಿದ್ದು, ರಚಿತಾ ರಾಮ್, ರೀಷ್ಮ ನಾನಯ್ಯ ನಾಯಕಿಯರಾಗಿ ಅಭಿನಯಿಸಿದ್ದಾರೆ. ಅರ್ಜುನ್ ಜನ್ಯ ಸಂಗೀತ ಚಿತ್ರಕ್ಕಿದೆ. ನಿರ್ದೇಶಕ ಪ್ರೇಮ್ ಸಿನಿಮಾವನ್ನು ನಿರ್ದೇಶನ ಮಾಡಿದ್ದಾರೆ. ನಟಿ ರಕ್ಷಿತಾ ತಾವೇ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

# ಕಸ್ತೂರ್ ಬಾ ಪಾತ್ರದಲ್ಲಿ ಹರಿಪ್ರಿಯಾ

ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ತಾಯಿ ಕಸ್ತೂರ್ ಗಾಂಧಿ' ಸಿನಿಮಾದಲ್ಲಿ ನಟಿ ಹರಿಪ್ರಿಯಾ ಕಸ್ತೂರ್ ಬಾ ಗಾಂಧಿ ಪಾತ್ರದಲ್ಲಿ ನಟಿಸಿದ್ದಾರೆ. ಸಿನಿಮಾದ ಚಿತ್ರೀಕರಣ ಮುಗಿದಿದ್ದು, ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಚಿತ್ರತಂಡವು ಹರಿಪ್ರಿಯಾರ ಕಸ್ತೂರ್ ಬಾ ಪಾತ್ರದ ಕೆಲವು ಚಿತ್ರಗಳನ್ನು ಹಂಚಿಕೊಂಡಿದೆ.



ಕಸ್ತೂರ್ ಬಾ ಗಾಂಧಿಯ ಜೀವನದ ಕೆಲವು ಪ್ರಮುಖ ಕಾಲಘಟ್ಟಗಳು ಆಯಾ ಕಾಲಘಟ್ಟದಲ್ಲಿ ಅವರ ವ್ಯಕ್ತಿತ್ವ, ಮನಸ್ಥಿತಿ, ಗಾಂಧಿ ಅವರೊಟ್ಟಿಗಿನ ಸಂಬಂಧ ಇನ್ನಿತರೆ ವಿಷಯಗಳನ್ನು ಸಿನಿಮಾ ಒಳಗೊಂಡಿರಲಿದೆ. ಕಸ್ತೂರ್ ಬಾ ಅವರ ಯೌವನ, ಮಧ್ಯ ವಯಸ್ಕ, ವೃದ್ಧ ಕಾಲಘಟ್ಟದ ಪಾತ್ರಗಳಲ್ಲಿ ಹರಿಪ್ರಿಯಾ ನಟಿಸಿದ್ದಾರೆ.

'ಇದೆಲ್ಲ ಸಾಧ್ಯವಾಗಿದ್ದು ಬರಗೂರು ರಾಮಚಂದ್ರಪ್ಪನವರು ತಮ್ಮ ಕಾದಂಬರಿ 'ಕಸ್ತೂರ್ ಬಾ / ಗಾಂಧಿ' ಕಾದಂಬರಿಯನ್ನು ನನ್ನ ಕೈಗೆ ಕೊಟ್ಟಾಗ. ನಾನು ಪುಸ್ತಕ ಓದಿದೆ ಮತ್ತು ಅದು ನನಗೆ ಬಹಳ ಇಷ್ಟವಾಯಿತು. ಪುಸ್ತಕದ ಬಗ್ಗೆ ನಾನು ಬರಗೂರು ಅವರ ಬಳಿ ಮಾತನಾಡಿದೆ ಆಗ ಗೊತ್ತಾಯಿತು ಅವರು ಅದನ್ನು ಸಿನಿಮಾ ಮಾಡುವ ಯೋಜನೆಯಲ್ಲಿದ್ದಾರೆಂದು. ಅವರು ನಾನೇ ಈ ಪಾತ್ರ ಮಾಡಬೇಕು ಎಂದು ಹೇಳಿದರು. ಅದು ನನಗೂ ಸಂತೋಷ ನೀಡಿತು'' ಎಂದು ಪಾತ್ರ ತಮಗೆ ದಕ್ಕಿದ್ದು ಹೇಗೆಂಬ ಮಾಹಿತಿ ಹಂಚಿಕೊಂಡಿದ್ದಾರೆ ಹರಿಪ್ರಿಯಾ. ''ದೊಡ್ಡ ನಿರ್ದೇಶಕರೊಬ್ಬರು ಪಾತ್ರವೊಂದಕ್ಕೆ ನಾನೇ ಆಗಬೇಕು ಎಂದು ಕೇಳಿದ್ದು ನನ್ನ ಸುಕೃತ ಎಂದುಕೊಂಡು ಪಾತ್ರದಲ್ಲಿ ನಟಿಸಲು ಒಪ್ಪಿಕೊಂಡೆ. ಇದು ಬಹಳ ದೊಡ್ಡ ಜವಾಬ್ದಾರಿ. ಈ ಪಾತ್ರ ನನಗೆ ಸಿಕ್ಕಿದ್ದು ನನ್ನ ಪುಣ್ಯವೆಂದೇ ಭಾವಿಸಿದ್ದೇನೆ. ನನ್ನನ್ನು ಪಾತ್ರಕ್ಕೆ ಆಯ್ಕೆ ಮಾಡಿಕೊಂಡಿದ್ದಕ್ಕೆ ಬರಗೂರು ರಾಮಚಂದ್ರಪ್ಪನವರಿಗೆ ಧನ್ಯವಾದವನ್ನು ಹೇಳಿದ್ದೇನೆ'' ಎಂದಿದ್ದಾರೆ ಹರಿಪ್ರಿಯಾ.






# ಒಪ್ಪಂದ ಹಾಡುಗಳ ಬಿಡುಗಡೆ

ಬಹುಭಾಷಾ ನಟ ಅರ್ಜುನ್ ಸರ್ಜಾ, ರಾಧಿಕಾ ಕುಮಾರಸ್ವಾಮಿ ಹಾಗೂ ಖ್ಯಾತ ನಟ ಜೆ ಡಿ ಚಕ್ರವರ್ತಿ ಪ್ರಮುಖಪಾತ್ರದಲ್ಲಿ ನಟಿಸಿರುವ "ಒಪ್ಪಂದ" ಚಿತ್ರದ ಹಾಡುಗಳ ಬಿಡುಗಡೆ ಸಮಾರಂಭ ಇತ್ತೀಚೆಗೆ ನೆರವೇರಿತು. ಇದೇ ಸಂದರ್ಭದಲ್ಲಿ ಟ್ರೇಲರ್ ಸಹ ಅನಾವರಣಗೊಂಡಿತು.

ನಿರ್ಮಾಪಕರಾದ ರೆಹಮಾನ, ಕೆ.ಮಂಜು, ಸೆವೆನ್ ರಾಜ್, ಫ್ಯಾಷನ್ ಡಿಸೈನರ್ ರಾಜೇಶ್ ಶೆಟ್ಟಿ, ಭವ್ಯಗೌಡ, ಮೋಹಿನಿ ಚೌಧರಿ



ಮುಂತಾದ ಗಣ್ಯರು ಈ ಸಮಾರಂಭಕ್ಕೆ ಆಗಮಿಸಿ ಹಾಡುಗಳನ್ನು ಬಿಡುಗಡೆ ಮಾಡಿ ಶುಭ ಕೋರಿದರು.

ಈ ಚಿತ್ರ ಉತ್ತಮವಾಗಿ ಮೂಡಿಬರಲು ಅರ್ಜುನ್ ಸರ್ಜಾ, ಜೆ ಡಿ ಚಕ್ರವರ್ತಿ ಹಾಗೂ ರಾಧಿಕಾ ಕುಮಾರಸ್ವಾಮಿ ಅವರ ಸಹಕಾರ ಬಹಳ ಮುಖ್ಯ. ಅವರೆಲ್ಲರೂ ಚಿತ್ರದಲ್ಲಿ ಅಮೋಘವಾಗಿ ನಟಿಸಿದ್ದಾರೆ. ನಾಲ್ಕು ಭಾಷೆಗಳಲ್ಲಿ ಈ ಸಿನಿಮಾ ನಿರ್ಮಾಣವಾಗಿದೆ. ಇದೇ ತಿಂಗಳಲ್ಲಿ ಚಿತ್ರ ತೆರೆಗೆ ಬರಲಿದೆ ಎಂದು ಚಿತ್ರದ ನಿರ್ಮಾಪಕ ಹಾಗೂ ನಿರ್ದೇಶಕ ಸಮೀರ್ ತಿಳಿಸಿದರು.

ಅರ್ಜುನ್ ಸರ್ಜಾ ಅವರು ವಿಡಿಯೋ ಮೂಲಕ ಚಿತ್ರತಂಡಕ್ಕೆ ಶುಭಕೋರಿದರು. ಸಮೀರ್ ಅವರೇ ನಿರ್ಮಿಸಿ, ನಿರ್ದೇಶಿಸಿರುವ ಈ ಚಿತ್ರಕ್ಕೆ ಅಮೀರ್ ಲಾಲ್ ಛಾಯಾಗ್ರಹಣ, ಸುಭಾಷ್ ಆನಂದ್ ಸಂಗೀತ ನಿರ್ದೇಶನ, ರಾಘು ಕುಲಕರ್ಣಿ ಕಲಾ ನಿರ್ದೇಶನ, ಅಮ್ಮ ರಾಜಶೇಖರ್ ನೃತ್ಯ ನಿರ್ದೇಶನ, ಖಾಲಿ ಕಿಕಾಸ್ ಸಾಹಸ ನಿರ್ದೇಶನ ಹಾಗೂ ಪ್ರಭು ಅವರ ಸಂಕಲನವಿದೆ.ಅರ್ಜುನ್ ಸರ್ಜಾ, ರಾಧಿಕಾ ಕುಮಾರಸ್ವಾಮಿ, ಜೆ.ಡಿ.ಚಕ್ರವರ್ತಿ, ಅಮೀರ್ ಖಾನ್ ಸಹೋದರ ಫೈಸಲ್ ಖಾನ್, ಸೋನಿ ಚರಿಷ್ಟಾ, ವಿಶ್ವನಾಥ್ ಮುಂತಾದವರು ತಾರಾಬಳಗದಲ್ಲಿದ್ದಾರೆ.

KENDHOOLI, Kannada Weekly Printed by, Published by, Owned by & Edited by: T MANJUNATHA, DS MAX SAVVY APARTMENT, PLOT NO 202,2ND FLOOR, JP NAGARA 9TH PHASE, AMRUTHNAGARA MAIN ROAD, ANJANAPURA BANGALORE 560108
Printed at : Brundavan printers, 88/1 1st cross, sameerpura road, Kg nagara Bengaluru-560019
Mob: +91 99161 91222. email: kendhooli18@gmail.com
The Editor is Responsible for selection of news under the PRB Act